[MR. SPEAKER]

of this committee all relevant particulars and also statistics pertaining to tenancy in several parts of the integrated State?"

The question put by the Hon'ble Member Sri M. C. Narasimhan reads as follows:

"Is any statistical material supplied to the Committee which will be the basis for fixing the ceiling?"

The supplementary that was put by my Hon'ble friend Sri Narasimhan was allowed and the supplementary that was put by my Hon'ble friend Sri H. M. Channabasappa was not allowed. He was arguing that his question and the question put by the Hon'ble Member Sri Narasimhan were the same. I find that they are different. If it is the opinion of the Hon'ble Member Sri H. M. Channabasappa that the Chair ought to have allowed his question, that is a different matter. But I can say that the two questions are different.

Sri H. M. CHANNABASAPPA (Krishnarajanagar).—I beg to submit, Sir, I put two questions. The Chair was pleased to say that I put a question.

Mr. SPEAKER.—The records as they are, show that there is only one question.

Sri U. M. MADAPPA (Chamarajanagar).—May I know whether this question has come up before this House?

Mr. SPEAKER.—It is only with regard to the point raised bv my Hon'ble friend Shri H. M. Channabasappa.

Sri U. M. MADAPPA.—Was it not the practice of this House thatall these were put in writing by the Speaker and it was the practice of this House to announce?

Mr. SPEAKER.—Sri H. M. Channabasappa had raised a point of order and I had reserved ruling on that point subsequently.

PAPER LAID ON THE TABLE.

Sri B. VAIKUNTA BALIGA (Minister for Labour and Legal Affairs).—Sir, I beg to lay on the Table of the House, the Industrial Disputes (Mysore) Rules, 1957, issued under Section 38 of the Industrial Disputes Act, 1947 (Central Act XIV of 1947).

Sri B. RACHIAH (Chamarajanagar).—There are certain questions left over in the previous list the other day.

Mr. SPEAKER.—We will take them up tomorrow.

Sri H. M. CHANNABASAPPA.—I would like to know whether the record goes to show that only one question was put by me or two questions were put.

Mr. SPEAKER.—I have looked into the record and I find that there is only one question in respect of this.

MYSORE AGRICULTURAL INCOME-TAX BILL, 1957.

Motion to consider (Continued)

Sri U. M. MADAPPA (Chamarajanagar).—I rise to a point of order. ಈ ವ್ಯವಸಾಯದ ಆದಾಯತೆರಿಗೆ ಮಸೂದೆಯನ್ನು ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಮಂಡಿಸುವುದಕ್ಕೆ ಅರ್ಹತೆಯಿದೆಯೇ ಎನ್ನುವ ವಿಷಯದಲ್ಲಿ ಸ್ವಲ್ಪ ಕಾನ್‌ಸ್ಟಿಟ್ಯೂಷನ್ನನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ.

"207 : (1) : A Bill or amendment making provision for any of the matters specified in sub-clauses (a) to (f) of clause (1) of article 199 shall not be introduced or moved except on the recommendation of the Governor, and a Bill making such provision shall not be introduced in a Legislative Council.

Provided that no recommendation shall be required under this clause for the moving of an amendment making provision for the reduction or abolition of any tax."

ಆದುದರಿಂದ ಇಲ್ಲಿ Annexureಗೆ ಅವಕಾಶವಿಲ್ಲ. ಈ ರೀತಿಯಾಗಿ ಬದಲಾಯಿಸಲು ಸೆಲೆಕ್ಟ್ ಸಮಿತಿಯವರಿಗೆ

ನಮ್ಮ ಅಸೆಂಬ್ಲಿ ರೂಲ್ಸ್ ಪ್ರಕಾರ ಅಧಿಕಾರವಿದೆಯೇ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿದರೆ, ರೂಲ್ 74 ರಲ್ಲಿ ಹೀಗಿದೆ:

"RULE 74: If any member desires to move an amendment which under the Constitution cannot be moved without previous sanction or recommendation he shall annex to the notice of the proposed amendment a copy of such sanction or recommendation and the notice shall not be valid until this requirement is complied with."

Any member of this House when the Bill is under discussion, can move an amendment and if he has the recommen dation, he can insert it as an annexure.'

ಆದುದರಿಂದ, ಸೆಲೆಕ್ಟ್ ಕಮಿಟಿಯವರಿಗೆ ಈ ರೀತಿ ಅನೆಕ್ಷರ್ ಹಾಕುವ ಅಧಿಕಾರವಿದ್ದರೂ ಶಾಸನಸಭಾ ಕಾರ್ಯಕಲಾಪಗಳ ರೂಲ್ಸ್‌ನಲ್ಲಿ ಹೇಳಿರುವಂತೆ ರಾಜ್ಯಪಾಲರ ಸಮ್ಮತಿಯಿಲ್ಲದೆ ಈ ಅನೆಕ್ಷರ್ ತಂದಿದೆ. ಈ ಬಿಲ್ಲನ್ನು ನಾವು ಇಲ್ಲೇ ಪಾಸು ಮಾಡಿದರೂ ಅದು law ಆಗುವುದಿಲ್ಲ. ರೂಲ್ 69ನ್ನು ನೋಡಿದರೆ ಅದು ಈ ರೀತಿ ಇದೆ.

"RULE: 69: The report, with the amended Bill, shall be published in the Gazette."

ಆದ್ದರಿಂದ ಮೈಸೂರು ಸರ್ಕಾರಿ ಗೆಜೆಟ್ಟಿನಲ್ಲಿ ಇದು ನೋಟಿಫೈ ಆಗಿಲ್ಲ. ಇದನ್ನು ಮಾಡಬೇಕಾದುದು ಸೆಕ್ರೆಟ್ರರಿಯವರ ಕರ್ತವ್ಯ. ಅಕಸ್ಮಾತ್ ನಿನ್ನೆಯ ದಿವಸ ಅಥವಾ ಇವತ್ತು ಈ ಘಳಿಗೆಯೊಳಗೆ ಏನಾದರೂ ಗೌರ್ನರ್ ಶಿಫಾರಸ್ಸು ಮಾಡಿ ಈ ಬಿಲ್ಲನ್ನು ಕಳುಹಿಸಿರಬಹುದು. ಆದರೆ ನೋಟಿಫಿಕೇಷನ್ ಇನ್ನೂ ಆಗಿಲ್ಲ. ಶಾಸನ ಸಭಾ ರೂಲ್ಸ್ ಪ್ರಕಾರ ಈ ಮಸೂದೆಯನ್ನು ಮೂವ್ ಮಾಡಲು ಅವಕಾಶವಿಲ್ಲ. ಈ ಬಿಲ್ಲು ಸರ್‌ಕ್ಯುಲೇಟ್ ಆಗಿಲ್ಲ. ನೋಟಿಫಿಕೇಷನ್ ಆಗಿದೆ ಎನ್ನುವುದು ಗೊತ್ತಿಲ್ಲದೆ ಇರುವುದರಿಂದ ಮೆಂಬರುಗಳಿಗೆ ಇದು ಸರ್‌ಕ್ಯುಲೇಟ್ ಆಗಬೇಕು. ಇದು ಬರೀ ಸದಸ್ಯರಿಗೆ ಮಾತ್ರ ತಿಳಿದರೆ ಸಾಲದು. ಈ ತೆರಿಗೆ ಮಸೂದೆ ಸೆಲೆಕ್ಟ್ ಕಮಿಟಿಗೆ ಹೋದಮೇಲೆ ಮೆತಡ್ ಅಫ್ ಟ್ಯಾಕ್ಸೇಷನ್ ಹೆಚ್ಚು ಕಡಮೆ ಆಗಿದೆ. ರೇಟ್ಸ್‌ನಲ್ಲಿ ಕೆಲವು ವೇರಿಯೇಷನ್ಸ್ ಇವೆ. ಪರಿಸ್ಥಿತಿ ಹೀಗಾಗಿರುವುದರಿಂದ ಅದನ್ನು ಸಾರ್ವಜನಿಕರ ಅವಗಾಹನೆಗೆ ಮೈಸೂರು ಸರ್ಕಾರಿ ಗೆಜೆಟ್ ಪ್ರಕಟನೆಯ ಮೂಲಕ ತರುವುದು ಅವಶ್ಯಕ. ಈ ಸಭೆಯ ನಾಲ್ಕು ಗೋಡೆಗಳ ಒಳಗಡೆ ಕುಳಿತು ಇದನ್ನು ತೀರ್ಮಾನ ಮಾಡುವುದಕ್ಕಿಂತ ಹೊರಗಡೆ ಇತ್ಯರ್ಥ ಮಾಡುವುದು ಅಗತ್ಯ. ಶ್ರೀ ಮರಿಯಪ್ಪನವರು ಲಾಯರು ಆಗಿರುವುದರಿಂದ ಜೂರಿಸ್‌ಪ್ರೂಡೆನ್ಸ್ ಓದಿದ್ದಾರೆ. ನಾನು ಲಾಯರ್ ಅಲ್ಲದೆ ಇದ್ದರೂ ನನಗೆ ಸ್ವಲ್ಪ ವಿಷಯಗೊತ್ತಿದೆ. ಅದರ ಪ್ರಕಾರ ಈ ಸಭೆಯ ಮುಂದೆ ಇರುವ ಈ ಹಣಕಾಸಿನ ಮಸೂದೆಯನ್ನು ಸಾರ್ವಜನಿಕರಿಗೆ ತಿಳಿಸುವ ಬಗ್ಗೆ ಗೆಜೆಟ್ ನೋಟಿಫಿಕೇಷನ್ ಆಗಬೇಕು. ಸಾರ್ವಜನಿಕರಿಂದ ಏನಾದರೂ ಅಬ್ಜೆಕ್ಷನ್ ಬಂದರೆ ಅದನ್ನು ಪರ್ಯಾಲೋಚಿಸುವುದಕ್ಕೆ ಪ್ರಜಾಪ್ರಭುತ್ವದಲ್ಲಿ ಅವಕಾಶ ಇರುವುದೂ ಅಲ್ಲದೆ ಮತ್ತೆ ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದಕ್ಕೂ ಅವಕಾಶವಿದೆ. ಅಧ್ಯಕ್ಷರು ಈ ಬಿಲ್ಲಿನ ಜವಾಬ್ದಾರಿಯನ್ನು ಹೆಚ್ಚಿಗೆ ಹೊತ್ತಿದ್ದಾರೆ. ಸಾರ್ವಜನಿಕರ ಹಿತ ದೃಷ್ಟಿಯಿಂದ ಮತ್ತು ಸಭೆಯ ಗೌರವದ ದೃಷ್ಟಿಯಿಂದ ಇಂತಹ ಜವಾಬ್ದಾರಿಯುತವಾದ ಕಾನೂನನ್ನು ಅವಸರ ಅವಸರವಾಗಿ ಮಾಡುವ ಬದಲು ತಾವು ಈ ವಿಚಾರದಲ್ಲಿ ಹೆಚ್ಚಿಗೆ ಜವಾಬ್ದಾರಿ ತೆಗೆದುಕೊಂಡು ಸಾರ್ವಜನಿಕರಿಗೆ ನ್ಯಾಯ ದೊರಕಿಸಿ ಕೊಡಬೇಕು. ಇದನ್ನು ಸೆಲೆಕ್ಟ್ ಕಮಿಟಿಗೆ recommit ಮಾಡಬೇಕು, ಎಂದು ನಾನು ಅರಿಕೆ ಮಾಡಿಕೊಂಡು ಈ ವಿಷಯದಲ್ಲಿ ಅಧ್ಯಕ್ಷರು ರೂಲಿಂಗ್ ಕೊಡಬೇಕು ಎಂದು ಹೇಳುತ್ತೇನೆ.

Mr. SPEAKER.—The point is that the Hon'ble Member wants to know whether the recommendation of the Governor has been procured in respect of the recommendations made by the Select Committee. I would say that the Select Committee is entitled to suggest amendments at variance with the provisions of the Bill and if they increase taxation, those recommendations will not be entered in the body of the Bill. They will be moved as amendments with due recommendation from the Governor. The Governor, in this respect, has already given his recommendation and I have a copy of it with me.

Sri U. M. MADAPPA.—All the annexures ?

Mr. SPEAKER.—Yes, to all the annexures. I will also read the relevant portion of Rule 74, which is as follows:

"If any member desires to move an amendment which under the Constitution cannot be moved without previous sanction or recommendation he shall annex to the notice of the proposed amendment a copy of such sanction or recommendation and the notice shall not be valid until this requirement is complied with."

What is required is a copy of the sanction for the amendments. That ha been received by me. Not only the copy, but I have received the original also from the Governor.

Sri U. M. MADAPPA.—It is only in the case of a member desiring to move an amendment, but in the case of a

(SRI U. M. MADAPPA)

Select Committee when the Bill is under consideration here in this House ?

Mr. SPEAKER.—That is what I say; the Select Committee is not moving the amendments. One of the members of the House is going to move the amendments. So the difficulty does not arise. The recommendations have no doubt been made by the Select Committee.

Sri T. MARIAPPA (Minister for Finance).—We have made it clear in the Report as well.

Mr. SPEAKER.—Since that requires the recommendation of the Governor, they have not been incorporated in the Bill as such. They are going to be moved as amendments with due sanction from the Governor. The required recommendation has been received by me.

ಶ್ರೀ ಯು. ಎಂ. ಮಾದಪ್ಪ.—ಈಗ ಬಂದಿದ್ದು ಸರಿ. ನಾವು ಇದನ್ನು ಶಿಪಾರಸ್ಸು ಇಲ್ಲದೆ ಪಾಸುಮಾಡಿದರೆ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ.

Mr. SPEAKER.—ಶಿಫಾರಸು ಬಂದಿದೆ. Of course, that requirement has been complied with. Unless I am satisfied with it, I am not going to allow the Government to move the amendments.

Sri U. M. MADAPPA.—What about the publication in the Gazette under rule 69 ? Rule 69 says that the report with the amendments should be published in the Gazette.

Mr. SPEAKER.—Rule 69 reads thus :

> "The Secretary shall cause every report of a Select Committee to be printed and a copy of the report together with the amended Bill shall be made available for the use of every member of the Assembly."

What is required is that the Secretary will have to get the Select Committee Report printed. Printed reports are there. The report together with the amended Bill has also been made available for the use of every member.

ಶ್ರೀ ಯು. ಎಂ. ಮಾದಪ್ಪ.—ಅಧ್ಯಕ್ಷರು ದಯವಿಟ್ಟು 69ನೇ ರೂಲ್‌ಅನ್ನು ಪೂರ್ಣವಾಗಿ ಓದಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ಈಗ 69ನೇ ರೂಲ್ ಅನ್ನು ಓದುತ್ತೇನೆ:

> "The Secretary shall cause every report of a Select Committee to be printed and a copy of the report together with the amended Bill shall be made available for the use of every member of the Assembly. The report, with the amended Bill, shall be published in the Gazette."

The intention of the publication is to give wider publication throughout the country and see that all citizens should know these things so that they may adjust according to their capacities.

Mr. SPEAKER.—Whatever the intention may be, I have to go according to the rule as such. The rule says that the Select Committee Report shall be printed and a copy of the amended Bill should be placed on the table of each Member. The thing is that the report should also be published in the Gazette. All these three things have been done complied with.

Sri M. RAMAPPA.—We do not have the copy of the Gazette.

Mr. SPEAKER.—It does not matter. You have the amended Bill itself.

ಶ್ರೀ ಯು. ಎಂ. ಮಾದಪ್ಪ.—ಈಗ 66–56 ಕ್ಲಾಸುಗಳಿಗೆ ಮಾತ್ರ ಶಿಪಾರಸ್ಸು ಇದೆ. ಇನ್ನೂ ಕೆಲವು ಕ್ಲಾಸುಗಳು ತಿದ್ದುಪಡಿಯಾಗಿವೆ. ಉದಾಹರಣೆಗೆ ಪೇಜು 28ರಲ್ಲಿ 25 ರೂಪಾಯಿಗಳು ಇದ್ದುದು 10 ರೂಪಾಯಿಗಳಾಗಿವೆ.

ಶ್ರೀ ಟಿ. ಮರಿಯಪ್ಪ.—ಅದು ಟಾಕ್ಸು ಅಲ್ಲ, ಫೈನು.

Sri U. M. MADAPPA.—There is variation. It comes under the Taxation Bill.

Mr. SPEAKER.—What is required to be complied by the Rules has been complied with. If there is anything to be done, we can take up the matter at the time when we read the clauses one by one.

Sri T. MARIAPPA.—I beg to move :

> "That the Mysore Agricultural Income Tax Bill, 1957, as reported by the Select Committee be taken into consideration."

Mr. SPEAKER.—Motion moved :

> "That the Mysore Agricultural Income Tax Bill, 1957, as reported by the Select Committee be taken into consideration"

ಶ್ರೀ ಟಿ. ಮರಿಯಪ್ಪ.—ಪ್ರಥಮತಃ, ಸಭೆಯ ಮುಂದೆ ಮಂಡಿಸಿದಂಥ ವ್ಯವಸಾಯ ಉತ್ಪನ್ನಗಳ ಆದಾಯದ ತೆರೆಗೆ ಮಸೂದೆಯನ್ನು ಆರಿಸಿದ ಸಮಿತಿ

ಯವರು ಬಹಳ ಕೂಲಂಕಷವಾಗಿ ವಿಮರ್ಶೆ ಮಾಡಿದ್ದಾರ. ಒಂದೊಂದು ಸಭೆಯಲ್ಲೂ 6—7 ಗಂಟೆಗಳ ಕಾಲ ಕುಳಿತು ಎಲ್ಲಾ ವಿಷಯಗಳನ್ನೂ ಪರಿಶೀಲನೆ ಮಾಡಿದ್ದಾರೆ. ಹೊಸ ಮೈಸೂರಿಗೆ ಸೇರಿರತಕ್ಕ ಯಾವ ಯಾವ ಭಾಗಗಳಲ್ಲಿ ಈ ತೆರಿಗೆ ಜಾರಿಯಲ್ಲಿದೆಯೋ, ಅಲ್ಲಿ ಅದರ ಪರಿಣಾಮವೇನಾಗಿದೆ, ಅಲ್ಲಿ ಬರುತ್ತಿರುವ ಆದಾಯವೇನು ಎಂದು ಕೂಡ ಪರಿಶೀಲನೆ ಮಾಡಿದ್ದಾರೆ.

ಬೊಂಬಾಯಿ ಭಾಗ ವಿನಾ ಬಾಕಿ ಭಾಗಗಳಲ್ಲಿ ವ್ಯವಸಾಯ ಉತ್ಪನ್ನಗಳ ಆದಾಯದ ಮೇಲೆ ಈ ತೆರಿಗೆ ಇದೆ. ಹಳೆಯ ಮೈಸೂರಿನಲ್ಲಿ ಇದೆ, ಕೊಡಗು ಪ್ರದೇಶದಲ್ಲಿ ಇದೆ, ಮದರಾಸು ಪ್ರದೇಶದಲ್ಲಿ ಇದೆ, ಹೈದರಾಬಾದು ಪ್ರದೇಶದಲ್ಲಿ ಇದೆ. ಹೈದರಾಬಾದು ಮತ್ತು ಕೊಡಗು ಪ್ರದೇಶದಲ್ಲಿ ಎಲ್ಲ ವ್ಯವಸಾಯ ಉತ್ಪನ್ನಗಳ ಮೇಲೂ ಆದಾಯ ತೆರಿಗೆ ಇದೆ. ಆಹಾರ ಪದಾರ್ಥಗಳಿಗೂ ಕೂಡ ವಿನಾಯಿತಿ ಇಲ್ಲ. ಮದರಾಸ್ ಭಾಗದಿಂದ ಬಂದಿರತಕ್ಕ ಪ್ರದೇಶದಲ್ಲಿ ಪ್ಲಾಂಟೇಷನ್ ಬೆಳೆಗಳ ಮೇಲೆ ಮಾತ್ರ ಇದೆ. ಹಳೆಯ ಮೈಸೂರಿನಲ್ಲಿ ಪ್ಲಾಂಟೇಷನ್ ಬೆಳೆಗಳು ಮತ್ತು ಇತರ ಹಣಕಾಸಿನ ಬೆಳೆಗಳ ಮೇಲೆ ಮಾತ್ರ ಆದಾಯ ತೆರಿಗೆ ವಿಧಿಸಿದ್ದಾರೆ. ಹೀಗೆ ವೈವಿಧ್ಯತೆಯಿಂದ ಕೂಡಿದೆ ಈ ತೆರಿಗೆಯ ಕ್ರಮ. ಆದ್ದರಿಂದ ಎಲ್ಲಾ ಭಾಗಗಳಿಗೂ ಅನ್ವಯಿಸತಕ್ಕಂಥ ಒಂದು ಏಕ ಮಾತ್ರ ಕಾನೂನಿನ ಅವಶ್ಯಕತೆ ಇದೆ ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಆ ವಿಷಯವನ್ನು ಅರಿತೇ ಸರ್ಕಾರದವರು ಒಂದು ಮಸೂದೆಯನ್ನು ತಯಾರು ಮಾಡಿ ಹಳೆಯ ಮೈಸೂರಿನಲ್ಲಿ ಇದ್ದ ಹಾಗೆ ಆಹಾರ ಪದಾರ್ಥಗಳಿಂದ ಬರತಕ್ಕ ವರಮಾನವನ್ನು ಬಿಟ್ಟು ಬಾಕಿ ಹಣಕಾಸಿನ ಬೆಳೆಗಳ ಮೇಲೆ, ಎಂದರೆ, ಕಮರ್ಷಿಯಲ್ ಕ್ರಾಪ್ಸ್ ಮೇಲೆ ತೆರಿಗೆ ವಿಧಿಸಬೇಕೆಂದು ತೀರ್ಮಾನ ಮಾಡಿ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿದ್ದು ತಮಗೆಲ್ಲಾ ಗೊತ್ತಿದೆ. ಈ ಮಸೂದೆಯ ಮೇಲೆ ಆರಿಸಿದ ಸಮಿತಿಯಲ್ಲಿ ವಿಪುಲವಾಗಿ ಚರ್ಚೆ ನಡೆದು ಈಗ ಸಭೆಯ ಮುಂದೆ ಇಟ್ಟಿರತಕ್ಕ ವರದಿ ಮತ್ತು ತಿದ್ದುಪಾಟು ಮಾಡಬೇಕಾದಂಥ ಅಂಶಗಳನ್ನು ತಾವೆಲ್ಲಾ ಆಗಲೇ ಪರಿಶೀಲನೆ ಮಾಡಿದ್ದೀರಿ. ಪ್ರತಿಯೊಂದು ಕಲಮಿಗೂ ಕೂಡ ಈ ಆರಿಸಿದ ಸಮಿತಿಯವರು ಕಾರಣಗಳನ್ನು ಕೊಟ್ಟಿದ್ದಾರೆ. ಬದಲಾವಣೆ ಮಾಡಬೇಕಾದ ಅಗತ್ಯವೇನಿತ್ತು, ಬದಲಾವಣೆ ಮಾಡಿರುವುದರಿಂದ ಏನು ಪರಿಣಾಮವಾಗುತ್ತದೆ ಎಂಬ ವಿಷಯವನ್ನೆಲ್ಲಾ ಹೇಳಿದ್ದಾರೆ. ಸ್ವಾಮಿ, ಆರಿಸಿದ ಸಮಿತಿ ಸದಸ್ಯರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಒಂದು ದಿವಸ ಬೆಳಿಗ್ಗೆ 9 ಘಂಟೆಯಿಂದ 3 ಗಂಟೆಯ ವರೆಗೂ ಕುಳಿತು ಕೆಲಸ ಮಾಡಿದರು. ಅದೇ ದಿವಸ ಸಾಯಂಕಾಲ 7½ಯಿಂದ 12 ಗಂಟೆಯ ವರೆಗೂ ಕೆಲಸ ಮಾಡಿ ಈ ಮಸೂದೆಯನ್ನು ಈ ಸಭೆ ಒಪ್ಪುವ ರೀತಿಯಲ್ಲಿ ಪರಿಷ್ಕರಿಸಿದ್ದಾರೆ. ಆ ದೃಷ್ಟಿಯಿಂದ ವಿಶೇಷವಾದಂಥ ಚರ್ಚೆ ಇಲ್ಲದೆ ಈ ತಿದ್ದುಪಾಟಾದ ಮಸೂದೆ ಅಂಗೀಕಾರಕ್ಕೆ ಅರ್ಹವಾಗಿದೆ. ಆರಿಸಿದ ಸಮಿತಿಯಲ್ಲಿ ಸಹಕರಿಸಿದ ಎಲ್ಲ ಸದಸ್ಯರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ಈ ಸಭೆಯಲ್ಲಿ ಚರ್ಚೆಗೆ ಬಂತು. ಆರಿಸಿದ ಸಮಿತಿಯಲ್ಲೂ ಚರ್ಚೆಗೆ ಬಂತು. ಆಹಾರ ಪದಾರ್ಥಗಳಿಂದ ಬರತಕ್ಕ ಉತ್ಪನ್ನವನ್ನು ಏಕೆ ಬಿಡಬೇಕು, ಅದಕ್ಕೆ ವಿನಾಯಿತಿ ಏಕೆ ಇರಬೇಕೆಂತಲೂ ಚರ್ಚೆಯಾಗಿದೆ. ಅದನ್ನು ನ್ಯಾಯಬದ್ಧವಾಗಿ ತಪ್ಪಿಸುವುದು ಕಷ್ಟ. ಯಾವ ವಿಧಾನದಲ್ಲೇ ಆದಾಯ ಬಂದಮೇಲೆ ಸರ್ಕಾರಕ್ಕೆ 'ತೆರಿಗೆ' ಕೊಡತಕ್ಕ ಶಕ್ತಿ ಇರತಕ್ಕ ಮನುಷ್ಯ ತೆರಿಗೆ ಕೊಡಬೇಕಾದದ್ದು ಧರ್ಮ. ಇತರ ಬಾಬುಗಳಲ್ಲಿ ಹೇಗೆ ವರಮಾನ ಬರುತ್ತದೆಯೋ ಅದೇ ರೀತಿ ಈ ವ್ಯವಸಾಯದ ಉತ್ಪನ್ನಗಳಲ್ಲೂ ವರಮಾನ ಬರುತ್ತದೆ, ಆದ್ದರಿಂದ ಎಲ್ಲಾ ಬೆಳೆಗಳ ಮೇಲೆ ಹಾಕಬೇಕೆಂತಲೂ ವಾದ ನಡೆಯಿತು. ಪ್ರಾರಂಭದ ದಿವಸ ಇದೇ ವಾದ ನಡೆದು ಈ ದೇಶದ ಈಗಿನ ಪರಿಸ್ಥಿತಿಯ ದೃಷ್ಟಿಯಿಂದ ದೇಶದಲ್ಲಿ ಆಹಾರ ಅಭಾವ ಇರುವಾಗ ಆಹಾರ ಬೆಳೆಗಳನ್ನು ಬೆಳೆಯುವವರಿಗೆ ಉತ್ತೇಜನ ಕೊಡುತ್ತಾ ಇರತಕ್ಕ ಕಾಲದಲ್ಲಿ ತಾತ್ಕಾಲಿಕವಾಗಿ ಯಾದರೂ ಈ ಬೆಳೆಗಳ ಉತ್ಪನ್ನದಿಂದ ಬರತಕ್ಕ ಆದಾಯಕ್ಕೆ ವಿನಾಯಿತಿ ಇರಬೇಕೆಂದು ಆರಿಸಿದ ಸಮಿತಿಯ ಸದಸ್ಯರು ಮನಗಂಡರು ಮತ್ತು ಸರ್ಕಾರದವರು ಆ ದೃಷ್ಟಿಯಿಂದಲೇ ಆಹಾರ ಬೆಳೆಗಳ ಉತ್ಪನ್ನದ ಮೇಲೆ ತೆರಿಗೆ ವಿಧಿಸುವುದಕ್ಕೆ ಇಷ್ಟ ಪಡಲಿಲ್ಲ. ಬಾಕಿ ಉಳಿದ ಬೆಳೆಗಳ ಮೇಲೆ ಎಂದರೆ ಪ್ಲಾಂಟೇಷನ್ ಕ್ರಾಪ್ಸ್ ಮತ್ತು ಇತರ ಕಮರ್ಷಿಯಲ್ ಕ್ರಾಪ್ಸ್ ಮೇಲೆ ಬಹಳ ಚರ್ಚೆ ನಡೆಯಿತು. ಹೈದರಾಬಾದಿನಲ್ಲಿ ಎಲ್ಲ ಬೆಳೆಗಳ ಮೇಲೂ ಆ ತೆರಿಗೆ ಬೀಳುತ್ತಾ ಇದೆ. ಕೊಡಗಿನಲ್ಲಿ ಆಹಾರ ಬೆಳೆಗಳ ಮೇಲೆ ಆದಾಯ ತೆರಿಗೆ ಇದೆ. ಅದಕ್ಕೆ ಕೊಡಗಿನಲ್ಲಿರತಕ್ಕ ಸಾಹಿತ್ಯವನ್ನೂ ಯೋಚನೆ ಮಾಡಬೇಕಾಯಿತು. ಸಮಿತಿಯವರು ಅದನ್ನೂ ಬಹಳ ವಿಶೇಷವಾಗಿ ಗಮನಕ್ಕೆ ತೆಗೆದುಕೊಂಡರು. ಸುಮಾರು 50 ಸಾವಿರ ಎಕರೆ ಇರತಕ್ಕ ಕಾಫಿ ತೋಟಗಳಿಂದ ಸುಮಾರು 28 ಲಕ್ಷಕ್ಕೆ ಕಡಿಮೆ ಇಲ್ಲದಂತೆ ಅಲ್ಲಿ ವರಮಾನ ಬರುತ್ತಾ ಇದೆ. ಅದೇ ಹಳೆಯ ಮೈಸೂರಿನಲ್ಲಿ ಸುಮಾರು 1 ಲಕ್ಷ ಎಕರೆವರೆಗೂ ಇರತಕ್ಕ ವಿಸ್ತೀರ್ಣದಲ್ಲಿ ಕಾಫಿ, ಟೀ ತೋಟ ಇದೆ. ನಮಗೆ ಈಗ ತಿಳಿದಿರತಕ್ಕ ಅಂಕಿ ಅಂಶಗಳ ಆಧಾರದ ಮೇಲೆ ಸುಮಾರು 10 ಲಕ್ಷ ರೂಪಾಯಿ ವರಮಾನ ಬರುತ್ತದೆ. ನಮ್ಮ ಪ್ರದೇಶಕ್ಕಿಂತಲೂ ಸುಮಾರು ಅರ್ಧ ವಿಸ್ತೀರ್ಣ ಇರತಕ್ಕ ಭಾಗದಲ್ಲಿ 28ಲಕ್ಷ ರೂಪಾಯಿ ವರಮಾನ ಬರುತ್ತದೆ ಎಂದ ಮೇಲೆ ಕೊಡಗಿನಲ್ಲಿ ವಿಧಿಸಿರುವ ಆದಾಯ ತೆರಿಗೆ ಕ್ರಮವಾಗಿದೆ, ಹೆಚ್ಚು ಶಾಸ್ತ್ರೀಯವಾಗಿದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ನಮ್ಮ ಹಳೆಯ ಮೈಸೂರಿನಲ್ಲಿ ಪ್ರಥಮತಃ ಜಾರಿಗೆ ಬಂದದ್ದರಿಂದ ಮತ್ತು ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಅವಕಾಶ ಹೆಚ್ಚಾಗಿ ಇದ್ದುದರಿಂದ ಆದಾಯ ಹೆಚ್ಚು ಬರುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವುದನ್ನು ಆರಿಸಿದ ಸಮಿತಿಯವರು ಮನಸ್ಸಿಗೆ ತೆಗೆದುಕೊಂಡರು. ಹೀಗೆ ಆದಾಯ ಬಂದ ಮೇಲೆ ತೆರಿಗೆ ಕೊಡಬೇಕಾದದ್ದು ಧರ್ಮ, ಇದರಜೊತೆಯಲ್ಲಿ ಹಳೆಯ ಮೈಸೂರಿನಲ್ಲಿರತಕ್ಕ ಪದ್ಧತಿಯಂತೆ ಎಕ್ಸೆಂಪ್ಷನ್ ಮತ್ತು ಕಾಂಪೋಸಿಷನ್‌ಗೆ ಅವಕಾಶ ಮಾಡಿದರೆ ಕೊಡಗಿನಿಂದ ಬರತಕ್ಕ ಆದಾಯ ಕಡಿಮೆ ಆಗುವುದರಲ್ಲಿ ಸಂಶಯವಿಲ್ಲ ಎಂದು ಆರಿಸಿದ ಸಮಿತಿಯವರು ಮನಗಂಡರು. ಈ ಎಲ್ಲಾ ದೃಷ್ಟಿಯಿಂದಲೂ ದೀರ್ಘವಾಗಿ ಆಲೋಚನೆ ಮಾಡಿ, ಮತ್ತು ಸಾಧಕ ಬಾಧಕಗಳನ್ನು ಮನಗಂಡು ಈ ಪ್ಲಾಂಟೇಷನ್ ಕ್ರಾಪ್ಸಿಗೆ ಮಾತ್ರ—ಮುಖ್ಯ ಆದಾಯ ಬರತಕ್ಕ ಮಾರ್ಗ ಇರುವುದು ಪ್ಲಾಂಟೇಷನ್ ಕ್ರಾಪ್ಸಿನಿಂದ—ಇದನ್ನು ಕಮರ್ಷಿಯಲ್ ಕ್ರಾಪ್ಸ್ ಡೆಫನಿಷನ್‌ನಿಂದ ಬೇರೆ ತೆಗೆದು ಇಡತಕ್ಕದ್ದು ಸೂಕ್ತ, ಅದು ಕೊಡಗಿನಲ್ಲಿರಲಿ, ಮೈಸೂರಿನಲ್ಲಿರಲಿ—ಅದಕ್ಕೆ ಆದಾಯ ತೆರಿಗೆಯನ್ನು ಒಂದೇ ರೀತಿಯಲ್ಲಿ ಹಾಕತಕ್ಕದ್ದು ಅಗತ್ಯ ಎಂದು ಮನಗಂಡರು. ಜೊತೆಗೆ ಈ

(ಶ್ರೀ ಟಿ. ಮರಿಯಪ್ಪ)

ಪ್ಲಾಂಟೇಷನ್ ಕ್ರಾಪ್ಸ್‌ಗೆ ಸಂಬಂಧಪಟ್ಟಂತೆ ಕೊಡಗಿನಲ್ಲಿ ಆಗಲೇ ಒಂದು ರೀತಿಯಲ್ಲಿ ತೆರಿಗೆ ಜಾರಿಗೆ ಬಂದಿದೆ. ಜನರೆಲ್ಲರೂ ಅದಕ್ಕೆ ಒಗ್ಗಿ ಹೋಗಿದ್ದಾರೆ, ಅವರಿಗೆ ಯಾವ ವಿಧವಾದ ತೊಂದರೆಯೂ ಇರುವುದಿಲ್ಲ. ಮೈಸೂರಿನಲ್ಲಿದ್ದಂಥಾ ಕ್ರಮವನ್ನು ಜಾರಿಗೆ ತಂದರೆ ಕೊಡಗಿನಲ್ಲೂ ಕೂಡ ಎಕ್ಸೆಂಪ್ಷನ್ ಮತ್ತು ಕಾಂಪೊಸಿಷನ್ ಕೊಡಬೇಕಾಗುತ್ತದೆ, ಅದು ಅವರಿಗೆ ಹೊಸ ರೀತಿ ಆಗುತ್ತದೆ ಮತ್ತು ಬರತಕ್ಕ ಆದಾಯ ಕಡಿಮೆಯಾಗುತ್ತದೆ. ಆ ದೃಷ್ಟಿಯಿಂದ ಹಳೆಯ ಮೈಸೂರಿನಲ್ಲಿರತಕ್ಕ ಪ್ಲಾಂಟೇಷನ್ ಕ್ರಮವನ್ನು ಕೊಡಗಿಗೆ ಸರಿಹೊಂದಿಸಿಕೊಳ್ಳಬೇಕಾದದ್ದು ಉತ್ತಮ. ಜೊತೆಗೆ ವ್ಯವಸಾಯದಲ್ಲಾಗಲಿ, ಲೆಕ್ಕ ಇಡತಕ್ಕ ಕ್ರಮದಲ್ಲಾಗಲಿ, ಕಾಫಿ ಬೋರ್ಡಿಗೆ ಕಾಫಿ ಒದಗಿಸುವುದರಲ್ಲಾಗಲಿ ಏನೂ ವ್ಯತ್ಯಾಸವಿಲ್ಲ. ಅಲ್ಲಿ ಜನಗಳಿಗೆ ಸ್ವಲ್ಪ ಮಾಹಿತಿ ಇದೆ. ಇದು ಆರ್ಗನೈಸ್ಡ್ ಇಂಡಸ್ಟ್ರೀ ಮತ್ತು ನಿರ್ದಿಷ್ಟವಾದ ಸ್ಥಳಗಳಲ್ಲಿ ಇದೆ. ಈ ಎಲ್ಲಾ ಅಂಶಗಳನ್ನೂ ಸಮಿತಿಯವರು ಮನಗಂಡು, ಪ್ಲಾಂಟೇಷನ್ ಕ್ರಾಪ್ಸ್‌ನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು, ಕಮರ್ಷಿಯಲ್ ಕ್ರಾಪ್ಸ್‌ನ್ನು ಬೇರೆ ದೃಷ್ಟಿಯಿಂದ ನೋಡಬೇಕೆಂದು ಆಲೋಚನೆ ಮಾಡಿದರು. ಅದಕ್ಕೆ ನಾನು ಆರಿಸಿದ ಸಮಿತಿಯ ಸದಸ್ಯರೆಲ್ಲರಿಗೂ ಕೃತಜ್ಞನಾಗಿದ್ದೇನೆ. ಪ್ರತಿಯೊಬ್ಬರೂ, ಭಿನ್ನಾಭಿಪ್ರಾಯ ಹೆಚ್ಚಾಗಿ ಇಲ್ಲದೆ, ಈ ರೀತಿ ಮಾಡುವುದು ಸೂಕ್ತ ಎಂದು ಹೇಳಿದರು. ಇದರ ಜೊತೆಗೆ ಇನ್ನೂ ಒಂದು ಸಲಹೆ ಬಂದಿದೆ. ಪ್ಲಾಂಟೇಷನ್ ಬೆಳೆಗಳನ್ನು ಬೆಳೆಯತಕ್ಕ ಪ್ರದೇಶದಲ್ಲಿ ಆದಾಯ ಗೊತ್ತು ಹಚ್ಚುವುದು ಬಹಳ ಸುಲಭ, ಎಲ್ಲವನ್ನೂ ಕಾಫಿ ಬೋರ್ಡಿನವರಿಗೇ ಅವರು ಕೊಡುತ್ತಾರೆ. ಲೆಕ್ಕ ಸರಿಯಾಗಿ ಇಟ್ಟಿರುತ್ತಾರೆ. ಒಂದುವೇಳೆ ಲೆಕ್ಕ ಇಡದೆ ಇರತಕ್ಕ ಸಣ್ಣ ಬೆಳೆಗಾರನಾದರೆ ಅವನಿಗೆ ಒಂದು ಅನುಕೂಲವನ್ನು ಸರ್ಕಾರದವರು ಕಲ್ಪಿಸಬಹುದು. ಸ್ಟ್ಯಾಂಡರ್ಡ್ ಆಫ್ ಎಕ್ಸ್‌ಪೆಂಡಿಚರ್ ಲೆಕ್ಕಾಚಾರ ಮಾಡುವುದಕ್ಕೆ ಕಷ್ಟವಾಗುವುದಿಲ್ಲ. ಆ ದೃಷ್ಟಿಯಿಂದ ಯಾರೂ ಕೂಡ ಎಂಕ್ಸೆಂಪ್ಷನ್ ಕೊಡಿ ಕಾಂಪೊಸಿಷನ್ ಕೊಡಿ ಎಂದು ಒತ್ತಾಯಮಾಡಲಿಲ್ಲ. ಸಣ್ಣ ತೋಟಗಾರರಿಗೆ ತೊಂದರೆ ಆಗುವ ಪಕ್ಷಕ್ಕೆ ತೊಂದರೆ ಆಗದೆ ಇರತಕ್ಕ ರೀತಿಯಲ್ಲಿ ಮಾಡುವುದಕ್ಕೆ ಸರ್ಕಾರದವರಿಗೆ ಅವಕಾಶವಿದೆ.

9 A.M.

ಆದುದರಿಂದ ತಾವು ಭಯಭೀತರಾಗಬೇಕಾಗಿಲ್ಲ. exemption ಮತ್ತು composition ಇವು ಪ್ಲಾಂಟೇಷನ್ ಬೆಳೆಗಳಿಗೆ ಅನ್ವಯವಾಗುವುದಿಲ್ಲವೆಂದು ಹೇಳಿದ ಮಾತ್ರಕ್ಕೆ ಒಂದು, ಎರಡು, ಮೂರು, ನಾಲ್ಕು ಎಕರೆಗಳಿಗೆ ಅನ್ವಯವಾಗುತ್ತದೆಂದು ಹೆದರಬೇಕಾಗಿಲ್ಲ. ನಮ್ಮ ಗಮನಕ್ಕೆ ಕೆಲವು ಉದಾಹರಣೆಗಳು ಬಂದಿವೆ. ಹತ್ತು ಎಕರೆ ಕಾಫಿತೋಟವಿರುವವರು 3,500 ಕ್ಕಿಂತ ಜಾಸ್ತಿಯಾಗಿ ನಿವ್ವಳ ಆದಾಯವನ್ನು ಮಾಡಿಕೊಳ್ಳುತ್ತಿದ್ದಾರೆಂದು ನಮ್ಮ ಗಮನಕ್ಕೆ ಬಂದಿದೆ. ಚೆನ್ನಾಗಿ ವ್ಯವಸಾಯ ಮಾಡಿದರೆ, ಈಗಿರತಕ್ಕ ಬೆಲೆಯೊಳಗೆ, ಸಂಪಾದನೆ ಮಾಡಬಹುದು. ಆದರೆ ಒಂದು standard exception ಸಾಧ್ಯವಾದ ಮಟ್ಟಿಗೆ ಇಟ್ಟುಕೊಂಡರೆ, assess ಮಾಡುವುದಕ್ಕೆ ಸುಲಭ. ಕ್ಲಿಷ್ಟವಾದ ಸಮಸ್ಯೆಗಳು ಬರುವುದಿಲ್ಲ. ಆ ದೃಷ್ಟಿಯಿಂದ plantation crops ಬೇರೆ ಘಟ್ಟದಲ್ಲಿ ಪರಿಶೀಲನೆ ಮಾಡಬೇಕೆಂದು ಮಾಡಿದ್ದು ಬಹಳ ಸಂತೋಷ. ಅದಕ್ಕೆ ನಾನು ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಇತರ commercial crops ವಿಷಯದಲ್ಲಿ ನಾವು ಆಲೋಚನೆಮಾಡಿದೆವು. ಇದೇ ತರಹ ಕಾನೂನು ಹೈದರಾಬಾದಿನಲ್ಲಿ ಜಾರಿಯಲ್ಲಿದೆ. ಮೈಸೂರಿನಲ್ಲಿ ಒಂದು ವಿಧದಲ್ಲಿ ಜಾರಿಯಲ್ಲಿದೆ. ಬೊಂಬಾಯಿನಲ್ಲಿ ಇಂಥ ಕಾನೂನು ಜಾರಿಯಲ್ಲಿಲ್ಲ. ಈ ವಿಷಯವನ್ನು ಪರಿಶೀಲನೆಗೆ ತಗೆದುಕೊಂಡೆವು. ಈ ಭಾಗದ ಜನಗಳು ಈ ಹೊಸ ತೆರಿಗೆ ಕ್ರಮಕ್ಕೆ ಹೊಂದಿಕೊಳ್ಳುವವರೆಗೆ, ಜನಗಳು ಇದರ ಬಗ್ಗೆ ಮಾಹಿತಿಪಡೆಯುವವರೆಗೆ, ಸ್ವಲ್ಪ exemption ಮತ್ತು composition ಇರತಕ್ಕದ್ದು ಅಗತ್ಯವೆಂದು ಸಮಿತಿಯ ಸದಸ್ಯರು ಮನಗಂಡರು. ಒಂದೇ ಒಂದು ದೃಷ್ಟಿಯನ್ನು ಆರಿಸಿದ ಸಮಿತಿಯವರು ಗಮನದಲ್ಲಿಟ್ಟುಕೊಂಡಿದ್ದರು. ಹಳೆಯ ಮೈಸೂರಿನವರು, ಮದರಾಸ್, ಹೈದರಾಬಾದ್, ಬೊಂಬಾಯಿ ಭಾಗಗಳಿಂದ ಬಂದಿರುವವರು ಎಲ್ಲರಿಗೂ ಸ್ವಲ್ಪ ಪ್ರಯೋಜನ ದೊರಕಲಿ ಎನ್ನುವ ದೃಷ್ಟಿಯಿಂದ ಸಣ್ಣಪುಟ್ಟ ಹಿಡುವಳಿದಾರರ ತಂಟೆಗೆ ಅಧಿಕಾರಿಗಳು ಹೋಗದೆ ಇದ್ದರೆ ಸಾಕು ಎಂದು ಒಂದು ಅಂಶವನ್ನು ಗಮನದಲ್ಲಿಟ್ಟುಕೊಂಡಿದ್ದರು. ಆದುದರಿಂದ ಒಂದು exemption ಕೊಟ್ಟರೆ, ಅದಕ್ಕಿಂತ ಕಡಮೆ ಪ್ರದೇಶವಿರುವವರ ತಂಟೆಗೆ ಅಧಿಕಾರಿಗಳು ಹೋಗುವುದಿಲ್ಲ. ಅವರನ್ನು harass ಮಾಡುವುದಿಲ್ಲವೆಂದು ಈ ವಿನಾಯಿತಿಯನ್ನು ಅಳವಡಿಸಲಾಗಿದೆ. ಈಗಿನ ಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಬಹಳ ಜನ ಅವಿದ್ಯಾವಂತರಿದ್ದಾರೆ. ಕೆಲವರು ವಿದ್ಯಾವಂತರಾಗಿದ್ದೂ ಲೆಕ್ಕವಿಟ್ಟುಕೊಳ್ಳದೆ ಇದ್ದರೆ, ಲೆಕ್ಕವಿಡುವುದಕ್ಕೆ ತೊಂದರೆಯಾಗಿದ್ದರೆ, ಅಂಥವರಿಗೆ ತಾತ್ಕಾಲಿಕವಾಗಿ ಪರಿಹಾರಕೊಡಬೇಕೆಂದು exemption ಮತ್ತು composition ಎರಡನ್ನೂ ಇಟ್ಟುಕೊಂಡೆವು. ಆ ದೃಷ್ಟಿಯಿಂದ ನಾವು ಈ ಕ್ಲಾಜನ್ನು ತಿದ್ದುಪಡಿಮಾಡಬೇಕಾಯಿತು. ಅದಕ್ಕೋಸ್ಕರವೇ ರಾಜ್ಯಪಾಲರ ಶಿಫಾರಸು ಬೇಕಾಗುತ್ತದೆಂದು ಪ್ರಾಮುಖ್ಯವಾದ ತಿದ್ದುಪಡಿಗಳನ್ನು ಸಭೆಯ ಮುಂದೆ annexure ರೂಪದಲ್ಲಿ ತಂದಿದ್ದೇವೆ. ಇದಕ್ಕೆ ರಾಜ್ಯಪಾಲರ ಅನುಮತಿ ದೊರೆತಿರುವುದರಿಂದ ನಾನು ಅದನ್ನು ತಿದ್ದುಪಡಿಯರೂಪದಲ್ಲಿ ಈ ಸಭೆಯ ಮುಂದೆ ಇಡುತ್ತಿದ್ದೇನೆ. ಅದನ್ನು ಇಲ್ಲಿ ಸದಸ್ಯರೆಲ್ಲರೂ ಆಲೋಚನೆ ಮಾಡಿ.

ಕೆಲವು ಮಾನ್ಯ ಸದಸ್ಯರು ಕೆಲವು ಸಂಶಯಗಳನ್ನು ವ್ಯಕ್ತಪಡಿಸುತ್ತಿದ್ದರು. ಭೂಸುಧಾರಣೆಗೆ ಅಡ್ಡಿ ಆತಂಕಬರಬಹುದು ಎಂದು ಹೇಳಿದ್ದಾರೆ. ನಾನು ಆ ವಿಷಯವನ್ನು ಆಲೋಚನೆಮಾಡಿದ್ದೇನೆ. ವ್ಯವಸಾಯೋತ್ಪನ್ನಗಳಮೇಲೆ ವಿಧಿಸತಕ್ಕ ಆದಾಯತೆರಿಗೆಯ ಮೇಲಾಗಲಿ, exemption ಅಥವಾ composition ಮೇಲಾಗಲಿ, ಭೂಸುಧಾರಣೆಯಿಂದ ಎಳ್ಳಷ್ಟು ಅಡ್ಡಿ ಆತಂಕ ಬರುವುದಿಲ್ಲ. ಏಕೆಂದರೆ ಇಲ್ಲಿ ನಾವು ಕೊಟ್ಟಿರುವ exemption limit ಸಾರೋದ್ಧಾರವಾಗಿ ಪ್ರತಿಯೊಂದು ಭೂಮಿಗೂ ಅನ್ವಯಿಸುವುದಿಲ್ಲ. ಯಾವ ಬೆಳೆಯನ್ನು ಯಾವ ಭೂಮಿಯ ಮೇಲೆ ಬೆಳೆಯುತ್ತಾನೆಯೋ ಆ ಪ್ರದೇಶಕ್ಕೆ ಮಾತ್ರ ಅನ್ವಯವಾಗುತ್ತದೆ. ಇದು rough and ready method. ಇದು ದೋಷಾತೀತವಾಗಿದೆ ಎಂದು ಹೇಳುವುದಿಲ್ಲ. ಇಷ್ಟು ಭೂಮಿ ಇರತಕ್ಕವರ ಗೋಜಿಗೆ ಹೋಗಬಾರದು, ನಾಲ್ಕುಜನ ತಪ್ಪಿಸಿಕೊಂಡರೂ ಚಿಂತೆ ಇಲ್ಲ ಎಂದು ಮಾಡಿದ್ದೇವೆ. ವ್ಯವಸಾಯಗಾರರು ಲೆಕ್ಕವನ್ನಿಟ್ಟರೆ, ತಂಟೆಯೇ ಇಲ್ಲ. Exemption ಕೊಟ್ಟಿರುವ limit ಮೇಲೆ ಎಷ್ಟು

ಎಕರೆಯಲ್ಲಿ ಬೆಳೆದರೂ 3,500 ರೂಪಾಯಿಗಳ ಮಿತಿಯೊಳಗಿದ್ದರೆ ತೆರಿಗೆಯನ್ನು ಕೊಡಬೇಕಾಗಿಲ್ಲ. ಆದರೆ ಪರಿಶೀಲನೆಗೆ ಅಗತ್ಯವಾದಂಥ ಎಲ್ಲ ಲೆಕ್ಕಗಳನ್ನೂ ಇಡಬೇಕು. ಸಾಮಾನ್ಯವಾಗಿ ಪರಿಶೀಲನೆ ಮಾಡುವುದಕ್ಕೆ exemption limit ಹಾಕಿರುವುದು ಒಂದು ಅನುಕೂಲಕ್ಕೆ ಎನ್ನುವುದನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಳ್ಳಬೇಕು. Exemption limit ಗೊತ್ತುಮಾಡುವುದರಲ್ಲಿ ಆರಿಸಿದ ಸಮಿತಿಯಲ್ಲಿದ್ದಂಥ ಸದಸ್ಯರು ಕೂಡ ಅವರ ಬುದ್ಧಿಗೆ ನಿಲುಕುವಷ್ಟುಮಟ್ಟಿಗೆ ಆಲೋಚನೆಮಾಡಿ, ಸಾಧಕಬಾಧಕಗಳನ್ನೆಲ್ಲ ಆಲೋಚನೆ ಮಾಡಿ, ಇದನ್ನು ಸ್ಥೂಲವಾಗಿ ಹೇಳಿದ್ದಾರೆಯೇ ವಿನಾ ಕರಾರುವಾಕ್ಕಾಗಿ, ಹೇಳಿದ್ದಾರೆಂದು ನಾನು ಹೇಳುವುದಿಲ್ಲ. ಅವರೂ ಹೇಳುವುದಿಲ್ಲ. ಅನೇಕ ಜನರಿಗೆ ತೊಂದರೆಯಾಗಬಹುದು. ಆ ಮಟ್ಟದಲ್ಲಿ ನಿವ್ವಳ ಆದಾಯ ಬರತಕ್ಕ ಸನ್ನಿವೇಶಗಳಿವೆ ಎಂದು ಮನಗಂಡಿದ್ದೇನೆ. ನೂರು ಎಕರೆಯ ಬೆಳೆಯಲ್ಲಿ ಆದಾಯ ಬರದೆ ಇರಬಹುದು, ಐದು ಎಕರೆಯಲ್ಲಿನ ಬೆಳೆಯಲ್ಲಿ ಆದಾಯ ಬರಬಹುದು. ಒಂದು ವಿಷಯ : ಆರಿಸಿದ ಸಮಿತಿಯಲ್ಲಿ ಸಹಕರಿಸಿದಂಥ ವಿರೋಧಪಕ್ಷದ ಸದಸ್ಯರಿಗೆಲ್ಲ ಋಣಿಯಾಗಿದ್ದೇನೆ. ಏಕೆಂದರೆ ತತ್ವಗಳ ಮೇಲೆ, ಯಾವ ಒಂದು dissenting note ಸಹ ಕೊಟ್ಟಿಲ್ಲ. I must pay my humble tribute to them. ಅವರು ಏನು ಹೇಳಿದ್ದಾರೆಂದರೆ, ಹಳೆಯ ಮೈಸೂರಿನಲ್ಲಿ ಈಗ ಇರುವಂತೆ 4,200 ರೂಪಾಯಿಗಳ ಮಿತಿಯನ್ನು ಮತ್ತು ಹಿಂದೂ ಅವಿಭಕ್ತ ಕುಟುಂಬವಾದರೆ 8,400 ರೂಪಾಯಿಗಳ ಮಿತಿಯನ್ನು ಇಡಬೇಕು. ಮೆಣಸಿನಕಾಯಿ, ಕೊತ್ತಂಬರಿಬೀಜ, ಈರುಳ್ಳಿ, ತೆಂಗಿನಕಾಯಿ ಇಷ್ಟುವಿನಾ, ಆರಿಸಿದ ಸಮಿತಿಯವರು ಈ ವಿಷಯವನ್ನು ಪರಿಶೀಲನೆಮಾಡಿರುವುದು ತಪ್ಪು ಎಂದು ಅವರು ಹೇಳಿಲ್ಲ. ಆದುದರಿಂದ ತತ್ವಕ್ಕೆ ವಿರೋಧಪಕ್ಷದವರ ಸಮ್ಮತಿ ಇದೆ. ಬೆಳ್ಳುಳ್ಳಿಯಲ್ಲಿ ಒಳ್ಳೆಯ ಔಷಧದ ಗುಣಗಳಿವೆ, ಬಾಣಂತಿಯರಿಗೆ ಬೆಳ್ಳುಳ್ಳಿಬೇಕು. ಇದರಲ್ಲಿ medicinal properties ಇದೆ ಎಂದು ಹೇಳಿದರು. ಸ್ಥೂಲವಾಗಿ ಬಾಕಿ ಎಲ್ಲ ಬೆಳೆಗಳ ಮೇಲೆಯೂ ಭಿನ್ನಾಭಿಪ್ರಾಯ ಸೂಚಿಸಿಲ್ಲ. ನಮಗೂ ಮತ್ತು ಅವರಿಗೂ identity of outlook ಇದೆ ಎನ್ನುವುದು ಸೆಲೆಕ್ಟ್ ಕಮಿಟಿ ವರದಿಯಿಂದ ಗೊತ್ತಾಗುತ್ತದೆ. Identity of outlook ಇದೆ, identity of interest ಇದೆ ಎಂದು ಹೇಳಿದಮೇಲೆ ವಿಶೇಷವಾಗಿ ಚರ್ಚೆಮಾಡಬೇಕಾಗಿಲ್ಲ. ಈರುಳ್ಳಿ, ಬೆಳ್ಳುಳ್ಳಿ, ಮೆಣಸಿನಕಾಯಿ, ತೆಂಗಿನಕಾಯಿ ಮತ್ತು ಕೊತ್ತಂಬರಿ ಬೀಜದ ವಿಷಯದಲ್ಲಿ ಚರ್ಚೆಮಾಡಬಹುದು. ಎಲ್ಲ ವಿಷಯಗಳನ್ನೂ ಶ್ರೀಮಾನ್ ಶಂಕರಪ್ಪನವರು ಆಲೋಚನೆ ಮಾಡಿದ್ದಾರೆ. ಅವರು ಹೇಳಿದಹಾಗೆ ಸಮಿತಿಯವರು ನಡೆದುಕೊಂಡಿದ್ದಾರೆ. ಹೆಚ್ಚಿಗೆ ನಾವು ಶ್ರಮಪಡಬೇಕಾದ ಅಗತ್ಯವಿಲ್ಲವೆನ್ನುವುದನ್ನು ಮಾತ್ರ ಹೇಳುತ್ತೇನೆ. ಆರಿಸಿದ ಸಮಿತಿಯವರು ಒಬ್ಬೊಬ್ಬರಿಗೆ ಹೊಂದಿಕೊಂಡು, ಇರತಕ್ಕ ಪರಿಸ್ಥಿತಿಯನ್ನು ಪರಿಶೀಲನೆಮಾಡಿದರು. ಅಗ್ರಿಕಲ್‌ಚರಲ್ ಇಣ್‌ಕಂ ಟ್ಯಾಕ್ಸ್ ಹಾಕುವುದು ಬೇಡವೆಂದು ಹೇಳುವವರು ಯಾರೂ ಇಲ್ಲ. ಈ ವಿಷಯದಲ್ಲಿ Taxation Enquiry Commission ಯವರು ಕರಾರುವಾಕ್ಕಾಗಿ ಹೇಳಿದ್ದಾರೆ :

> "We recommend that in all States, agricultural income above Rs. 3,000 a year should be liable to agricultural income tax. The limit is the same as recommended by us for non-agricultural income tax. It also happens to be the one adopted by most of the States."

ಆದುದರಿಂದ ಇದು ಹೊಸ ಪ್ರಶ್ನೆ ಏನೂ ಅಲ್ಲ.

ಎಲ್ಲ ದೃಷ್ಟಿಯಿಂದಲೂ ಕೂಡ ಆರಿಸಿದ ಸಮಿತಿಯವರು ಮಾಡಿರತಕ್ಕ ಶಿಫಾರಸುಗಳು, ಕೊಟ್ಟಿರತಕ್ಕ ಕಾರಣಗಳು, ಸಭೆಯ ಮುಂದೆ ತಿದ್ದುಪಡಿ ರೂಪದಲ್ಲಿ ಇಟ್ಟಿರತಕ್ಕ Annexure, ಮತ್ತು ಸಭೆಗೆ ಚೆನ್ನಾಗಿ ಗೊತ್ತಾಗಲಿ ಎಂದು ತಿದ್ದುಪಡಿಗಳನ್ನು ಪ್ರತ್ಯೇಕವಾಗಿ ಅಚ್ಚುಮಾಡಿ amendment ರೂಪದಲ್ಲಿ ಇದೆಲ್ಲವನ್ನೂ ವಿಮರ್ಶೆಗೆ ತೆಗೆದುಕೊಂಡು, ಆರಿಸಿದ ಸಮಿತಿಯವರು ಒಪ್ಪಿಸಿರತಕ್ಕ ವರದಿಯನ್ನು ಅಂಗೀಕರಿಸಬೇಕು.

ಇನ್ನೊಂದು ಅಂಶವನ್ನು ಹೇಳಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ. ಸೆಲೆಕ್ಟ್ ಕಮಿಟಿಯಲ್ಲಿನ ಸದಸ್ಯರಿಗೆ ವ್ಯವಸಾಯದ ಉತ್ಪನ್ನಗಳಮೇಲೆ ಆದಾಯ ತೆರಿಗೆ ಯಾವ ಯಾವ ಪ್ರಾಂತದಲ್ಲಿ ಹೇಗಿದೆ ಎಂದು ವಿಮರ್ಶೆಮಾಡಿರುವುದನ್ನು ಈ ಸಭೆಗೆ ಸಹ ವಿಮರ್ಶೆಮಾಡಿದರೆ, ಒಳ್ಳೆಯದು, ಚರ್ಚೆಮಾಡತಕ್ಕ ಕಾಲದಲ್ಲಿ ವಿಪರೀತ ಚರ್ಚೆಇಲ್ಲದಂತೆ ಮಸೂದೆಯು ಅಂಗೀಕಾರವಾಗಬಹುದು ಎನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತೇನೆ. Composition ವಿಚಾರ ಆಮೇಲೆ ಬರುತ್ತದೆ. ಎಲ್ಲ ಕಡೆಯೂ, ಹಳೆಯ ಮೈಸೂರು, ಕೊಡಗು, ಹೈದರಾಬಾದು, ಮದರಾಸ್, ಕೇರಳ, ಈ ಎಲ್ಲ ಕಡೆಗಳಲ್ಲಿಯೂ ಮೊದಲಿನ 1,500 ರೂಪಾಯಿಗಳವರೆಗೆ ಲೆಕ್ಕ ಹಾಕುವಾಗ ತೆರಿಗೆಯನ್ನೇನೂ ಹಾಕುವುದಿಲ್ಲ . . .

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಬರೀ ದಕ್ಷಿಣ ಇಂಡಿಯಾ ವಿಚಾರ ಹೇಳಿದಿರಿ. ಉತ್ತರ ದೇಶದಲ್ಲಿ ಯಾವರೀತಿ ಇದೆ ?

ಶ್ರೀ ಟಿ. ಮರಿಯಪ್ಪ.—ಉತ್ತರ ದೇಶದಲ್ಲಿಯೂ ಹಾಗೆಯೇ ಇದೆ. ನಮ್ಮ ಪಕ್ಕದಲ್ಲಿರುವ ದೇಶಗಳ ವಿಷಯವನ್ನು ಹೇಳುತ್ತೇನೆ. ಎರಡನೆಯ 3,500 ರೂಪಾಯಿಗಳಿಗೆ ಹಳೆಯ ಮೈಸೂರಿನಲ್ಲಿ $3\frac{1}{8}\%$, ಕೊಡಗಿನಲ್ಲಿ $3\frac{1}{8}\%$, ಹೈದರಾಬಾದಿನಲ್ಲಿ $3\frac{1}{8}\%$, ಕೇರಳದಲ್ಲಿ 5%, ಮದರಾಸಿನಲ್ಲಿ 5% ಈ ರೀತಿ ಇದೆ. ಹೊಸದಾಗಿ ಈ ಮಸೂದೆಯನ್ನು ತಮ್ಮ ಮುಂದೆ ಇಟ್ಟಿದ್ದೇವೆ. ಈಗ ತಾನೇ ಬೊಂಬಾಯಿ ಪ್ರಾಂತದವರು ಇಲ್ಲಿಗೆ ಬಂದಿದ್ದಾರೆ. ಅವರಲ್ಲಿ ಈ ತೆರಿಗೆ ಇಲ್ಲ. ಅವರುಗಳು ಗಾಬರಿಯಾಗಬಾರದು ; ಅವರನ್ನು ಬಹಳ ಜಾಗ್ರತೆ ಒಲಿಸಿಕೊಳ್ಳಬೇಕು ಎನ್ನುವ ಆಸೆ ಇದೆ. ಈ ದೃಷ್ಟಿಯಿಂದ ನಾವು 3% ತೆರಿಗೆಯ ದರವನ್ನೂ ಇಟ್ಟಿದ್ದೇವೆ.

ಆದುದರಿಂದ ಈ ಹೊಸ ಮಸೂದೆಯಲ್ಲಿ ಎರಡನೆಯ ಸ್ಲ್ಯಾಬ್ 3,500 ರೂಪಾಯಿಗೆ ಶೇಕಡ 3 ಮಾಡಿ ಶೇಕಡ $\frac{1}{8}$ ರಷ್ಟನ್ನು ಕಳೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ಹೈದರಾಬಾದು, ಮದರಾಸು ಮತ್ತು ಕೇರಳದಲ್ಲಿ ಮೂರು ಸಾವಿರ ಇದೆ. ಜನರಲ್ ಇಣ್‌ಕಂ ಟ್ಯಾಕ್ಸ್‌ನಲ್ಲಿಯೂ ಮೂರು ಸಾವಿರಕ್ಕೆ ಇಳಿಸಿದ್ದಾರೆ. ವ್ಯವಸಾಯದ ಇಣ್‌ಕಂಟ್ಯಾಕ್ಸ್‌ನಲ್ಲಿಯೂ ಕೂಡ ಇಳಿಸಿದ್ದೇವೆ. ಮೂರನೆಯ ಸ್ಲ್ಯಾಬ್ ಐದುಸಾವಿರ ಇಟ್ಟುಕೊಂಡಿದ್ದೇವೆ. ಹಳೆಯ ಮೈಸೂರಿನಲ್ಲಿ ಶೇಕಡ 6, ಕೊಡಗಿನಲ್ಲಿ $4\frac{1}{2}$, ಹೈದರಾಬಾದಿನಲ್ಲಿ $6\frac{1}{4}$ ಇತ್ತು. ಕೇರಳದಲ್ಲಿ ಈಗ ಶೇಕಡ 11, ಮದರಾಸಿನಲ್ಲಿ ಶೇಕಡ 10 ಇದೆ. ನಾವು ಸಮನ್ವಯ ಮಾಡುವುದರಲ್ಲಿ ಹಳೆಯ ಮೈಸೂರಿನಲ್ಲಿ $6\frac{1}{4}$ ಇದ್ದುದು ಈಗ 6 ಆಗಿದೆ.

(ಶ್ರೀ ಟಿ. ಮರಿಯಪ್ಪ)

ಮದರಾಸಿನಲ್ಲಿರುವಂತೆ 10 ಬೇಡ, ಕೇರಳದಲ್ಲಿರುವಂತೆ 11 ಬೇಡವೆಂದು ಹೊಸ ರಾಜ್ಯದಲ್ಲಿ ಶೇಕಡ ಆರನ್ನಿಟ್ಟು ಕೊಂಡಿದ್ದೇವೆ. ನಾಲ್ಕನೆಯ ಸ್ಲ್ಯಾಬ್ ಹಳೆಯ ಮೈಸೂರಿನಲ್ಲಿ ಶೇಕಡ 12½ ಇತ್ತು. ಕೊಡಗಿನಲ್ಲಿ 6¼, ಹೈದರಾಬಾದಿನಲ್ಲಿ 12½ ಇತ್ತು. ಕೇರಳದಲ್ಲಿ 18 ಮತ್ತು ಮದರಾಸಿನಲ್ಲಿ 20 ಇದೆ. ನಾವು ಕೇರಳದ ಮಟ್ಟಕ್ಕೆ ಹೋಗುವುದಕ್ಕಾಗುವುದಿಲ್ಲ. ನಾವೆಲ್ಲ ಬಂಡವಾಳಗಾರರ ಕಡೆಗೇ ಸಹಾಯವೆಂದು ಶ್ರೀಮಾರ್ನ ನರಸಿಂಹನ್ ಅವರು ಹೇಳುತ್ತಾರೆ. ಆದರೂ ಅಷ್ಟು ಮಟ್ಟಿಗೆ ಹೋಗಬೇಕಾಗಿಲ್ಲವೆಂದು ಕಡಿಮೆ ಇಟ್ಟು ಕೊಂಡಿದ್ದೇವೆ. ನಾಲ್ಕನೆಯ ಸ್ಲ್ಯಾಬ್ ಶೇಕಡ 9 ಇಟ್ಟುಕೊಂಡಿದ್ದೇವೆ. ಕಡಮೆಯಾದರೂ ಚಿಂತೆಯಿಲ್ಲ ವೆಂದು ಹೀಗೆ ಮಾಡಿದ್ದೇವೆ. ಐದನೆಯ ಸ್ಲ್ಯಾಬ್ ಹಳೆಯ ಮೈಸೂರಿನಲ್ಲಿ ಶೇಕಡ 18¾, ಕೊಡಗಿನಲ್ಲಿ 9½, ಹೈದರಾಬಾದಿನಲ್ಲಿಯೂ ಇಷ್ಟು. ಇದಕ್ಕೆ ಕೇರಳದಲ್ಲಿ ಶೇಕಡ 25ರಷ್ಟು ಹಾಕಿದ್ದಾರೆ. ಮದರಾಸಿನಲ್ಲಿಯೂ ಇಷ್ಟೇ ಇದೆ. ಆದರೆ ನಾವು 12 ಮಾಡಿದ್ದೇವೆ. ಇದು ಕಡಮೆ. ಆರನೆಯ ಸ್ಲ್ಯಾಬ್ ಹಳೆಯ ಮೈಸೂರಿನಲ್ಲಿ ಶೇಕಡ 25 ಇತ್ತು, ಕೊಡಗಿನಲ್ಲಿ 12½ ಇತ್ತು, ಹೈದರಾಬಾದಿನಲ್ಲಿ ಇದಕ್ಕೆ ಮೇಲ್ಪಟ್ಟು ಎಲ್ಲಕ್ಕೂ 18¾ ಇತ್ತು. ಮದರಾಸು ಮತ್ತು ಕೇರಳ ದಲ್ಲಿ 30 ಇದೆ. ನಾವು 15 ಮಾಡಿದ್ದೇವೆ. ಏಳನೆಯ ಸ್ಲ್ಯಾಬ್–ಹಳೆಯ ಮೈಸೂರಿನಲ್ಲಿ 7 ರಿಂದ 10ನೆಯ ಸ್ಲ್ಯಾಬ್‌ವರೆಗೆ 31¼ ಹಾಕಿದ್ದರು, ಕೊಡಗಿನಲ್ಲಿ 15¾ ಇತ್ತು, ನಾವು 18 ಮಾಡಿದ್ದೇವೆ. ಎಂಟನೆಯದಕ್ಕೆ ಕೊಡಗಿನಲ್ಲಿ 18¾ ಇತ್ತು, ನಾವು 21 ಹಾಕಿದ್ದೇವೆ. 9 ನೆಯದಕ್ಕೆ ನಾವು 25 ಮಾಡಿದ್ದೇವೆ; ಇದರಮೇಲೆ ಬಾಕಿ ಎಲ್ಲಕ್ಕೂ 40 ಹಾಕಿದ್ದೇವೆ. ಮದರಾಸಿ ನಲ್ಲಿಯೂ ಇದರಮೇಲೆ 40 ಹಾಕಿದ್ದಾರೆ. ಕೇರಳದಲ್ಲಿ ಬಹಳ ಹೆಚ್ಚಿನ ದರವಲ್ಲದೆ ಸರ್‌ಚಾರ್ಜ್ ಹಾಕಿದ್ದಾರೆ, ಸೂಪರ್‌ಟ್ಯಾಕ್ಸ್ ಹಾಕಿದ್ದಾರೆ. ಒಟ್ಟಿನಲ್ಲಿ ಕೇರಳದಲ್ಲಿ ವ್ಯವಸಾಯ ವರಮಾನದ ತೆರಿಗೆ ಹೆಚ್ಚು. ಮದರಾಸಿನಲ್ಲಿ 25 ಸಾವಿರದ ಮೇಲೆ ಶೇಕಡ 40 ಹಾಕಿದ್ದಾರೆ, ಅದೂ ಹೆಚ್ಚು. ಯುರೋಪಿಯನ್ನರು, ಇಂಡಿಯನ್ನರು ಎಂದು ವ್ಯತ್ಯಾಸಮಾಡುವುದಕ್ಕಾಗುವುದಿಲ್ಲ. ಖುಷಿ ಮೂಲಕ್ಕೆ ಹೋಗಬಾರದೆಂದು ಮಾತ್ರ ಹೇಳುತ್ತೇನೆ. ಕೊಡಗಿನಲ್ಲಿ ಯುರೋಪಿಯನ್ ಪ್ಲಾಂಟರುಗಳೂ ಇದ್ದಾರೆ, ಇಂಡಿಯನ್ ಪ್ಲಾಂಟರುಗಳೂ ಇದ್ದಾರೆ. ನಾವು ತತ್ವದ ಮೇಲೆ ಹೊರಟು ನಿವ್ವಳ ಆದಾಯದ ಮೇಲೆ ಹಾಕಿದ್ದೇವೆ. ಎಲ್ಲ ದೃಷ್ಟಿಯಿಂದಲೂ ಆರಿಸಿದ ಸಮಿತಿಯವರು ಇದನ್ನು ಕೂಲಂಕಷವಾಗಿ ವಿಮರ್ಶೆಮಾಡಿ, ಸರ್ಕಾರದವರು ಏನು slab rates ಇಟ್ಟಿದ್ದಾರೋ ಅದನ್ನೇ ಇಟ್ಟುಕೊಳ್ಳೋಣವೆಂದು ಅಭಿಪ್ರಾಯಪಟ್ಟು ಹೀಗೆ ಮಾಡಿದ್ದಾರೆ. ನಾವು ಒಂದು ಲಕ್ಷ ರೂಪಾಯಿಗೆ ಮೇಲ್ಪಟ್ಟ ಉತ್ಪನ್ನದ ಮೇಲೆ ಶೇಕಡ 40 ಮಾಡಿದ್ದೇವೆ. ಮದರಾಸಿಗಿಂತಲೂ ನಮ್ಮ ದರ ಕಡಮೆ. ಒಂದು ವಿಷಯವನ್ನು ಹೇಳಬೇಕಾಗಿದೆ. Commercial crops ನಲ್ಲಿ scattered holdings ಇರುವುದರಿಂದ ಲೆಕ್ಕಾಚಾರಮಾಡುವುದು ಕಷ್ಟವಾಗುತ್ತದೆ. ಆದರೆ plantation crops ನಲ್ಲಿ ಇದು ಸುಲಭ. ಕಾಫಿ ಬೆಳೆದುದನ್ನು ಕಾಫಿ ಬೋರ್ಡಿಗೆ ಕೊಡಬೇಕು. ಆದಾಯ ಗೊತ್ತಾಗುತ್ತದೆಂದು ಬೇರೆ plantation cropsಗೆ ಸ್ವಲ್ಪ ಹೆಚ್ಚು ಹಾಕಿ, commercial cropsಗೆ compounding ಇಟ್ಟಿದ್ದೇವೆ. ಇದು ಬಹಳ ಉದಾರವಾಗಿದೆ. ಆದುದರಿಂದ ಸಮಿತಿಯವರು ಎಲ್ಲವನ್ನೂ ವಿಮರ್ಶೆಮಾಡಿ ಒಪ್ಪಿಕೊಂಡಿದ್ದಾರೆ. ಅವರು ದೂರದೃಷ್ಟಿಯಿಂದ ಯೋಚನೆ ಮಾಡಿದ್ದಾರೆ. ಸರ್ಕಾರಕ್ಕೆ ಬರುವ ವರಮಾನ ಕಡಮೆಯಾಗುತ್ತದೆ. ಕಮರ್ಷಿಯಲ್ ಕ್ರಾಪ್ಸ್‌ನಿಂದ ಬರುವ ವರಮಾನ ಬಹಳ ಕಡಮೆ, ಹೆಚ್ಚು ಕಾಂಪೌಂಡಿಂಗ್ ಕೊಡಬಾರದೆಂದು ಅನೇಕ ಜನರು ಹೇಳುತ್ತಾರೆ; ಆದರೂ ಯಾರಿಗೂ ಮನಸ್ಸಿಗೆ ನೋವು ಉಂಟಾಗಬಾರದೆಂದು ಹೀಗೆ ಮಾಡಿದ್ದೇವೆ. ಅಲ್ಲದೆ ಭೂಸುಧಾರಣೆ ಜಾರಿಗೆ ತಂದರೆ ತೊಂದರೆಯಾಗದೆ ಇರಲೆಂದು ಮಾಡಿದ್ದೇವೆ. ಈ ವರ್ಷ ಒಂದು ಬೆಳೆ, ಮುಂದಿನ ವರ್ಷ ಒಂದು ಬೆಳೆ, ಹೀಗೆ ಕಮರ್ಷಿಯಲ್ ಕ್ರಾಪ್ಸ್ ಹಾಕುತ್ತಾರೆ. ಆದುದರಿಂದ ಯೋಚನೆ ಮಾಡಿ ಎಲ್ಲ ದೃಷ್ಟಿಯಿಂದಲೂ ಮತ್ತು ಸ್ಪಷ್ಟವಾಗಿ ಮಾಡುವ ದೃಷ್ಟಿಯಿಂದಲೂ ಮಾಡಿದ್ದೇವೆ. ಒಟ್ಟಿನಲ್ಲಿ ವಿನಾಯಿತಿಯ limit ಮತ್ತು composition ಮಾಡಿರುವುದು ಒಳ್ಳೆಯದು. ಇದು ಇಂಡಿಯಾದೇಶದ ಯಾವ ಭಾಗದಲ್ಲಿಯೂ ಇಲ್ಲ. This is specially devised for Mysore. ವಿನಾಯಿತಿಯ ಮಿತಿ ಯೊಳಗೆ ಯಾವ ತೊಂದರೆಯೂ ಇಲ್ಲ. Eighty per cent will escape on account of exemption. Composition ನಲ್ಲಿ ಎಲ್ಲರೂ ಕಾಂಪೌಂಡ್‌ಮಾಡಿಕೊಂಡರೆ ಗೊತ್ತಾದ ತೆರಿಗೆಕೊಡು ವುದಕ್ಕೆ ಅನುಕೂಲವೆಂದು ಹೀಗೆ ಮಾಡಿದ್ದಾರೆ. ಆದುದರಿಂದ ಈ ತಿದ್ದುಪಡಿಗಳನ್ನು ಅಂಗೀಕಾರ ಮಾಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ. ವ್ಯವಸಾಯ ಉತ್ಪನ್ನದ ತೆರಗೆ ವಿಚಾರದಲ್ಲಿ ಮಾನ್ಯ ಸಚಿವರು ಸೆಲೆಕ್ಟ್ ಕಮಿಟಿಯಲ್ಲಿ ಕೆಲವಾರು ವಿಷಯಗಳನ್ನು ಹೇಳಿದರು. ಆಗ ಎದರು ಪಕ್ಷದವರೂ ಸಹಿತ ಅಲ್ಲಿ ಇದ್ದರು. ಅವರು ಕೆಲವಾರು ಮಾಲುಗಳನ್ನು ಮಾತ್ರ ತೆಗೆಯಿರಿ ಮತ್ತು ಕೆಲವಾರು ರೇಟ್‌ಗಳನ್ನು ಹೀಗೆ ಮಾಡಿ ಎಂದು ಕೆಲವು ಸಲಹೆಗಳನ್ನು ಕೊಟ್ಟರೇ ವಿನಾ ತಾತ್ವಿಕವಾಗಿ ಯಾವುದೊಂದೂ ಹೇಳಲಿಲ್ಲ.

ಶ್ರೀ ಟಿ. ಮರಿಯಪ್ಪ.—ನಿಮ್ಮ ಡಿಸ್ಸೆಂಟಿಂಗ್ ನೋಟ್‌ನಲ್ಲಿ ಹೇಳಿದ್ದೀರಿ.

ಶ್ರೀ ಕೆ. ಕೆಂಚಪ್ಪ.—ಡಿಸ್ಸೆಂಡಿಂಗ್ ನೋಟ್‌ನಲ್ಲಿ ಈ ತತ್ವದ ಮೇಲೆ ಬರೆಯುತ್ತಾ ಹೋದರೆ ಅದು ಡಿಸ್ಸೆಂಟಿಂಗ್ ನೋಟ್ ಆಗುವುದಿಲ್ಲ. ಅದು ಒಂದು ಪ್ರಬಂಧ (thesis) ಆಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರಬಂಧ ಬರೆಯುವುದು ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ನಾವು ವಿಚಾರವರಿತು ಮಾಡಬೇಕೆಂದು ಅಲ್ಪ ಸ್ವಲ್ಪ ಪ್ರಯತ್ನಮಾಡಿದ್ದೇವೆ. ಅದನ್ನು ವಿಚಾರ ಮಾಡಿ ನೋಡಿದರೆ ನಾವು ತಾತ್ವಿಕವಾಗಿ ಈ ಮಸೂದೆಯನ್ನು ವಿರೋಧಿಸುವುದು ಬಹಳ ಕಷ್ಟ. ಸೋಷಿಯಲಿಸ್ಟ್ ಪಾರ್ಟಿಯವರಾದ ನಾವು ಇಂತಹ ಮಸೂದೆಯನ್ನು ಸ್ವಾಗತಿಸುತ್ತೇವೆ. ಆದರೆ ಇರತಕ್ಕ ಪ್ರಕೃತ ಸನ್ನಿವೇಶದಲ್ಲಿ ನಾವು ಇದನ್ನು ವಿರೋಧಿಸಬೇಕಾಗಿದೆ ಎಂದು ಹೇಳಿದ್ದೇವೆ. ಈಗ ಅದೇನು ಪ್ರಕೃತ ಸನ್ನಿವೇಶ ಎಂಬುದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಏಕೆಂದರೆ ಇದು ವ್ಯವಸಾಯೋತ್ಪನ್ನದ ಮೇಲೆ ಹಾಕತಕ್ಕ ತೆರಿಗೆ. ಆದ್ದರಿಂದ ವ್ಯವಸಾಯಗಾರನ ಮೇಲೆ ಬೀಳತಕ್ಕ ತೆರಿಗೆಗಳ ವಿಚಾರವಾಗಿ ಬಹಳ ಹುಷಾರಾಗಿಇರಬೇಕು. ಅದರಲ್ಲೂ ಹಿಂದೂಸ್ಥಾನ ದಲ್ಲಿ ಬಹಳ ಹುಷಾರಾಗಿರಬೇಕಾಗಿದೆ. ಈಗ ಬೇಸಿಕ್ ಟಾಕ್ಸೇಷನ್ ಎಂದು ಒಂದಿದೆ. ಕಮರ್ಷಿಯಲ್ ಟ್ಯಾಕ್ಸೇಷನ್ ಎಂದು ಇನ್ನೊಂದಿದೆ, ಅಥವಾ ಇದನ್ನು ಇನ್‌ಕಂಟ್ಯಾಕ್ಸ್ ಎಂದು ಹೇಳಬಹುದು. ಬೇಸಿಕ್ ಟ್ಯಾಕ್ಸೇಷನ್ ಎನ್ನುವುದರಲ್ಲಿ ಜಮೀನಿನ ಕಂದಾಯ,

ನೀರಾವರಿ ಕಂದಾಯ, ಕಂಟ್ರಿಬ್ಯೂಷನ್ ಮೊಬಲಗು, ಸೆಸಸ್ ವಗೈರೆ ಬರುತ್ತವೆ. ಕಮರ್ಷಿಯಲ್ ಕ್ರಾಪ್ಸ್ ಎನ್ನುವ ಒಂದು ಭಾವನೆಯನ್ನೇ ನಾವು ವಿರೋಧಿಸುತ್ತೇವೆ. ಕಮರ್ಷಿಯಲ್ ಕ್ರಾಪ್ಸ್ ಎಂದು ತಾವು ಡಿಫೈನ್ ಮಾಡಿದಾಕ್ಷಣಕ್ಕೆ ಕಮರ್ಷಿಯಲ್ ಕ್ರಾಪ್ಸ್ ಆಗುವುದಿಲ್ಲ. ಮೂಲಭೂತವಾಗಿ ವ್ಯವಸಾಯಗಾರನು ಯಾವ ಸಾಮಾನನ್ನು ಉತ್ಪತ್ತಿ ಮಾಡುತ್ತಾನೋ ಅದರ ಮೇಲೆ ಈ ತೆರಿಗೆ ಬೀಳುತ್ತದೆ. ಯಾವ ಪದಾರ್ಥ ಬೆಳೆದರೂ ಅದರ ಮೇಲೆ ತೆರಿಗೆ ಹಾಕುವ ಪದ್ಧತಿಯನ್ನು ನಾವು ಸಂಪೂರ್ಣವಾಗಿ ಒಪ್ಪುತ್ತೇವೆ. ಆದರೆ ಇಲ್ಲಿ ಏಕೆ ವಿರೋಧಿಸುತ್ತೇವೆ ಎಂದರೆ, ತಾತ್ವಿಕವಾಗಿ ಈ ವರಮಾನ ತೆರಿಗೆ, ಜಮೀನಿನ ಮೇಲೆ ತೆರಿಗೆ ಅಥವಾ ಕಂದಾಯ, ನೀರಾವರಿ ಕಂದಾಯ, ಸೆಸ್ ಎಲ್ಲವನ್ನೂ ಜೋಡಿಸಿಕೊಂಡು ಆಲೋಚನೆಮಾಡಬೇಕಾದುದು ಅರ್ಥ ಶಾಸ್ತ್ರದ ಒಂದು ನೀತಿ. ನೀವು ಸುಮ್ಮನೆ ವರಮಾನದ ತೆರಿಗೆಯನ್ನು ಹಾಕುತ್ತೇವೆ ಎಂದು ಹೇಳಿದರೆ ಅದನ್ನು ನಾವು ಆಲೋಚನೆ ಮಾಡುವ ಹಾಗೆ ಇಲ್ಲ. ನೀರಾವರಿ ಕಂದಾಯ,ಭೂಕಂದಾಯ ವಗೈರೆಗಳನ್ನು ನಾವು ಆಲೋಚನೆ ಮಾಡುವ ಸ್ಥಿತಿಯಲ್ಲಿಲ್ಲ. ಅದು ನಮ್ಮ ಎದುರಿಗೆ ಇಲ್ಲವೆಂದು ಹೇಳುತ್ತೇನೆ. ನಾನು ತಾತ್ವಿಕವಾಗಿ ಹೇಳುತ್ತೇನೆ. ನಾವು ಅರ್ಥ ಶಾಸ್ತ್ರದ ವಿಚಾರವಾಗಿ ಅಷ್ಟು ಹೆಚ್ಚಾಗಿ ಗಮನ ಕೊಡುತ್ತಾ ಇಲ್ಲ. ನಾನು ಮೊದಲೇ ಹೇಳಿದ ಹಾಗೆ ಯಾವಾಗಲೂ ಮದರಾಸಿನಲ್ಲಿ ಹೀಗಿದೆ, ಬೊಂಬಾಯಿನಲ್ಲಿ ಹೀಗಿದೆ ಎಂದು ಮಂತ್ರಿಗಳು ಜಪ ಮಾಡುವುದೇ ಹೊರತು ಧಾರ್ಮಿಕ ದೃಷ್ಟಿಯಿಂದ ಆಲೋಚನೆ ಮಾಡುತ್ತಾ ಇಲ್ಲ ಎಂದು ಹೇಳಿದರೆ ಅವರು ಒಪ್ಪಿಕೊಳ್ಳಬೇಕು. 1948ನೆಯ ಇಸವಿಯೊಳಗೆ ಏತಕ್ಕೆ ವ್ಯವಸಾಯ ವರಮಾನ ತೆರಿಗೆಯನ್ನು ಹಾಕಲಿಲ್ಲ? ಅದಕ್ಕೆ ಉತ್ತರ ಕೊಟ್ಟಿದ್ದೀರಾ? 1948ನೆಯ ಇಸವಿಯಿಂದೀಚೆಗೆ ಏನು ತೆರೆಗೆಯನ್ನು ಹಾಕಿದ್ದೀರೋ ಅದನ್ನು ಬಿಟ್ಟುಬಿಡಿರಿ. ನಾವು ಮಾದರಿಸಂಸ್ಥಾನದವರು. ಆದಕ್ಕೋಸ್ಕರ ಒಂದು ಮಾದರಿಯಾಗಿಯೇ ಇರಬೇಕು ಎಂದಿರುವಾಗ ಇನ್ನೊಬ್ಬರ ಮಾದರಿಯನ್ನು ಅನುಸರಿಸುವುದು ಲಕ್ಷಣವಲ್ಲ. ದೇಶದಲ್ಲಿ ಇತರರನ್ನು ಅನುಕರಣ ಮಾಡುವ ಒಂದು ಪದ್ಧತಿ ಬಂದಿದೆ. ಇಂಡಿಯಾ ಟ್ಯಾಕ್ಸೇಷನ್ ಎನ್‌ಕ್ವೈರಿ ಕಮಿಷನ್ನಿನವರು ಮದರಾಸಿನಲ್ಲಿ ತೆರಿಗೆ ಹಾಕಿದ್ದಾರೆ, ಬೊಂಬಾಯಿನಲ್ಲಿ ಏಕೆ ಹಾಕಲಿಲ್ಲವೆಂದು ವಿಚಾರಮಾಡಿದ್ದಾರೆ. ಅದಕ್ಕಾಗಿ ಒಂದು ಮಸೂದೆಯನ್ನು ತಂದು ಪಾಸ್‌ಮಾಡಿ ಮುಗಿಸಿದ್ದಾರೆ. ಏಕೆಂದರೆ ಜಮೀನು ಕಂದಾಯ, ನೀರಾವರಿಕಂದಾಯ ಮತ್ತು ಕಂಟ್ರಿಬ್ಯೂಷನ್ ಇವೆಲ್ಲವನ್ನೂ ಒಟ್ಟಿಗೆಸೇರಿಸಿ ಮಾಡತಕ್ಕದ್ದು ಶಾಸ್ತ್ರೋಕ್ತವಾಗುತ್ತದೆಯೇ ಹೊರತು ಬೇರೆ ಏನೂ ಆಗುವುದಿಲ್ಲ. ವರಮಾನ ತೆರಿಗೆ ಕೊಡುವವರು ಕಡಮೆ. ಜನರಿಗೆ ಉತ್ಪತ್ತಿ ಕಡಮೆ. ತೆರಿಗೆಯ ಬೀಳಬಾರದು ಎನ್ನುವ ಒಂದು ವಿಚಾರವಿದೆ. ಈ ದೃಷ್ಟಿಯಿಂದ ನಾನು ಒಂದು ಅಭಿಪ್ರಾಯವನ್ನು ಕೊಡುತ್ತೇನೆ. Report of the Committee for the Revision of Land Revenue System in Mysore ಎನ್ನುವುದರಲ್ಲಿ ಒಂದು ವಿಚಾರವಿದೆ. ಕೆಲವಾರು ದಿನಗಳ ಹಿಂದೆ ಈ ವಿಚಾರ ಮಾಡುವಾಗ ಈರೀತಿ ಹೇಳಿದ್ದಾರೆ:

"The proposal to replace the existing system by the levy of a basic land tax and a graduated tax on agricultural incomes does not find much support in the replies of both officials and non-officials, as only 116 replies favour it while 234 replies are for retention of the existing system. Ten replies favour the levy of a basic tax without agricultural income-tax. The Socialist Party is for agricultural income-tax without basic tax. Even the replies supporting the basic tax scheme do not all agree regarding the rate of the basic tax. Some are for the rate being uniform all over the State and in respect of all classes of cultivation, while others are for a tax based on the classification of the land and the facilities enjoyed by it."

ಇದನ್ನು ಏಕೆ ಹೇಳುತ್ತೇನೆ ಎಂದರೆ, ಇದುವರೆಗೂ ನಮ್ಮಲ್ಲಿ ವಿಧಿಸಿರತಕ್ಕ ಕಂದಾಯದ ವಿಧಾನವನ್ನು ನೋಡಿದರೆ, ಭೂಮಿಯ ಮೇಲೆ ಬರತಕ್ಕ ವರಮಾನದ ನಿಗದಿ ಮೇಲೆ ಮಾಡಿದ್ದಾರೆ. ಇದನ್ನೂ ಸಹ ತಾವು ವರಮಾನದ ತೆರಿಗೆಯೆಂದು ಹೇಳುತ್ತೀರಿ. ಬೊಂಬಾಯಿಯಲ್ಲಿ ಉತ್ಪನ್ನಕ್ಕೆ ತಕ್ಕ ವರಮಾನದ ತೆರಿಗೆ ಎಂದು ಹೇಳುತ್ತಾರೆ. ರೀಕ್ಲಾಸಿಫಿಕೇಷನ್ ಅಂಡ್ ಸರ್ವೆ ಸೆಟಲ್‌ಮೆಂಟ್ ಪದ್ಧತಿಯಲ್ಲಿ ಒಂದು ಮುಖ್ಯವಾಂಅಂಶವನ್ನು ಗಮನದಲ್ಲಿಟ್ಟುಕೊಂಡು ಜಮೀನಿನ ಕಂದಾಯವನ್ನು ನಿಗದಿ ಮಾಡಿದ್ದಾರೆ. ಜಮೀನಿನ ಕಂದಾಯವನ್ನು ನಿಗದಿಮಾಡುವಾಗ ಯಾವ ಭಾಗದಿಂದ ವರಮಾನ ಬರಬೇಕು ಎಂದು ಅದರಲ್ಲಿ ನಮೂದು ಮಾಡಿದೆ. ತಾತ್ವಿಕವಾಗಿ ಇನ್ನೊಂದುರೀತಿಯಲ್ಲಿ ಹೆಸರು ಕರೆದು ವರಮಾನದ ತೆರಿಗೆ ವಿಧಿಸುವಾಗ ಅರ್ಥ ಶಾಸ್ತ್ರ ವಿಚಾರವೇನಾದರೂ ಇದೆಯೇ ಎನ್ನುವ ಪ್ರಶ್ನೆಯನ್ನು ಮಾಡಬೇಕಾಗಿದೆ. ಈಗ ಇನ್ನೊಂದು ವಿಚಾರವನ್ನು ಆಲೋಚನೆ ಮಾಡಬೇಕಾಗಿದೆ. ಅದು ಈ ರೀತಿ ಇದೆ:

"The taxation of agricultural incomes has not found much support. Only 110 replies favour the levy of income-tax on agricultural incomes while 238 replies are against such a levy. Apart from the Economists and the Socialist Party who fully support agricultural income-tax, the only other class supporting it are the officers in service."

ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ, ಒಂದು ಪದ್ಧತಿ ನಮ್ಮಲ್ಲಿ ರಕ್ತಗತವಾಗಿ ಅಭ್ಯಾಸದ ಮೇಲೆ ಬಂದಿರಬಹುದು. ಆದರೆ ಈ ಪದ್ಧತಿಯಲ್ಲೂ ಸಹ ಸರ್ವೆ ಸೆಟಲ್‌ಮೆಂಟ್ ವಗೈರೆ ಅನುಸರಿಸುವಾಗ ಉತ್ಪನ್ನವನ್ನು ಗಮನದಲ್ಲಿಟ್ಟುಕೊಂಡು ತೆರಿಗೆಯನ್ನು ಹಾಕುವುದು ನಮ್ಮ ಪದ್ಧತಿಗೆ ವಿರೋಧವಾಗಿದೆ. ಆದ್ದರಿಂದ ಸೋಷಿಯಲಿಸ್ಟ್ ಪ್ಯಾಟರನ್ ಆಫ್ ಸೊಸೈಟಿ ಸ್ಥಾಪಿಸುವಾಗ ನೀವು ವ್ಯವಸಾಯ ವರಮಾನ ತೆರಿಗೆ ಹಾಕು

(ಶ್ರೀ ಕೆ. ಕೆಂಚಪ್ಪ)

ವುದರ ಮೂಲಕ ನೀರಾವರಿಕಂದಾಯವನ್ನು ಕೆಲವು ಅಂತಸ್ತಿನವರೆಗೆ ಹಾಕಕೂಡದು.

9.30 A.M.

ಪೂರ್ಣವಾಗಿ ಕಂದಾಯವನ್ನು ತೆಗೆದುಹಾಕಿಬಿಡಬೇಕು, ಭೂಮಿಯ ಮೇಲೆ ವರಮಾನ ತೆರಿಗೆ ಹಾಕುವುದರಿಂದ ಕಂದಾಯವನ್ನೂ ಹಾಕಿದರೆ ಅದು ಶಾಸ್ತ್ರಕ್ಕೆ ವಿರುದ್ಧವಾಗುತ್ತದೆ, ಮಲ್ಟಿ ಟ್ಯಾಕ್ಸ್ ಆಗುತ್ತದೆ. ನಾನಾ ವಿಧವಾಗಿ ತೆರಿಗೆ ಹಾಕುವುದು ಅರ್ಥ ಶಾಸ್ತ್ರಕ್ಕೆ ವಿರುದ್ಧವಾಗಿದೆ. ಈ ದೃಷ್ಟಿಯಿಂದ ಜನಾಂಗದ ಮೇಲೆ ಆಗುವ ಅನೇಕ ಪರಿಣಾಮ, ಅನರ್ಥ ಇವುಗಳನ್ನೆಲ್ಲಾ ಆಲೋಚನೆ ಮಾಡಲೇ ಬೇಕಾಗುತ್ತದೆ. ಇದನ್ನೆಲ್ಲಾ ಚರ್ಚೆ ಮಾಡಿ ಅರ್ಥಶಾಸ್ತ್ರ ನಿಪುಣರು ಭೂಕಂದಾಯ ತೆಗೆಯಿರಿ, ವರಮಾನ ತೆರಿಗೆ ಹಾಕಿ ಎಂದು ಹೇಳಿದರು. ಇದನ್ನೆಲ್ಲಾ ನಾವು ಸೆಲೆಕ್ಟ್ ಸಮಿತಿಯಲ್ಲಿ ಹೇಳಿ ಸರಿಯಾದ ಕ್ರಮವನ್ನನುಸರಿಸುವಂತೆ ಮಾಡಲು ಸಾಧ್ಯವಿಲ್ಲದೆ ಡಿಸೆಂಟಿಂಗ್ ನೋಟ್ ಕೊಡಬೇಕಾಯಿತು. ಹಿಂದೆಯೂ ಈ ವಿಚಾರ ಹೇಳಿದ್ದೇನೆ. ಜಮೀನು ಮೇಲಿರುವ ತೆರಿಗೆಯ ವಿಚಾರದಲ್ಲಿ ನಾವು ಕೈ ಹಾಕಿಲ್ಲ. ಸಮಾಜವಾದದ ವಿಚಾರ ಹೇಳುವಾಗ ಈ ರೀತಿ ತೆರಿಗೆ ಹಾಕುವುದು ಅದಕ್ಕೆ ವಿರುದ್ಧ. ಆ ದೃಷ್ಟಿಯಿಂದ ನಾವು ಪದೇ ಪದೇ ಗಮನಕ್ಕೆ ತರುತ್ತಿದ್ದೇವೆ. ಆದರೂ ಸಹ ಈ ವಿಚಾರದಲ್ಲಿ ಟ್ರೆಜರಿ ಬೆಂಚಿನಿಂದ ಸರಿಯಾದ ಉತ್ತರ ಬಂದಿಲ್ಲ. ಕಂದಾಯ ಮತ್ತು ವರಮಾನ ತೆರಿಗೆ ಎರಡೂ ಹಾಕುವುದು ತಪ್ಪಾಗುತ್ತದೆಂದು ಹೇಳಲೇಬೇಕಾಗಿದೆ.

ಇನ್ನು ಮೂಲಭೂತವಾದ ತತ್ವದ ಜೊತೆಗೆ ಇದರಲ್ಲಿರುವ ಲೋಪದೋಷಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ವರದಿಯಲ್ಲಿ ಹೆಚ್ಚು ವಿಚಾರಗಳಿವೆ. ವರಮಾನ ತೆರಿಗೆಯ ವಿಚಾರದಲ್ಲಿ ಆಲೋಚನೆಮಾಡುವಾಗ ವ್ಯವಸಾಯದ ಉತ್ಪನ್ನಗಳ ಮೇಲೆ ತೆರಿಗೆಹಾಕುವಾಗ ವ್ಯವಸಾಯದ ಉತ್ಪನ್ನಗಳಿಗೆ ಮಾತ್ರ ತೆರಿಗೆ ಹಾಕಬೇಕೇ ವಿನಾ ಬೇರೆ ಪದಾರ್ಥಗಳಿಗೆ ಹಾಕಬಾರದು ಎಂಬ ಭಾವನೆಯಿದೆ. ಅದನ್ನು ವರದಿಯಿಂದ ಬೇಕಾದರೆ ಓದುತ್ತೇನೆ. ವರಮಾನ ತೆರಿಗೆ ಮತ್ತು ವ್ಯವಸಾಯದ ಉತ್ಪನ್ನಗಳ ಮೇಲಿನ ವರಮಾನ ತೆರಿಗೆ ಎಂದು ಎರಡು ತರಹ ಇರುವುದು ತಪ್ಪು ದಾರಿಯನ್ನು ಪ್ರಜೆಗಳಿಗೆ ಸೂಚಿಸಿದಂತಾಗುತ್ತದೆಂಬ ಭಾವನೆಯಿದೆ. ಅದನ್ನು ಪುಷ್ಟೀಕರಿಸುತ್ತಾ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನ ಎರಡನೆ ಪ್ಯಾರಾ ಓದುತ್ತೇನೆ. ಅದರಲ್ಲಿ "It is proposed to tax only the commercial crops mentioned in the Bill." ಎಂದು ಹೇಳಿದ್ದಾರೆ. ಕಮರ್ಷಿಯಲ್ ಕ್ರಾಪ್ಸ್ ಎಂದರೆ, ಉತ್ಪನ್ನ ಬರತಕ್ಕಂಥ ಹಣಕಾಸಿನ ಮಾಲು, ವ್ಯವಸಾಯದ ಬೆಳೆ ಹಣಕಾಸಿನ ಬೆಳೆ ಎಂದು, ಇನ್ನೇನು ಅರ್ಥವಿದೆಯೋ ನಮಗೆ ಗೊತ್ತಾಗುವುದಿಲ್ಲ. ಅಂತೂ ಆ ಪದ ಇಲ್ಲಿ ಉಪಯೋಗಿಸಿದ್ದಾರೆ. ಹಾಗೆ ಉಪಯೋಗಿಸುವುದರ ಮೂಲಕ ಯಾವ ಯಾವ ಬಾಬುಗಳಿಗೆ ಕೈಹಾಕುತ್ತಾರೆಂಬುದನ್ನು ನೋಡಬೇಕು. ಕಮರ್ಷಿಯಲ್ ಕ್ರಾಪ್ ಎಂದರೇನು ಎಂಬುದನ್ನು ಮೊದಲನೆಯ ಮಸೂದೆಯ ಮೂರನೆಯ ಪುಟದಲ್ಲಿರುವ ಎರಡನೆಯ ಕ್ಲಾಜಿನಲ್ಲಿ ಹೀಗೆ ಹೇಳಿದ್ದಾರೆ :

> " 'commercial crop' means areca, cardamom, chillies, coconut, coffee, coriander, cotton, ganja, garlic, ginger, grapes, groundnut, linaloe, mango, mulberry, onion, orange, plantain, pepper, potato, rubber, sesamum (til), sugarcane, tea, tobacco or turmeric "

ಅದರಲ್ಲಿ ಮನೆ ಬಾಡಿಗೆ ಸೇರಿಲ್ಲ. ಆದರೂ ಸಹಿತ ಮನೆ ಬಾಡಿಗೆಯನ್ನೂ ಸಹ ಸೇರಿಸುವುದಕ್ಕೆ ಹೊರಟಿದ್ದಾರೆ. *Suggestio falsi, Suppressio veri.* ನಿಜಾಂಶವನ್ನು ಬಿಟ್ಟು ಇಲ್ಲದ್ದನ್ನು ಹೇಳುವುದರಿಂದ ಒಂದು ತಪ್ಪು ಅಭಿಪ್ರಾಯ ವನ್ನು ಕೊಟ್ಟ ಹಾಗಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ನಮ್ಮ ಕೈಗೆ ಒಂದು ಮೆಮೋರಾಂಡಂ ಕೊಟ್ಟಿದ್ದಾರೆ. ಅದರಲ್ಲಿ . . . . .

ಶ್ರೀ ಟಿ. ಮರಿಯಪ್ಪ.—ಅದನ್ನು ಸೆಲೆಕ್ಟ್ ಕಮಿಟಿಯವರಿಗೆ ಮಾತ್ರ ಕೊಟ್ಟಿದ್ದಾರೆ. It is a confidential document.

ಶ್ರೀ ಕೆ. ಕೆಂಚಪ್ಪ.—ಹಾಗಿದ್ದರೆ ಆ ವಿಚಾರ ಬೇಡ, ಮತ್ತೊಂದು ವಿಚಾರ ಹೇಳುತ್ತೇನೆ. ಕಮರ್ಷಿಯಲ್ ಕ್ರಾಪ್ ಎಂದಿರುವಾಗ ಮನೆಬಾಡಿಗೆ ಮೇಲೆ ತೆರಿಗೆ ಹಾಕುವುದಕ್ಕೆ ಹೊರಟಿರುವುದು ನ್ಯಾಯವೆ ? ಅದು ಹಣಕಾಸಿನ ಬೆಳೆಯೆ ? ಮನೆ ಬಾಡಿಗೆ ಯಾವ ಬೆಳೆ ? ಎಲ್ಲಿದೆ ಆ ಬೆಳೆ ಎಂದು ಕೇಳುತ್ತೇನೆ. ಉದ್ದೇಶಗಳು ಮತ್ತು ಕಾರಣಗಳ ವಿವರದಲ್ಲಿ ಒಂದು ರೀತಿ ಹೇಳಿ ಇನ್ನೊಂದು ರೀತಿ ಮಾಡುವುದು ಖಂಡಿತವಾಗಿಯೂ ಒಳ್ಳೆಯದಲ್ಲ ; ಆ ರೀತಿ ಮಾಡಬಾರದು. ಅದೂ ಸರ್ಕಾರದ ಹೆಸರಿನಲ್ಲಿ ಆ ರೀತಿ ಮಾಡಬಾರದು ಎಂದು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಅಗ್ರಿಕಲ್ಚರಲ್ ಇನ್‌ಕಂ ಎಂದು ಹೇಳುವಾಗ ಪ್ಲಾಂಟೇಷನ್ ಕ್ರಾಪ್ ವಿಚಾರದಲ್ಲಿ ಒಂದು ವ್ಯವಸ್ಥೆ ಮಾಡಿದ್ದೇವೆ. ಬಾಡಿಗೆ ಕೊಡುವುದು ಮಸೂದೆಯ ಡೆಫನಿಷನ್‌ನಲ್ಲಿ ಸೇರಿಹೋಗಿದೆ.

Sri K. KENCHAPPA.—Commonsense has no place in legal aspects. It is only the interpretation of words.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಕೋಡಿಫೈಡ್ ಕಾಮನ್‌ಸೆನ್ಸ್ ಅಲ್ಲವೆ ?

ಶ್ರೀ ಕೆ. ಕೆಂಚಪ್ಪ.—ಇನ್ನೊಂದು ವಿಚಾರ ಹೇಳುತ್ತೇನೆ. ಗುಲಾಬಿ ಹೂವನ್ನು ಡಿಫೈನ್‌ಮಾಡುವಾಗ 'Rose' means and includes donkeys and he-buffaloes ಎಂದರೆ, ಹೇಗೆ? ಹೀಗೆ ಡಿಫೈನ್ ಮಾಡಿದರೆ ಹೇಗೆ ? ಇಂಗ್ಲೀಷ್ ಕಾನೂನಿನಲ್ಲಿರುವ ಹಾಗೆ 'Man includes woman, emperor includes empress' ಎಂದು ಹೇಳುವ ಹಾಗೆ ಮಾಡಿಬಿಟ್ಟರೆ ಹೇಗೆ ? ಯಾವ ಮಟ್ಟದಲ್ಲಿ ನಿಲ್ಲಬೇಕೆಂಬ ಪರಿವೆಯೇ ಇಲ್ಲದೆ ಹೀಗೆ ಮಾಡುವ ಸಂಪ್ರದಾಯ ನಮ್ಮಲ್ಲಿದೆ. 10ನೆಯ ಪುಟದಲ್ಲಿ 2ನೆಯ ಕ್ಲಾಜಿನ (*a*) (3) ಸಬ್‌ಕ್ಲಾಜನ್ನು ನೋಡಿದರೆ ಈ ರೀತಿಯಿದೆ :

> " any income derived from any building owned and occupied by the receiver of the rent or revenue of any such land, or occupied by the cultivator, or the receiver of rent-in-kind, of any land with respect to which, or the produce of which, any operation mentioned in

paragraphs (ii) and (iii) of sub-clause (2) is carried on :

Provided that the building is on or in the immediate vicinity of the land, and is a building which the receiver of the rent or revenue or the cultivator or the receiver of the rent-in-kind by reason of his connection with the land requires as a dwelling house or as a store-house or other out-building."

ಇದರ ಅರ್ಥವೇನಾಗುತ್ತದೆಂಬುದನ್ನು ತಾವು ಆಲೋಚನೆ ಮಾಡಬೇಕು. ಈಗ ಒಬ್ಬ ಮನುಷ್ಯ ಬೆಂಗಳೂರಿನಲ್ಲಿರುತ್ತಾನೆ. ಅವನಿಗೆ ಬೆಂಗಳೂರಿನಲ್ಲಿ ಮನೆಗಳಿಂದ ಬಾಡಿಗೆ ರೂಪವಾಗಿ 200 ರೂಪಾಯಿ ವರಮಾನ ಬರುತ್ತಿದೆ ಮತ್ತು ಅದೇ ಮನುಷ್ಯನಿಗೆ 10 ಸಾವಿರ ರೂಪಾಯಿಗಳು ಸಂಬಳದಿಂದ ಬರುತ್ತದೆ ಅಥವಾ ಆತನಿಗೆ ಬೆಂಗಳೂರಲ್ಲಿರುವ ಮನೆಯಿಂದ 10 ಸಾವಿರ ರೂಪಾಯಿಗಳ ವರಮಾನವೇ ಬರುತ್ತದೆಂದು ಇಟ್ಟುಕೊಳ್ಳೋಣ. ಇದೇ ರೀತಿ ಇನ್ನೊಬ್ಬನಿಗೆ ಕೋಲಾರ ಜಿಲ್ಲೆಯಲ್ಲಿ 4-5 ಎಕರೆ ಗಾಂಜ ಬೆಳೆಯತಕ್ಕ ಜಮೀನಿರಬಹುದು. ಆ ಗಾಂಜ ಬೆಳೆಯಿಂದ 10 ಸಾವಿರ ರೂಪಾಯಿಗಳ ವರಮಾನ ಬಂದರೆ—ಹೀಗೆ ಅಧಿಕ ವರಮಾನ ಬರತಕ್ಕವರಿಂದ ಇನ್‌ಕಂಟ್ಯಾಕ್ಸನ್ನು ತೆಗೆದುಕೊಳ್ಳುವುದು ಬೇಡ ಎನ್ನುವ ಅರ್ಥ ಈ ಸೆಕ್ಷನ್‌ನಿಂದ ಬರುತ್ತದೆ. ಈಗ ಇದರಲ್ಲಿ ವಿನಾಯಿತಿ ಆಗಿರುವುದು ಯಾವುದು ? ಯಾವ ಮನುಷ್ಯನ ಹೊಲ ಒಂದು ಸಿಟಿ ಟೌನ್ ಅಥವಾ ಹಳ್ಳಿ ಪಕ್ಕದಲ್ಲಿದ್ದು ಆ ಜಮೀನಿನಲ್ಲಿ ಮನೆಯಿದ್ದು ಅದರಲ್ಲಿ ಆತನೇ ವಾಸವಾಗಿದ್ದರೆ ಅಂಥ ಕಟ್ಟಡಕ್ಕೆ ವಿನಾಯಿತಿ ತೋರಿಸಲಾಗಿದೆಯೆಂದು ಹೇಳಿದ್ದಾರೆ. ಆದರೆ ನಾನು ಆ ಸಲೆಕ್ಟ್ ಸಮಿತಿಯಲ್ಲಿ ಈ ವಿಚಾರವಾಗಿ ಆಗಲೇ ಏನು ಹೇಳಿದ್ದೇನೋ ಅದನ್ನೇ ಪುನಃ ಇಲ್ಲಿ ಹೇಳಲು ನನಗೆ ಇಷ್ಟವಿಲ್ಲ. ಬೆಂಗಳೂರಿನಲ್ಲಿ ಒಬ್ಬ ಮನುಷ್ಯನಿಗೆ ಒಂದು ಮನೆಯಿದ್ದು ಕೋಲಾರದಲ್ಲಿ ಆತನಿಗೆ 4-5 ಎಕರೆ ಜಮೀನಿದ್ದು ಅದರಲ್ಲಿ ಗಾಂಜಾ ಬೆಳೆಯುತ್ತಿದ್ದರೆ ಆ ಮನೆ ಮತ್ತು ಜಮೀನು ಎರಡರಿಂದ ಬರತಕ್ಕ ವರಮಾನವನ್ನು ಸೇರಿಸಿ ಅದಕ್ಕೆ ಈಗ ತೆರಿಗೆಯನ್ನು ಹಾಕಿದ್ದಾರೆ. ಆದರೆ ಇದು ಸರಿಯಾದ್ದಲ್ಲವೆಂದು ಹೇಳುತ್ತೇನೆ. ಹೀಗೆ ಮಾಡಿರತಕ್ಕದ್ದು ಇಂಡಿಯನ್ ಇನ್‌ಕಂ-ಟ್ಯಾಕ್ಸ್ ಆಕ್ಟಿನಲ್ಲಿರತಕ್ಕ ಸೆಕ್ಷನ್ 15ಕ್ಕೆ ಇದು ಕಾನ್‌ಫ್ಲಿಕ್ಟ್ ಆಗುವುದಿಲ್ಲವೇ ಎಂದು ನಾನು ಈಗ ತಮ್ಮನ್ನು ಹೇಳುತ್ತೇನೆ. ತಾವೀದಿವಸ ಈ ಎರಡರಲ್ಲಿ ಒಂದಕ್ಕೂ ವಿನಾಯಿತಿ ತೋರಿಸಿಲ್ಲ. ಇತ್ತಕಡೆ ನೀವೂ ತೆರಿಗೆ ಹಾಕಿದ್ದೀರಿ. ಅತ್ತಕಡೆ ಕೇಂದ್ರದವರೂ ತೆರಿಗೆ ಹಾಕಿದ್ದಾರೆ. ಇದೇಯೇ ನೀವು ಹೇಳುತ್ತಿರುವ ಆ ಸಮತಾವಾದ ಸಮಾಜ ರಚನೆ ಎಂಬುದು ? ತಾವು ಅಧಿಕಾರ ಕೈಲಿದೆ ಎಂದು ಹೀಗೆಲ್ಲಾ ಮಾಡುವುದು ಯಾವ ನ್ಯಾಯ ಯಾವ ಧರ್ಮ ಎಂದು ಸರ್ಕಾರವನ್ನು ಕೇಳುತ್ತೇನೆ. ಈಗ ನೀವು ಈ ರೀತಿ ಮಾಡಿದ್ದೀರಲ್ಲಾ—ಇದನ್ನು ಶಾಸ್ತ್ರೋಕ್ತವಾದ ರೀತಿಯಲ್ಲಿ ಮಾಡಿದ್ದೀರಾ ? ಯಾರಾದರೂ ಹಾಗೆ ಅಕಸ್ಮಾತ್ ಇಂಡಿಯಾ ಸರ್ಕಾರಕ್ಕೆ ಸಲ್ಲುವ ಕಂದಾಯ ಕೊಟ್ಟುಬಿಟ್ಟಿದ್ದರೆ ಅದನ್ನು ವಜಾ ಮಾಡಬೇಕೆಂಬುದಾಗಿ 12 ನೆಯ ಕ್ಲಾಜಿನ ಕೊನೆಯಲ್ಲಿ ಹೇಳಿದ್ದೀರಿ :

"Provided further that nothing contained in this clause shall be deemed to entitle a person who is assessed to income-tax under the Indian Income-Tax Act, 1922 (Central Act XI of 1922), to claim any deduction in respect of any sum referred to in this clause if it was exempted under section 15 of the said Act."

ಈ ಸ್ಥಳದಲ್ಲಿ ತಾವು ಬಹಳ ಹುಷಾರಿಯಿಂದ ಈ "if" ಎಂಬ ಶಬ್ದವನ್ನು ಹಾಕಿದ್ದೀರಿ. ಈ ಸನ್ನಿವೇಶ ಎರಡು ಅರ್ಥ ಕೊಡುವ ರೀತಿಯಲ್ಲಿದೆ. ವಿನಾಯಿತಿ ಕೊಡಲಾಗಿದೆ ಎಂದು ಬೇಕಾದರೂ ಭಾವಿಸಬಹುದು, ಅಥವಾ ಇಲ್ಲವೆಂದು ಬೇಕಾದರೂ ಅರ್ಥ ಮಾಡಬಹುದು. ಹೀಗೆ ಎರಡು ಅರ್ಥವನ್ನು ಕೊಡತಕ್ಕ ರೀತಿಯಲ್ಲಿ ಈ "if" ಎಂಬ ಶಬ್ದವನ್ನು ಹಾಕಿರುತ್ತೀರಿ.

Sri K MALLAPPA (Mercara).—That is not the correct interpretation. If it is liable to Central income-tax, that is not liable to agricultural income-tax. There is no provision subject to double tax. Double taxation is not accepted.

Sri K. KENCHAPPA.—There are two plain meanings. One is common sense plain meaning. The other is the plain meaning of the Section. ತಾವೇನಿದ್ದರೂ ಯಾವಾಗಲೂ ಆ ಸೆಕ್ಷನ್‌ಗಳನ್ನು ಓದಿ-ಓದಿ ಅಲ್ಲಿರುವುದನ್ನು ಹೇಳುತ್ತಿದ್ದೀರೇ ಶಿವಾಯಿ ನಿಮ್ಮ ತಲೆಯಲ್ಲಿ ಏನಿದೆ ಎಂಬುದನ್ನು ಹೇಳುತ್ತಿಲ್ಲ. ನಾವೇನಾದರೂ ಹೇಳಿದರೆ ನೋಡೋಣ ಎಂದು ಹೇಳಿಬಿಡುತ್ತೀರಿ. ಹಾಗೆ ತಾವು ಹೇಳಿದನಂತರ ಈ ವಿಚಾರಗಳನ್ನೆಲ್ಲಾ ತಾವು ಕೂಲಂಕಷವಾಗಿ ವಿಮರ್ಶೆ ಮಾಡಬೇಕು. ಆದುದರಿಂದ ನಾನೀಗ ತಮ್ಮಲ್ಲಿ ತಿಳಿಸಬೇಕಾದದ್ದು ಇಷ್ಟೆ : ಕೇಂದ್ರಕ್ಕೂ ತೆರಿಗೆ ಕೊಟ್ಟು ಇಲ್ಲಿಯೂ ಅದೇ ವರಮಾನದ ಮೇಲೆ ಆತನಿಗೆ ತೆರಿಗೆ ವಿಧಿಸುವುದು—ಅವನಿಗೆ ಕೊಡಲು ಶಕ್ತಿ ಇದ್ದಾಗ್ಯೂ ಅದು ಸರಿಯಾದದ್ದಲ್ಲ ಮತ್ತು ಕಾನೂನಿಗೆ ಬಹಳ ವಿರೋಧವಾದದ್ದು ಎಂದು ಹೇಳುತ್ತೇನೆ. ಇದನ್ನು ತಾವು ಕೂಡಲೆ ಸರಿಪಡಿಸಬೇಕು. ನಾವೇನೋ ಇಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿ ಇದನ್ನು ಒಂದು ಶಾಸನ ಕಡತಕ್ಕೇರಿಸಬಹುದು. ಆದರೆ ನಾಳೆ ದಿವಸ ಇದರ ವ್ಯಾಲಿಡಿಟಿಯನ್ನು ಜನರು ಕೋರ್ಟಿನಲ್ಲಿ ಛಾಲೆಂಜ್ ಮಾಡಬಹುದು. ಆರೀತಿ ಯಾವ ಕೋರ್ಟಿನಲ್ಲಿಯೂ ಛಾಲೆಂಜ್ ಮಾಡಲು ಅವಕಾಶವಿಲ್ಲವೆಂಬುದಾಗಿ ತಾವು ಬರೆದು ಕೊಂಡಿದ್ದೀರಿ. ಆದರೆ ನೀವು ಹೀಗೆಲ್ಲ ಮಾಡುತ್ತಿರುವುದನ್ನು ನೋಡಿದರೆ ಆ ಕೇಂದ್ರ ಸರಕಾರದವರು ತಯಾರಿಸಿರತಕ್ಕಂಥ ರಾಜ್ಯಾಂಗಾಕ್ಕೇ ವಿರುದ್ಧವಾಗಿ ಹೋಗಿ ಉಡಾಫೆ ಮಾಡುತ್ತಿರುವಂತೆ ಭಾಸವಾಗುತ್ತದೆ. ಈ ಹಿಂದೆ ಆಗಲೇ ತಾವು ಹೀಗೆ ರಚಿಸಿದ ಆ ಬೆಟ್ಟಿಂಗ್ ಟ್ಯಾಕ್ಸಿನ ವಿಚಾರವಾಗಿ ಈಗ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿದೆ, ಅದು ಸಬ್-ಜುಡೀಸ್ ಆದ್ದರಿಂದ ಆ ಬಗ್ಗೆ ಹೆಚ್ಚು ಮಾತನಾಡಲು ಅವಕಾಶವಿಲ್ಲ. ಕಾನೂನು ಮಾಡತಕ್ಕ ಜನರು ಬಹಳ ವಿಚಕ್ಷಣೆಯಿಂದ ಕೆಲಸ ಮಾಡಬೇಕು. ನಾವು ಇಲ್ಲಿ ಕುಳಿತು ಮಾಡತಕ್ಕ ಕಾರ್ಯಗಳು ಕೋರ್ಟಿನ ಮುಂದೆ ಹೋದಾಗ ಅಲ್ಲಿ ಆಭಾಸಕ್ಕೆ ಇಟ್ಟುಕೊಳ್ಳಬಾರದು. ಮೈಸೂರು

(SRI K. KENCHAPPA)

ಅಸೆಂಬ್ಲಿಯ ಕಾರ್ಯಕಲಾಪಗಳು ಬಹಳ ಉನ್ನತ ಮಟ್ಟದಲ್ಲಿ ನಡೆಯುತ್ತಿವೆ ಎನ್ನುವ ಹಾಗೆ ನಾವು ಇಲ್ಲಿ ಕೆಲಸ ಮಾಡಬೇಕಾಗಿದೆ. ಇದು ನಮ್ಮೆಲ್ಲರ ಆಸೆ. ಆದರೆ ಇದು ಕಾರ್ಯ ರೂಪಕ್ಕೆ ಬರುವುದು ಈಶ್ವರನ ಇಚ್ಛೆ. ಸರ್ಕಾರದವರು ಈ ವಿಚಾರ ಗಳನ್ನೆಲ್ಲಾ ಬಹಳ ದೀರ್ಘವಾಗಿ ಆಲೋಚನೆ ಮಾಡ ಬೇಕಾಗಿವೆ ಎಂದು ಎಚ್ಚರಿಕೆ ಮಾತ್ರ ಕೊಡುತ್ತಿದ್ದೇನೆ. ಈ ಕೆಲಸಗಳೆಲ್ಲಾ ಬಹಳ ಹುಷಾರಿನಿಂದ ಮಾಡಲ್ಪಡ ತಕ್ಕ ಕಾರ್ಯಗಳು. ನಾವು ಈ ಹಿಂದೆಯೇ ಕೆಲವು ಪದಾರ್ಥಗಳ ಮೇಲೆ ತೆರಿಗೆಯನ್ನು ಹಾಕಲೇ ಕೂಡ ದೆಂದು ಹೇಳಿದ್ದೆವು. ಕೆಲವು ಆಹಾರವಸ್ತುಗಳನ್ನು ತಾವು ಕಮರ್ಷಿಯಲ್ ಕ್ರಾಪ್ಸ್ ಎಂದು ಭಾವಿಸುವು ದಾದರೂ ಅಂಥ ಸಾಮಾನುಗಳ ಮೇಲೆ ತೆರಿಗೆ ಹಾಕ ಬಾರದೆಂದು ನಾವೆಲ್ಲರೂ ಹೇಳಿದ್ದೆವು. ತಾವೂ ಸಹ ಅದೇ ಧಾಟಿಯಲ್ಲಿ ಜನರ ದಿನ ಬಳಕೆಯ ವಸ್ತುಗಳ ಮೇಲೆ ತೆರಿಗೆಯನ್ನೇನೂ ವಿಧಿಸಿಲ್ಲವೆಂಬುದಾಗಿ ಹೇಳಿ ದ್ದೀರಿ. ಆದರೆ ಈಗ ನಿಮ್ಮನ್ನು ನಾನು ಕೇಳು ತ್ತೇನೆ—ಈ ತೆಂಗಿನಕಾಯಿ,. ಮೆಣಸಿನಕಾಯಿ, ಕೊತ್ತಂಬರಿ, ಈರುಳ್ಳಿ, ಬೆಳ್ಳುಳ್ಳಿ, ಅರಿಸಿನ ಇತ್ಯಾದಿ ಪದಾರ್ಥಗಳ ಮೇಲೆಲ್ಲಾ ಏಕೆ ತೆರಿಗೆ ಹಾಕಿದ್ದೀರಿ? ತಾವು ಹೀಗೆ ಎಲ್ಲದರ ಮೇಲೂ ತೆರಿಗೆ ಹಾಕುತ್ತಲೇ ಇದ್ದೀರಿ. Let there be no mistaken notion. ತಾವು ಹೇಳಿದುದನ್ನೇ ಕೈಬಿಟ್ಟು ಬಾಡಕ್ಕೇ ಕೈಹಾಕು ತ್ತಿದ್ದೀರಿ.

SRI T. MARIAPPA.—You are not able to go to the exent to which we are prepared to go.

ಶ್ರೀ ಕೆ. ಕೆಂಚಪ್ಪ.—ತಮಗೀಗ ನಾನು ಎಚ್ಚರಿಕೆ ಕೊಡುತ್ತಿದ್ದೇನೆ ಅಷ್ಟೆ; ಮೆಣಸಿನಕಾಯಿ, ತೆಂಗಿನ ಕಾಯಿ, ಕೊತ್ತಂಬರಿ, ಬೆಳ್ಳುಳ್ಳಿ, ಈರುಳ್ಳಿ, ಅರಿಸಿನ ಹೀಗೆ ಎಲ್ಲಾ ಸೇರಿಸಿದ್ದೀರಿ.

ಶ್ರೀ ಟಿ. ಮರಿಯಪ್ಪ.—ಯಾರು ಸೇರಿಸಿದವರು? ನೀವಲ್ಲವೇ?

ಶ್ರೀ ಕೆ. ಕೆಂಚಪ್ಪ.—ಇವುಗಳನ್ನೆಲ್ಲ ಸೇರಿಸಿರತಕ್ಕ ವರು ಯಾರು ಎಂಬುದು ಇಲ್ಲಿರತಕ್ಕವರಿಗೆಲ್ಲರಿಗೂ ಅರ್ಥವಾಗುತ್ತದೆ. ಯಾರೋ ಮಂತ್ರಿಗಳೇ ಸೇರಿಸಿ ದ್ದಾರೆ. ಅದಕ್ಕೇ ನಾನು ಡಿಸೆಂಟಿಂಗ್ ನೋಟ್ ಕೊಟ್ಟಿ ದ್ದೇನೆ. ಆದರೆ ಅದಕ್ಕೇನು ಮಹತ್ವವಿದೆಯೋ ಅದು ಇದ್ದೇ ಇದೆ. ಈರುಳ್ಳಿಯನ್ನು ನಾವು ಹರಿಹರದ ಕಡೆಯ ಮಂದಿ ಮತ್ತು ಉತ್ತರ ಕರ್ಣಾಟಕದವರೂ ಜಾಸ್ತಿ ಉಪಯೋಗಿಸುತ್ತಿದ್ದೇವೆ. ಈ ಜನಗಳು ಅಕಸ್ಮಾತ್ ಬಿಟ್ಟರೆ ಆ ಅಕ್ಕಿಯನ್ನಾದರೂ ಬಿಟ್ಟಾರು ಆದರೆ ಈ ಈರುಳಿಯನ್ನು ಮಾತ್ರ ಎಂದಿಗೂ ಬಿಡರು. ಈ ದಿವಸ ಮೆಣಸಿನಕಾಯಿ ಈರುಳ್ಳಿ, ಅರಿಸಿನ ಈ ವಸ್ತುಗಳನ್ನು ನಿತ್ಯವೂ ಬಳಸದಿರತಕ್ಕ ಜನರೇ ಇಲ್ಲ. ಹೀಗಿರುವಾಗ ಸರ್ಕಾರದವರು ಒಂದು ಕಣ್ಣಿಗೆ ಬೆಣ್ಣೆ—ಒಂದು ಕಣ್ಣಿಗೆ ಸುಣ್ಣ ಎಂಬಂತೆ ಮಾಡ ಬಾರದು. Don't blow cold and hot at the same time. ಒಂದೊಂದು ನಿದರ್ಶನ ತೆಗೆದು ಕೊಂಡರೆ ಅಲ್ಲೆಲ್ಲ ಒಂದೊಂದು ರೀತಿ ಮಾಡಲಾಗಿದೆ. ಈಗ ನಾನು ಹೇಳಿದ ವಸ್ತುಗಳನ್ನೆಲ್ಲಾ ಈ ತೆರಿಗೆ ಪಟ್ಟಿ ಯಿಂದ ಕೂಡಲೇ ತೆಗೆದುಹಾಕಬೇಕೆಂದು ಹೇಳುತ್ತೇನೆ. ಹಿಂದಕ್ಕೆ ಇದ್ದ ತೆರಿಗೆ ಚೆನ್ನಾಗಿತ್ತು. ಹೆಚ್ಚಿಗೆ ಶಕ್ತಿ ಇದ್ದರೆ ಹೆಚ್ಚು ತೆರಿಗೆ ಹಾಕಬಹುದು. ಈಗಿನ ತೆರಿ ಗೆಯ ಪ್ರಕಾರ ಒಂದನೇ ಐಟಂ ಸರಿಯಾಗಿದೆ. ಹಿಂದೆ ಐದು ಸಾವಿರ ರೂಪಾಯಿ ಆದಾಯಕ್ಕೆ ಒಂದಾಣೆ ಯಂತೆ ದರ ಇತ್ತು. ನಾಲ್ಕನೇ ಐಟಂಗೆ ಹಿಂದೆ ಎರಡಾಣೆ ಇದ್ದುದು ಈಗ ಒಂದೂವರೆ ಆಣೆ ಆಗಿದೆ. ಬರಬರುತ್ತಾ ರೇಟ್ ಕಡಿಮೆಯಾಗಿದೆ. ವ್ಯವಸಾಯ ಉತ್ಪತ್ತಿ ಹೆಚ್ಚಾಗುವದಕ್ಕೆ ತೆರಿಗೆಯ ದರ ಕಡಿಮೆಯಾಗಿ ರಬೇಕು. ಸೋಷಲಿಸ್ಟಿಕ್ ತತ್ವದಂತೆ ಯಾರಿಗೆ ಹೆಚ್ಚು ಶಕ್ತಿಇದೆಯೋ ಅವರಿಗೆ ಹೆಚ್ಚು ತೆರಿಗೆ ಹಾಕಬೇಕು. ಅಕ್ಕಿಯ ಮೇಲೆ ಆಶೆ, ನೆಂಟರ ಮೇಲೆ ಪ್ರೀತಿ ಇದ್ದ ಹಾಗೆ ಮಾಡಬಾರದು. ನಾವು ಈಗ 1957ನೆಯ ಇಸವಿಯಲ್ಲಿ ಇದ್ದೇವೆ. ತೆರಿಗೆಯನ್ನು ವಿಧಿಸುವಾಗ ಒಂದು ಸರಿಯಾದ ಕ್ರಮವನು ಅನುಸರಿಸಬೇಕು. ಈ ದೃಷ್ಟಿಯಿಂದ ಈ ಮಸೂದೆಯಲ್ಲಿಯ ಅಂಶಗಳನ್ನು ಒಪ್ಪುವದಕ್ಕಾಗುವದಿಲ್ಲ. ಹಿಂದೆ ಇದ್ದ ಕ್ರಮ ಸರಿ ಯಾಗಿತ್ತು. ಬೊಂಬಾಯಿಯಲ್ಲಿ ಹೀಗೆ ಇದೆ, ಮದರಾಸಿನಲ್ಲಿ ಆ ರೀತಿಯಾಗಿ ಅದೆ ಎಂದು ಹೇಳು ವುದು ಬೇಡ. ವರಮಾನ ತೆರಿಗೆ ಹಾಕಬೇಕಾದರೆ ಎಲ್ಲ ವಿಷಯಗಳನ್ನೂ ಪರಿಶೀಲಿಸುವುದು ಅಗತ್ಯ. ಎಲ್ಲಾ ಸಮಸೆ ಗಳನ್ನೂ ತೆಗೆದುಕೊಂಡು ಪರಿಶೀಲಿಸಿ ನಿಗದಿ ಮಾಡಿದರೆ ಯಾರೂ ಬೇಡ ಎನ್ನುವದಿಲ್ಲ. ಈಗ ವಿಧಿಸಿ ರುವ ತೆರಿಗೆಯಲ್ಲಿ ಶೋಷಣೆಯ ಅಂಶ ಇದೆ ಎಂದು ಅನಿಸುತ್ತದೆ. ಇದು ಜಟಿಲವಾದ ಪ್ರಶ್ನೆಯಾಗಿದೆ. ಈಗ ಇಟ್ಟಿರತಕ್ಕಂಥ 3,500 ರೂಪಾಯಿಗಳ ಲಿಮಿ ಟ್ಟಿಗೆ ಮತ್ತು ಅವಿಭಕ್ತ ಕುಟುಂಬವಿದ್ದರೆ ಏಳು ಸಾವಿರ ರೂಪಾಯಿ ಲಿಮಿಟ್ಟಿಗೆ ಒಪ್ಪುವದಕ್ಕೆ ಆಗುವದಿಲ್ಲ. ವ್ಯವಸಾಯದಲ್ಲಿ ಖರ್ಚುಮಾಡತಕ್ಕ ಬಾಬುಗಳನ್ನು ತೆಗೆ ದರೆ ಉತ್ಪತ್ತಿ ಬಹಳ ಕಡಿಮೆಯಾಗುತ್ತದೆ. ಈಗ ಇಟ್ಟಿರುವ 3,500 ಮತ್ತು 7,000 ರೂಪಾಯಿ ಬದಲು ಹಿಂದೆ ಇದ್ದಂತೆ 4,500 ರೂಪಾಯಿ ಮತ್ತು 8,400 ರೂಪಾಯಿ ಲಿಮಿಟ್ ಇರಬೇಕೆಂದು ನಾನು ಸೂಚಿಸು ತ್ತೇನೆ. ಒಬ್ಬನೇ ಮನುಷ್ಯನು ಇರತಕ್ಕ ಅವಿಭಕ್ತ ಕುಟುಂಬವಿರುವುದಿಲ್ಲ. ಅವಿಭಕ್ತ ಕುಟುಂಬದಲ್ಲಿ ಅನೇಕ ಜನ ಇರುತ್ತಾರೆ. ಆದುದರಿಂದ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಈ ನೀತಿ ಬೇಡ. ಕಡಿಮೆ ಉತ್ಪತ್ತಿ ಇರುವವರಿಗೆ ತೆರಿಗೆ ಹಾಕುವುದಕ್ಕೆ ಒಪ್ಪಿಕೊಳ್ಳುವದಕ್ಕಾಗುವದಿಲ್ಲ.

10 A.M.

ಹಿಂದಿನಿಂದ ಬಂದದ್ದನ್ನು ಈಗ ನೀವು ಏನೇನೋ ಮಾಡುತ್ತಿದ್ದೀರಿ. ಆದರೆ ಆ ಹಿಂದಿನ ಜಪಮಾಲೆಯನ್ನೂ ಸನಾತನ ಧರ್ಮವನ್ನೂ ಕೈಬಿಡಬೇಡಿ. ಅದು ಒಂದೇ ಸಮನಾಗಿ ಹಿಂದಿನಿಂದಲೂ ನಡೆದುಕೊಂಡುಬರುತ್ತಿದೆ. ನಮ್ಮ ಪೂರ್ವಿಕರು ಮಾಡಿರತಕ್ಕದ್ದು ಶಾಶ್ವತವಾದ ಧರ್ಮ. ಅದು ಶಾಸ್ತ್ರೋಕ್ತವಾದದ್ದೂ ಆಗಿದೆ. ಈಗ ನೀವು ಹಿಡಿದುಕೊಂಡಿರುವ ಜಪಮಾಲೆ ಸರಿಯಾದ್ದಲ್ಲ. ಇದನ್ನು ಕೈಬಿಟ್ಟುಬಿಡಿ. ಹಿಂದೆ ಮಾಡಿರತಕ್ಕದ್ದು ಶಾಸ್ತ್ರೋಕ್ತವಾಗಿರುವುದರಿಂದ 4,200 ಮತ್ತು 8,400 ರೂಪಾಯಿಗಳನ್ನು ಈಗಲೂ ಇಟ್ಟುಕೊಳ್ಳ ಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಇನ್ನು ಎಷ್ಟು ಹೊತ್ತು ಬೇಕಾಗ ಬಹುದು?

ಶ್ರೀ ಕೆ. ಕೆಂಚಪ್ಪ.—ಇನ್ನೂ ಹತ್ತು ನಿಮಿಷಗಳು.

The House rose for Lunch at Ten of the Clock and reassembled at Thirty Minutes past Ten of the Clock.

[Mr. Deputy Speaker in the Chair]

ಶ್ರೀ ಕೆ. ಕೆಂಚಪ್ಪ.—ಸ್ವಾಮಿ, ಇನ್ನು ಈ ಸಂಬಂಧದಲ್ಲಿ ತಕರಾರುಗಳು ಬಂದಾಗ ಕೇಸುಗಳನ್ನು ಯಾವ ರೀತಿಯಾಗಿ ಫೈಸಲ್ ಮಾಡಬೇಕೆನ್ನುವ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. 17ನೇ ಸೆಕ್ಷನ್ (c)ನಲ್ಲಿ Agricultural Income-tax Officer ಒಬ್ಬರು, ಅನಂತರ ಅವರ ಮೇಲೆ Deputy Commissioner of Agricultural Income-Tax ಎನ್ನುವ ಇನ್ನೊಬ್ಬ ಅಧಿಕಾರಿಗಳು ಮತ್ತು ಇವರ ಮೇಲೆ Commissioner of Agricultural Income-Tax ಎಂಬ ಮೂರನೇ ಅಧಿಕಾರಿಗಳೊಬ್ಬರು ಹೀಗೆಲ್ಲ ಇರಬೇಕೆಂದು ತಿಳಿಸಲಾಗಿದೆ. ಆದರೆ ಈಗ ನಾನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಆಫೀಸರ ಮತ್ತು ಡೆಪ್ಯೂಟೀ ಕಮೀಷನರ ವಿಚಾರಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಇವರಿಂದ ಖರ್ಚು ಹೆಚ್ಚಿಗೆ ಬರುವುದಿಲ್ಲ ಮತ್ತು ಇವರುಗಳು ಇಲ್ಲದಿದ್ದರೆ ಈ ವಿಚಾರಗಳೊಂದೂ ಗೊತ್ತೇ ಆಗುವುದಿಲ್ಲ. ಇವೆಲ್ಲ ಜಮೀನಿಗೆ ಸಂಬಂಧಪಟ್ಟ ವಿಚಾರಗಳು, ಆದುದರಿಂದ ಇವರುಗಳಿರಲೇಬೇಕಾಗುತ್ತದೆ. ಆದರೆ ಈ ಕಮಿಷನರ್ ಫಾರ್ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಇವರ ವಿಚಾರದಲ್ಲಿ ನನಗೆ ತೋರುವುದು ಈ ಆಫೀಸರ್ ಅಗತ್ಯವಿಲ್ಲ ಎಂದು. ಆದುದರಿಂದ ಈ ಹುದ್ದೆ ಇರಬಾರದು. ಇದರಿಂದ ಖರ್ಚು ಹೆಚ್ಚಾಗುತ್ತದೆ. ಈಗಾಗಲೇ ಒಂದು Revenue Appellate Tribunal ಎಂದು ಮಾಡಿದ್ದೀರಿ. ಆ ಟ್ರಿಬ್ಯೂನಲ್‌ನಲ್ಲಿ ಕೂಡ ಈ ವಿಷಯಕ್ಕೆ ಸಂಬಂಧಪಟ್ಟಂತೆ ತೀರ್ಪು ಕೊಡಲು ಒಬ್ಬರು Sessions Judge ಕೂಡ ಇರುತ್ತಾರೆ. ಅವರೇ ಈ ಜಮೀನುಗಳ ವ್ಯವಹಾರವನ್ನೂ ನೋಡಿಕೊಳ್ಳಬಹುದು. ಈ ಹುದ್ದೆಯನ್ನು ತೆಗೆಯುವುದರಿಂದ ಖರ್ಚೂ ಸಹ ಕಡಿಮೆಯಾಗುತ್ತವೆ. ಮತ್ತು ಈ ವಿಚಾರಗಳಲ್ಲಿ ಆಖೈರು ತೀರ್ಮಾನ ಕೊಡಲು ಟ್ರಿಬ್ಯೂನಲ್ಲೇ ಸರಿಯಾದುದೆಂದು ನನ್ನ ಭಾವನೆ. ಆದಕಾರಣ ಈ ಹುದ್ದೆಯನ್ನು ರದ್ದುಮಾಡಿ ಇವರ ಕೇಸುಗಳನ್ನೆಲ್ಲ Revenue Appellate Tribunalಗೆ ಕಳುಹಿಸಿಕೊಡಬಹುದೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು Section 22ರ ಪ್ರಾವಿಸೋ (ಬಿ)ನಲ್ಲಿ ಹೀಗಿದೆ :—

> "(*b*) Where a person has failed to comply with a notice under sub-section (2) or sub-section (4) of Section 18 or under sub-section (2) of Section 19 and proves that he has no income liable to tax, the penalty imposable under this sub-section shall not exceed Ten Rupees."

ಇಲ್ಲಿ ಒಬ್ಬ ಮನುಷ್ಯನಿಗೆ ನೋಟೀಸ್ ಕೊಟ್ಟ ತರುವಾಯ ಆತನಿಂದ ಸರಕಾರಕ್ಕೆ ಅಗ್ರಿಕಲ್ಚರಲ್ ಇಂಕಂಟ್ಯಾಕ್ಸ್ ಏನೂ ಬರಬೇಕಾಗಿಲ್ಲವೆಂದು ತಿಳಿದುಬಂದ ನಂತರವೂ ಆತನ ಮೇಲೆ ಈ ಹತ್ತು ರೂಪಾಯಿಗಳ ಜುಲ್ಮಾನೆಯನ್ನು ಏಕೆ ಹಾಕಬೇಕೋ ನನಗೆ ಅರ್ಥವಾಗುವುದಿಲ್ಲ. ಅವನು ಸರಕಾರಕ್ಕೇನೂ ಕಂದಾಯ ಕೊಡಬೇಕಾಗಿರುವುದಿಲ್ಲ. ಅದಕ್ಕೋಸ್ಕರ ಅವನು ಸರಕಾರಕ್ಕೇನೂ ಲೆಕ್ಕ ಕೊಟ್ಟಿಲ್ಲ. ಅಂಥ ಸಂದರ್ಭದಲ್ಲಿ ಸರಕಾರದವರು ಒಂದು ನೋಟೀಸು ಕೊಟ್ಟರೆ ಆ ಮನುಷ್ಯ ಬಂದು ನಮಗೇನೂ ಅಂಥ ವರಮಾನ ಬಂದಿಲ್ಲವೆಂದು ಬರೆದುಕೊಡುತ್ತಾನೆ. ಅಷ್ಟಕ್ಕೇ ಈ ಹತ್ತು ರೂಪಾಯಿಗಳ ಜುಲ್ಮಾನೆಯನ್ನೇಕೆ ಕೊಡಬೇಕು ! ಆದುದರಿಂದ ಈ ಹತ್ತು ರೂಪಾಯಿಗಳನ್ನು ಈ ಪ್ರಾವಿಸೋವಿನಿಂದ ತೆಗೆದುಹಾಕಿಬಿಡಬೇಕು.

ಮತ್ತು ಇನ್ನೊಂದು ಕಡೆ ಈ (ಡಿ)ನಲ್ಲಿ ಯಾರಾದರೊಬ್ಬ ಮನುಷ್ಯ ತಪ್ಪು ಲೆಕ್ಕ ಕೊಟ್ಟರೆ ಅಥವಾ ಅವನು ಲೆಕ್ಕ ಕೊಟ್ಟ ಮೇಲೆ ಅದು ತಪ್ಪು ಲೆಕ್ಕ ಎನ್ನುವುದಾಗಿ ಕಂಡುಬಂದರೆ ಅಂಥ ಕಡೆಗಳಲ್ಲಿ ಅವನು ಎಷ್ಟು ತೆರಿಗೆ ಕೊಡಬೇಕೋ ಅಷ್ಟನ್ನೂ ಮತ್ತು ಇನ್ನೊಮ್ಮೆ ಅದರಷ್ಟು ಮೊಬಲಗನ್ನೂ ಕೊಡಬೇಕೆಂದು ತಿಳಿಸಲಾಗಿದೆ. ಎಂದರೆ ಹತ್ತು ರೂಪಾಯಿಗಳ ತೆರಿಗೆಯಿದ್ದರೆ ಅವನು ಇಪ್ಪತ್ತು ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ತೆರಿಗೆ ಎನ್ನುವುದು ಹೀಗೇ ಜಾಸ್ತಿಯಾಗುತ್ತಹೋಗುತ್ತದೆ. ನೂರು ರೂಪಾಯಿಗಳಿರುವುದು ಇನ್ನೂರು ರೂಪಾಯಿಗಳು, ಐನೂರು ರೂಪಾಯಿಗಳಿದ್ದರೆ 1,000 ರೂಪಾಯಿಗಳು ಹೀಗೆ ಕೊಡಬೇಕಾಗಬಹುದು.

"Not more than that amount" ಎಂದು ಮಾಡಕೂಡದು. ಹೀಗೆ ಮಾಡಿದರೆ ತಪ್ಪಾಗುತ್ತದೆ.

ಶ್ರೀ ಟಿ. ಮರಿಯಪ್ಪ.—"Not exceeding" ಎಂದಿದೆ.

ಶ್ರೀ ಕೆ. ಕೆಂಚಪ್ಪ.—ಅದಕ್ಕಿಂತ ಹೆಚ್ಚಿಗೆಯಾಗದಷ್ಟು ಎಂದರೆ ತಪ್ಪಾಗುತ್ತದೆ. ತೆರಿಗೆ ಹತ್ತು ರೂಪಾಯಿಗಳಾದರೆ ಇಪ್ಪತ್ತು ರೂಪಾಯಿಗಳನ್ನು ವಿಧಿಸುತ್ತಾರೆ. ಹೀಗೆ ಒಂದು Discretion ಉಪಯೋಗ ಮಾಡುವ ಅವಕಾಶವನ್ನು ಅಧಿಕಾರಿಗಳಿಗೆ ಸಾಧ್ಯವಾದ ಮಟ್ಟಿಗೂ ಕೊಡುವುದು ಯುಕ್ತವಲ್ಲವೆಂದುನಾನು ಹೇಳುತ್ತೇನೆ.

ಕೊನೆಯದಾಗಿ, Composition ಮೊದಲು ಎಕರೆ ಒಂದಕ್ಕೆ ಒಂದೂವರೆ ರೂಪಾಯಿಗಳಂತೆ ತೆಗೆದುಕೊಳ್ಳಬೇಕೆಂದಿತ್ತು. ಈಗ ಈ Composition area ಹೆಚ್ಚುಮಾಡಿ ಪ್ರತಿಯೊಂದು ಎಕರೆಗೂ ಎರಡು ರೂಪಾಯಿಗಳನ್ನು ತೆಗೆದುಕೊಳ್ಳಬೇಕು ಎಂದು ಮಾಡಿದ್ದಾರೆ. ಇದು ನನಗೆ ಅರ್ಥವಾಗುವುದಿಲ್ಲ. ಒಂದೂವರೆ ರೂಪಾಯಿಗಳಿಂದ ಎರಡು ರೂಪಾಯಿಗಳಿಗೇಕೆ ಹೆಚ್ಚಿಸಬೇಕು? ಏಕೆ ಈ ವ್ಯತ್ಯಾಸ ಮಾಡಬೇಕೋ ನನಗೇನೂ ಅರ್ಥವಾಗುವುದಿಲ್ಲ. Composition ಮಾಡುವುದರಿಂದ ತೆರಿಗೆ ಕಡಿಮೆಯಾಗುತ್ತದೆ ಎನ್ನತಕ್ಕ ಭಾವನೆ ಇರಬಹುದೇನೋ! ಹಾಗಿಲ್ಲದಿದ್ದರೆ Composition ಮಾಡುವಾಗ ಮೂಲ ತೆರಿಗೆ ಕಡಿಮೆ ಎನ್ನುವ ಭಾವನೆ ನನಗಂತೂ ಯಾವುದೂ ಸರಿಯಾಗಿ ಕಾಣುವುದಿಲ್ಲ. Exemption Listನಲ್ಲಿ ಐವತ್ತು ಎಕರೆಯವರಿಗೆ ತೆರಿಗೆ ವಿಧಿಸದಂತೆ ಕೈಬಿಟ್ಟಿದೆ. ಅಷ್ಟು ಜಮೀನಿಗೆ ಕಂದಾಯ ಕೊಡಬೇಕಾಗಿಲ್ಲ. ಎಂಟನೆಯ ತರಗತಿಯ 50 ಎಕರೆ ಭೂಮಿ ಏಳನೆಯ ತರಗತಿಯ ಭೂಮಿಯ 25 ಎಕರೆಗಳಿಗೆ ಸಮ ಎಂದು ಹೇಳಿದ್ದಾರೆ. ಈ ರೀತಿ ಹೇಳಿರತಕ್ಕ ಲೆಕ್ಕದ ಪ್ರಕಾರ ನೋಡಿದರೆ ಪ್ರತಿಯೊಂದು ದರ್ಜೆಯ ಭೂಮಿಗೂ ನೂರು ರೂಪಾಯಿಗಳವರೆಗೆ ಎಕ್ಸೆಂಪ್ಷನ್ ಕೊಟ್ಟಿದ್ದಾರೆ. ಆದರೆ ಕಂಪೋಸಿಷನ್ ರೇಟನ್ನು ಒಂದೂವರೆ ರೂಪಾಯಿನಿಂದ ಎರಡು ರೂಪಾಯಿಗಳವರೆಗೆ ಹೆಚ್ಚು ಮಾಡಿರುವುದರಿಂದ ದುಡ್ಡು ಹೆಚ್ಚಾಗಿ ಬರುವುದಿಲ್ಲವೇನು ?

ಶ್ರೀ ಟಿ. ಮರಿಯಪ್ಪ.—ಮೊದಲು ಮೂವತ್ತು ಎಕರೆ ಎಕ್ಸೆಂಪ್ಷನ್ ಇತ್ತು. ಆಗ ಒಂದೂವರೆ ರೂಪಾಯಿಗಳಂತೆ ಕಾಂಪೌಂಡಿಂಗ್ ರೇಟ್ ಇಟ್ಟುಕೊಂಡಿತ್ತು. ಈಗ ಐವತ್ತು ಎಕರೆಗಳ ಎಕ್ಸೆಂಪ್ಷನ್ ಇದೆ. ಎರಡು ರೂಪಾಯಿಗಳನ್ನು ಹಾಕಿರುವುದು ಈ ಐವತ್ತು ಎಕರೆಗಳ ಮೇಲಲ್ಲ. ಒಂದು ನೂರು, ಒಂದು ನೂರೈವತ್ತು ಎಕರೆಗಳ ಮೇಲೆ ಇನ್‌ಕಂಟ್ಯಾಕ್ಸ್ ಲೆಕ್ಕ ಹಾಕಿದರೆ ಕಾಂಪೌಂಡಿಂಗ್ ರೇಟಿಗಿಂತಲೂ ಜಾಸ್ತಿ ಬರುತ್ತದೆ. ಆದ್ದರಿಂದ ನಾವೀಗಹಾಕಿರತಕ್ಕ ಈ ಅಸೆಸ್‌ಮೆಂಟು ಏನೂ ಜಾಸ್ತಿಯಾಗುವುದಿಲ್ಲ.

ಶ್ರೀ ಕೆ. ಕೆಂಚಪ್ಪ.—ಎಕ್ಸೆಂಪ್ಷನ್ ಮೂವತ್ತು ಎಕರೆಗಳಿದ್ದಾಗ ಅದರ ಎರಡರಷ್ಟು ಕಾಂಪೌಂಡ್ ಮಾಡಲು ಅವಕಾಶವಿತ್ತು. ಆಗ ಎಕರೆಗೆ ಒಂದೂವರೆ ರೂಪಾಯಿಗಳಂತೆ ರೇಟ್ ಇಟ್ಟಿದ್ದರು. ಈಗ ಎಕ್ಸೆಂಪ್ಷನ್ ಐವತ್ತು ಎಕರೆಗಳಿಗೆ ಹೆಚ್ಚಿಸಿ ಕಾಂಪೌಂಡಿಂಗ್ ಲಿಮಿಟ್ಟನ್ನು ಅದರ ಮೂರರಷ್ಟು ಎಂದರೆ 150 ಎಕರೆಗಳಷ್ಟು ಮಾಡಿರುವುದರಿಂದ ಒಂದೂವರೆ ರೂಪಾಯಿಗಳನ್ನು ಎರಡು ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ ಎನ್ನುವ ವಾದವನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈಗ ಹತ್ತಿ ಬೆಳೆಯತಕ್ಕ ಐವತ್ತು ಎಕರೆ ಜಮೀನಿನಿಂದ ಸುಮಾರು 3,500 ರೂಪಾಯಿಗಳ ವರಮಾನ ಬರುತ್ತದೆ ಎಂದು ನೀವು ಆಲೋಚನೆ ಮಾಡಿದ್ದೀರಾ ?

ಶ್ರೀ ಟಿ. ಮರಿಯಪ್ಪ.—ಹಾಗಲ್ಲ. 30 ಎಕರೆ ಎಕ್ಸೆಂಪ್ಷನ್ ಇದ್ದುದನ್ನು ಈಗ 50 ಎಕರೆ ಮಾಡಿದೆ.

ಶ್ರೀ ಕೆ. ಕೆಂಚಪ್ಪ.—ಐವತ್ತು ಎಕರೆ ಮತ್ತು 3,500 ರೂಪಾಯಿಗಳ ಮಿತಿಯನ್ನು ಮಾಡಿದ್ದೀರಿ. ಹಿಂದೆ 30 ಎಕರೆ ಇದ್ದ ಮಿತಿಯಿಂದ ಏನು ತೊಂದರೆಯಿದೆಯೋ ನನಗೆ ಬೇರೆ ಅರ್ಥವಾಗುವುದಿಲ್ಲ. ಅರವತ್ತಾರನೆಯ ಸೆಕ್ಷನ್ನನ್ನು ನೋಡಿ. ತಾವು ನಿಗದಿ ಮಾಡಿರತಕ್ಕ ಎಕ್ಸೆಂಪ್ಷನ್ನು ಲಿಮಿಟ್ಟು ಎಷ್ಟೇ ಇರಲಿ ಕೊಡತಕ್ಕ ದುಡ್ಡು ಮಾತ್ರ ಜಾಸ್ತಿಯಾಗುತ್ತದೆ. ತಾವೇ ಎಕ್ಸೆಂಪ್ಷನ್ ಕೊಟ್ಟಿದ್ದೀರಿ. ಆದರೆ ದುಡ್ಡಿನ ರೂಪದಲ್ಲಿ ಲೆಕ್ಕಮಾಡುವಾಗ ಅದಕ್ಕೂ ಇದಕ್ಕೂ ವ್ಯತ್ಯಾಸವಾಗುತ್ತದೆ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಪ್ರತಿಯೊಂದು ಲೆಕ್ಕವನ್ನೂ ತೆಗೆದುಕೊಂಡು ಮಾಡಿದ್ದೀರಿ ಎಂದು ತಾವು ತಮ್ಮ ನೋಟಿನಲ್ಲಿ ಹೇಳಿದ್ದೀರಿ. ಆ ಲೆಕ್ಕಕ್ಕೆ ಸರಿಯಾಗಿ ಎಗ್ಸೆಂಪ್‌ಷನ್ ಲಿಸ್ಟನ್ನು ತಯಾರುಮಾಡಿದ್ದೇವೆ ಎಂದು ಹೇಳಿದ್ದೀರಿ. ಮೊದಲಿದ್ದ ಒಂದೂವರೆ ರೂಪಾಯಿ ಒಪ್ಪುತ್ತೇನೆ. ಈಗ ಎರಡು ರೂಪಾಯಿ ಮಾಡಿರುವುದು ತುಂಬಾ ಹೆಚ್ಚು. ಆದ್ದರಿಂದ ಅದನ್ನು ತೆಗೆಯಬೇಕು. ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಈ ವಿಚಾರದಲ್ಲಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri M. C. NARASIMHAN (Kolar Gold Fields).—Mr. Speaker, Sir, the Finance Minister is a shrewd person. He has already anticipated some of my arguments.

ಸೆಲೆಕ್ಟ್ ಕಮಿಟಿಯವರು ಸೂಚಿಸಿರುವ ತಿದ್ದುಪಡಿಗಳನ್ನು ನೋಡಿದರೆ, ಶ್ರೀಮಂತರಿಗೆ ಅನುಕೂಲವಾಗುವಂತೆ ತಂದಿದ್ದಾರೆ. ನಾವು ಮೊದಲು ತಂದಿದ್ದ ಮಸೂದೆಯನ್ನು ಒಪ್ಪಿಕೊಂಡಿದ್ದರೆ ಚೆನ್ನಾಗಿತ್ತು, ಅದರಿಂದ ಸರ್ಕಾರಕ್ಕೆ ದುಡ್ಡು ಬಂದು ದೇಶಕ್ಕೆ ಒಳ್ಳೆಯದಾಗುತ್ತಿತ್ತು. ಸೆಲೆಕ್ಟ್ ಕಮಿಟಿಯವರ ವರದಿಯು ಈ ರೀತಿ ಇದೆಯಲ್ಲ ಎಂದು ವ್ಯಥೆಯಾಗುತ್ತದೆ. ನನ್ನ ಸ್ನೇಹಿತರಾದ ರಾಮಪ್ಪನವರು ಹೇಳಿದರು ಕಮಿಷನರಿಗೆ ಇದರ ಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ, ಹೈಕೋರ್ಟಿಗೆ ಒಂದು direction ಕೊಟ್ಟಿದ್ದಾರೆ, ಇಬ್ಬರು ತೀರ್ಮಾನ ಮಾಡಬೇಕು ಎಂದು. ಹೈಕೋರ್ಟಿನಮೇಲೆ ನಮಗೆ ಅಧಿಕಾರವಿಲ್ಲದೆ ಇರವಾಗ ಅವರಿಗೆ direction ಕೊಡುವುದಕ್ಕೆ ನಾವು ಯಾರು? ಇಬ್ಬರು ಜಡ್ಜಿಗಳು ಕುಳಿತು ತೀರ್ಮಾನಮಾಡಲಿ, ಅಥವ ಮೂವರು ಕುಳಿತು ತೀರ್ಮಾನಮಾಡಲಿ ಅದು ಅವರಿಗೆ ಬಿಟ್ಟದ್ದು. ನಾವು ಈ ವಿಚಾರವಾಗಿ ಮಾತನಾಡಿ, ಚರ್ಚೆಮಾಡಿ, ಇಬ್ಬರೇ ಕುಳಿತುಕೊಂಡು ತೀರ್ಮಾನಮಾಡಿ ಎಂದು ಹೇಳುವುದಕ್ಕೆ ನಾವು ಯಾರು? ಯಾವಾಗ ರಾಜ್ಯಾಂಗದ ವಿಧಿ ಅಡ್ಡಿ ಬರುತ್ತದೆಯೋ ಅಂಥದನ್ನು ಏಕೆ ಬರೆಯುತ್ತೀರಿ? ಎಕ್ಸೈಜ್ ಕಮಿಷನರಿಗೆ ಸೇಲ್ಸ್‌ಟ್ಯಾಕ್ಸ್, ರಿಜಿಸ್ಟ್ರೇಷನ್ ಮತ್ತೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಕೊಟ್ಟು, ಅವರಿಗಾಗಿ ನಾವೇನೂ ದುಡ್ಡು ಖರ್ಚು ಮಾಡುವುದಿಲ್ಲ, ಅವರೆಲ್ಲ ನಮಗೆ ಅನುಕೂಲ ಮಾಡುತ್ತಾರೆಂದು ತಿಳಿದರೂ ಕೂಡ ಅದೆಲ್ಲ cry in the wilderness ಎನ್ನುವ ಹಾಗಾಗುತ್ತದೆ. ಸಾಮಾನ್ಯ ಜನರು ಅತ್ತೂ ಅತ್ತೂ ಕಣ್ಣೀರು ಸುರಿಸಿ ಬಡವಾಗುತ್ತಾರೆ. ಕಮಿಷನರಿಗೆ ಅಧಿಕಾರ ಕೊಟ್ಟರೆ ಕಾನೂನಿನಿಂದ relief ಎಂಬುದು ಸಾಮಾನ್ಯ ಜನರಿಗೆ ಸಿಕ್ಕುತ್ತದೆಯೇ? ಅದಕ್ಕೋಸ್ಕರ ಈ ಕಮಿಷನರನ್ನು ತೆಗೆದು ಬಿಟ್ಟು ಡೆಪ್ಯುಟಿ ಕಮಿಷನರ್ ಮಾಡತಕ್ಕ ಆರ್ಡರಿನಲ್ಲಿ ಏನಾದರೂ ಕಾನೂನಿಗೆ ಲೋಪಬಂದಿದ್ದರೆ, ಚ್ಯುತಿ ಬಂದಿದ್ದರೆ, ಅಂಥವರಿಗೆ ಹೈಕೋರ್ಟಿಗೆ ಅಪೀಲು ತೆಗೆದುಕೊಂಡು ಹೋಗುವುದಕ್ಕೆ ಒಂದು ಅವಕಾಶವನ್ನು ಇದರಲ್ಲಿ ಕಲ್ಪಿಸಿದರೆ, ಕಮಿಷನರಿಗೆ ಈ ಕೆಲಸ ತಪ್ಪಿ ಅವರು ಬೇರೆ ಕೆಲಸ ಮಾಡುವುದಕ್ಕೆ ಅವಕಾಶವಿರುತ್ತದೆ. ಇಲ್ಲದೆ ಇದ್ದರೆ ಪ್ರಾರಂಭದಲ್ಲಿ ಕಮಿಷನರೇ ಈ ಕೆಲಸಗಳನ್ನು ನೋಡಬೇಕೆಂದು ಮಾಡಿದರೂ, ಮುಂದೆ ಕೆಲಸ ಜಾಸ್ತಿಯಾಗಿದೆಯಾದ್ದರಿಂದ ಇನ್ನೊಬ್ಬ ಪರ್ಸನಲ್ ಅಸಿಸ್ಟೆಂಟ್‌ನ್ನು ಕೊಡಿ ಎಂದು ಕೇಳುತ್ತಾರೆ. ಆಗ ಒಬ್ಬ ಅಧಿಕಾರಿಯನ್ನು ನೇಮಿಸುವುದು, ಅವರು ಸುಖವಾಗಿರಲು ಅವರಿಗೆ ಕೈತುಂಬ ಸಂಬಳ ಕೊಡುವುದು ಇಂಥದಕ್ಕೆ ಸರ್ಕಾರದ ಯೋಚನೆ ಓಡುತ್ತದೆ. ಆದರೆ ದೇಶದಲ್ಲಿರತಕ್ಕ ಸಾಮಾನ್ಯ ಜನಗಳ ಕಡೆ ತಮ್ಮ ದೃಷ್ಟಿ ಓಡುತ್ತದೆಯೇ ಎಂದರೆ, ನಿಜವಾಗಿಯೂ ಇಲ್ಲವೆಂದು ಹೇಳುತ್ತೇನೆ. ಹತ್ತು ವರ್ಷಗಳಿಂದ ರಾಜ್ಯಭಾರ ಮಾಡಿದ್ದೇವೆ, ಕೆರೆಕೊಟ್ಟಿದ್ದೇವೆ, ಭಾವಿ ಕೊಟ್ಟಿದ್ದೇವೆ, ಸ್ಕೂಲುಕೊಟ್ಟಿದ್ದೇವೆ, ಆಸ್ಪತ್ರೆ ಕೊಟ್ಟಿದ್ದೇವೆ ಎಂದು ಹೇಳಬಹುದು. ಆದರೆ ಆಸ್ಪತ್ರೆ ಕೊಟ್ಟಿರುವ ಕಡೆ ಔಷಧಿ ಇಲ್ಲ; ಸ್ಕೂಲನ್ನು ಕೊಟ್ಟಿರುವ ಕಡೆ ಓದುವ ಮಕ್ಕಳಿಲ್ಲ; ಓದುವ ಮಕ್ಕಳಿರುವ ಕಡೆ ಸ್ಕೂಲು ಇಲ್ಲ; ಈ ರೀತಿ ಇದೆ, ಆದರೂ ಸಹ ಸುಖೀರಾಜ್ಯವನ್ನು ತರುವುದಕ್ಕೆ ಪ್ರಯತ್ನಮಾಡುತ್ತೇವೆಂದು ಹೇಳುತ್ತಾರೆ.

ಈ ಮಸೂದೆಯ ಕೊನೆಯಲ್ಲಿ ಒಂದು ಪಟ್ಟಿಯನ್ನು ಕೊಟ್ಟಿದ್ದಾರೆ. Formula for detremining equivalent extent of land of different classes ಎಂದು ಅಲ್ಲಿ ಕೊಟ್ಟಿದ್ದಾರೆ. ಈ ಲೆಕ್ಕಾಚಾರವನ್ನು ರಾತ್ರಿಯಲ್ಲ ಕುಳಿತುಕೊಂಡು ಯೋಚಿಸಿದೆ ಲೆಕ್ಕಹಾಕಿದೆ. ಈ ತೀರ್ಮಾನಕ್ಕೆ ಇವರು ಹೇಗೆ ಬಂದರು ಎಂದು ಅರ್ಥವಾಗಲಿಲ್ಲ. ಸರ್ಕಾರಕ್ಕೆ ದುಡ್ಡು ಬಂದರೆ ಸರಿ ಎಂದು ಮಾಡಿದ್ದಾರೆಂದು ಕಾಣುತ್ತದೆ. ಶಾಸ್ತ್ರೋಕ್ತವಾಗಿರಬೇಕಾಗಿಲ್ಲ, ಶಾಸ್ತ್ರೋಕ್ತವಾಗಿದ್ದರೆ ಕಷ್ಟ ಎಂದು ಯೋಚಿಸಿರಬಹುದು ಮೂಗು ಇಲ್ಲದೆ ನಾಮ ಇಟ್ಟುಕೊಂಡರೆ ಅದು ಮುಖಕ್ಕೆ ಲಕ್ಷಣವಾಗಿರುತ್ತದೆಯೇ? ಮೂಗು ಉಳ್ಳವನು ನಾಮವನ್ನು ಇಟ್ಟುಕೊಂಡರೆ ಮುಖಕ್ಕೂ ಚೆಂದ, ನೋಡುವವರಿಗೂ ಆನಂದ. ಮೂಗೇ ಇಲ್ಲ, ಮೂರು ನಾಮ ಹಾಕಿಕೊಂಡರು ಎನ್ನುವ ಸ್ಥಿತಿಯಾಗಿದೆ. . . .

ಛೇರ್‌ಮನ್ ಅವರು (ಶ್ರೀ ಎಂ. ಎಂ. ಪಾಟೀಲ್).—ಸಮಯವಾಯಿತು, ಬೇಗನೆ ಮುಗಿಸಿ.

Sri C. J. MUCKANNAPPA.—There is no time limit, Sir. I have gone through parliamentary procedure and I am sorry to say that I do not find anywhere time limit being laid down for the discussion of Money Bills.

ಛೇರ್‌ಮನ್ ಅವರು.—ಮೊನ್ನೆ ದಿವಸ ಈ ಸಭೆಯಲ್ಲಿ ಮಾತನಾಡಿದಾಗ್ಗೆ ತಾವೂ ಕೂಡ ಇದ್ದಿರಿ. ಅಂದು ಆದ ತೀರ್ಮಾನ ತಮ್ಮ ಗಮನದಲ್ಲಿಯೂ ಇದೆ. ಈ ದಿನ ಎರಡು ವೇಳೆಯಲ್ಲಿಯೂ ಕುಳಿತುಕೊಂಡು ಈ ಮಸೂದೆಯನ್ನು ಮುಗಿಸಬೇಕೆಂದು ಸಭೆಯಲ್ಲಿ ತೀರ್ಮಾನವಾಗಿದೆ. ಆದಕಾರಣ time limit ಮಾಡದೆ ಇದ್ದರೆ, ಸಭೆಯ ಕಾರ್ಯಕಲಾಪವನ್ನು ಮುಗಿಸಲಿಕ್ಕಾಗುವುದಿಲ್ಲ. ದಯವಿಟ್ಟು ತಾವು ಅದರಂತೆ ಅನುಸರಿಸಬೇಕೆಂದು ಕೇಳಿಕೊಳ್ಳುತ್ತೇನೆ.

Sri C. J. MUCKANNAPPA.—With every respect to the Chair, I do not think even the Chair can restrict the time unless there is a motion for closure. Even in that case, unless it is accepted, I am entitled to express my views.

ಛೇರ್‌ಮನ್ ಅವರು.—ನಾನು ಕಾಲವನ್ನು ನಿಗದಿ ಮಾಡುತ್ತಿಲ್ಲ. ಸಭೆಯಲ್ಲಿ ಅದಂಥ ತೀರ್ಮಾನವನ್ನು ತಮಗೆ ತಿಳಿಸಿದ್ದೇನೆ.

12 NOON

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಈ ಮಸೂದೆಯನ್ನು ತರುವಾಗ ಸ್ವಲ್ಪ ಸರಿಯಾಗಿ ದೂರಾಲೋಚನೆ ಮಾಡಿ ತಂದಿಲ್ಲ. ಸರ್ಕಾರದವರು ಹೇಳಿದ ತತ್ವಕ್ಕೇ ವಿರೋಧವಾಗಿ ನಡೆದುಕೊಂಡಂತಿದೆ.

ಹೊಗೆಸೊಪ್ಪಿಗೆ ಹನ್ನೆರಡು ಎಕರೆ ಎಕ್ಸೆಂಪ್ಷನ್ ಕೊಟ್ಟಿದ್ದೀರಿ. ಈಗ ಹೊಗೆಸೊಪ್ಪನ್ನು 25 ಮಣಕ್ಕಿಂತ ಜಾಸ್ತಿ ಬೆಳೆಯುತ್ತಿಲ್ಲ. ಹನ್ನೆರಡು ಎಕರೆಗೆ Exemption ಕೊಟ್ಟಿದ್ದೀರಿ, ಎಂದರೆ ಮುನ್ನೂರು ಮಣ ಹೊಗೆಸೊಪ್ಪು ಆಯಿತು. ನಿಪ್ಪಾಣಿ ಹೊಗೆಸೊಪ್ಪಿಗೆ ಕಡಿಮೆ ಮಾಡಿದ್ದೀರಿ. ಯಾವ ಆಧಾರದ ಮೇಲೆ ಕಡಿಮೆ ಮಾಡಿದ್ದೀರೋ ಅರ್ಥವಾಗುತ್ತಿಲ್ಲ. ಹೊಗೆಸೊಪ್ಪನ್ನು ಯಾವ ಆಧಾರದಮೇಲೆ ಎಕ್ಸೆಂಪ್ಟ್ ಮಾಡಿದ್ದೀರಿ ಯಾವ ತತ್ವವನ್ನು ಅನುಸರಿಸಿದ್ದೀರಿ? ತತ್ವವೇನೂ ಇಲ್ಲದೆ ಇದನ್ನು ಇಲ್ಲಿ ಒಪ್ಪಿಕೊಂಡುಬಿಡಿ ಎಂದು ಹೇಳಿದರೆ, ಹಾಗೆಯೇ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಛೇರ್ಮನ್ ಅವರು.—ಮಾನ್ಯ ಸದಸ್ಯರು ಜಾಗ್ರತೆ ಮುಗಿಸಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಂತಹ ಮಸೂದೆಗೆ ನಮ್ಮ consentನ್ನು ಏಕೆ ತೆಗೆದುಕೊಳ್ಳಬೇಕು, ನಿಮ್ಮ progressive views change ಆಗದಿದ್ದರೆ? ನಾವು ಹೀಗೆ ಬೆಳಗಿನಜಾವದವರೆಗೂ ಹೇಳುತ್ತಿದ್ದರೂ ಸಹ ಕೊನೆಗೆ ತೀರ್ಪು ಎಕ್ಸ್‌ಪಾರ್ಟಿ ತರಹವೇ. ಹೀಗೆ ಈ ಮಸೂದೆಯಲ್ಲಿ ಹತ್ತು ಎಕರೆಯಿಂದ 30 ಎಕರೆ ಜಮೀನುಗಳಲ್ಲಿ, ಕಾಫಿ ಬೆಳೆಯುತ್ತಾರೆ, ಏಲಕ್ಕಿ ಬೆಳೆಯುತ್ತಾರೆ, ಮೆಣಸು ಬೆಳೆಯುತ್ತಾರೆ, ಇಂತಹವರಿಗೆಲ್ಲಾ ಅನುಕೂಲ ಮಾಡಿ ತಾವು. . . . .

ಛೇರ್ಮನ್‌ಅವರು.—ನಾನು ಈಗಾಗಲೇ ಎರಡು ಮೂರುಸಾರಿ ಹೇಳಿದ್ದೇನೆ. ಸಭೆಯ ಅಭಿಪ್ರಾಯದಂತೆ ತಾವೂ ವರ್ತಿಸಬೇಕಾಗಿದೆ. ಹಾಗೆ ಹೇಳಿದ್ದರೂ ಸಹ ತಾವು ಈ ರೀತಿಯಾಗಿ ವಿರೋಧ ಮಾಡುತ್ತಾ ಇದ್ದೀರಿ. ಇದು ಸಭೆಯ ಗೌರವಕ್ಕೆ ಪಾತ್ರವಾದುದಲ್ಲ. ತಾವು ದಯವಿಟ್ಟು ಜಾಗ್ರತೆ ತಮ್ಮ ಭಾಷಣವನ್ನು ಮುಗಿಸಬೇಕು.

Sri C. J. MUCKANNAPPA.—Sir, unless there is a ruling prescribing a time limit I cannot stop because I have got much to say.

ಛೇರ್ಮನ್‌ಅವರು.—ಮಾನ್ಯ ಸದಸ್ಯರು ಕೂಡಬೇಕು. ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ. ಒಬ್ಬರಿಗೆ ಒಂದು ರೀತಿಯ ಅವಕಾಶ ಮತ್ತೊಬ್ಬರಿಗೆ ಒಂದು ರೀತಿಯ ಅವಕಾಶ ನಾನು ಮಾಡುವ ಹಾಗಿಲ್ಲ. ಮತ್ತು ಹಾಗೆ ಮಾಡುವುದಕ್ಕೆ ಅವಕಾಶವೂ ಇಲ್ಲ. ತಾವು ಕೂಡಬೇಕು ಮತ್ತು ಬೇರೆಯವರಿಗೆ ಮಾತನಾಡಲು ಅವಕಾಶಮಾಡಿ ಕೊಡಬೇಕು.

Sri C. J. MUCKANNAPPA.—I am very sorry unless the Chair says that even though the Bill under discussion is a money Bill the Chair has put a time limit on speeches. I am not going to stop. The convention is that for discussion of money Bills there is no time limit on speeches. So unless the chair gives a ruling that even on a money bill it has put a time limit, I cannot stop. I have got to say so because I am coming from an agricultural family.

ಶ್ರೀ ಟಿ. ಮರಿಯಪ್ಪ.—ರಿಪಿಟಿಷನ್ ಜಾಸ್ತಿಯಾಗುತ್ತಿದೆ.

Sri C. J. MUCKANNAPPA.—Was a time limit prescribed?

Mr. CHAIRMAN.—15 minutes.

Sri C. J. MUCKANNAPPA.—No time limit was fixed. If any time limit has been fixed then I am bound to obey the Chair. Under what provision of the Rules is the Chair putting a time limit? I want to know that.

ಛೇರ್ಮನ್ ಅವರು.—ಹೊಸ ವಿಷಯಗಳು ಅಥವಾ ಸೂಚನೆ ಗಳಿದ್ದರೆ ಕೊಡಬಹುದು. ಸುಮ್ಮನೆ ರಿಪೀಟ್ ಮಾಡಬಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದು repetition ಅಲ್ಲ ಸ್ವಾಮಿ. ಈ ಶಾಸನದಲ್ಲಿರತಕ್ಕ ಸೆಕ್ಷನ್ನುಗಳನ್ನು ಒಪ್ಪುವುದಕ್ಕೆ ಮುಂಚೆ ಇದರ ಹಿಂದೆ ಏನು ನೀತಿ ಅಡಗಿದೆ ಎಂಬುದನ್ನು ಮಾತ್ರ ಹೇಳುತ್ತಿದ್ದೇನೆ. ಆದರೆ ಒಂದು ಕಡೆಯಲ್ಲ, ಎರಡು ಕಡೆಯಲ್ಲ. ಶ್ರೀಮಂತರ ರಕ್ಷಣೆಗಾಗಿ, ಶ್ರೀಮಂತರನ್ನು ಉಳಿಸುವುದಕ್ಕಾಗಿ ಈ ಕಾಯಿದೆಯಲ್ಲಿ ಬಹಳ ದೂರ ಹೋಗುತ್ತಿರುವುದು ಕಾಣುತ್ತಿದೆ. ಇದರ ಮೇಲೆ ಸರ್ಕಾರಕ್ಕೆ ದುಡ್ಡು ಬಾರದು ಎಂದಲ್ಲ. ಸರ್ಕಾರದ ಕೆಲಸ ಕಾರ್ಯಗಳು ನ್ಯಾಯವಾಗಿ ನಡೆಯದೇ ಇರುವುದರಿಂದ. . . .

ಶ್ರೀ ಟಿ. ಮರಿಯಪ್ಪ.—ಒಂದು ಸಾರಿಯಲ್ಲ, ಹತ್ತುಸಾರಿ ಹೇಳಿದ್ದೀರಿ.

The whole thing is being repeated and repeated.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೂರುಸಾರಿ ಹೇಳಿದರೂಸಹ ನಿಮ್ಮ ಮನಸ್ಸಿಗೇ ಬರುವುದಿಲ್ಲವಲ್ಲ ಸ್ವಾಮೀ, ಅದಕ್ಕಾಗಿ ಹೇಳುತ್ತೇನೆ.

Mr. CHAIRMAN.—Order, order.

ಮಾನ್ಯ ಸದಸ್ಯರು ಭಾಷಣ ಮಾಡುವಾಗ ಈ ರೀತಿಯಾಗಿ ನೇರವಾಗಿ, ಮಂತ್ರಿಗಳಲ್ಲಿ ಚರ್ಚಿಸಬಾರದು. ಇದು ಸರಿಯಲ್ಲ.

Sri C. J. MUCKANNAPPA.—I know my responsibilities and I am here to discharge my duties as a member of this House. Very glad. I will obey that.

ಆಮೇಲೆ ಈಗ ಈ ಮಸೂದೆಯಲ್ಲಿ 3,500 ರೂಪಾಯಿಗಳನ್ನು ಉದಾರವಾಗಿ ನಿಗದಿ ಮಾಡಿದ್ದಾರೆ. Income-tax Department ನವರೂ 3,500 ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಅವರು ಹೀಗೆ ಮಾಡಿದ್ದಾರೆಂದು ಇಲ್ಲಿ ನೀವೂ ಕೂಡ ಏತಕ್ಕೋಸ್ಕರ ಹಾಕಿದ್ದೀರಿ? ಅದನ್ನು ಇನ್ನೂ ಕಡಮೆ ಹಾಕಿದ್ದರೆ ಏನು ತೊಂದರೆ ಆಗುತ್ತಿತ್ತು? ಇಲ್ಲಿ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಂಡು 3,000 ರೂಪಾಯಿಗಳಂತೆ fix ಮಾಡಿದ್ದರೆ ನಿಮಗೇನು ತೊಂದರೆಯಾಗುತ್ತಿತ್ತು? ತಾವು ಸ್ವಲ್ಪವೂ ಉದಾರತೆ ತೋರಿಸಬಾರದು ಎಂತಲೋ? ಇದು ಒಂದು ವ್ಯಾಪಾರವಿದ್ದಹಾಗೆ ಆಗಿದೆ.

(SRI C. J. MUCKANNAPPA)

ಚಿನ್ನ, ಬೆಳ್ಳಿ ತೂಕಮಾಡುವಾಗ ಒಂದು ಒಂದೂವರೆ ತೊಲ ತೂಕ ಮಾಡಬೇಕಾದರೆ ಎರಡುಸಾರಿ, ಮೂರು ಸಾರಿ ಅದನ್ನು ಒರೆ ಹಾಕಿನೋಡಿ, ಅನಂತರ ತೂಕ ಹಾಕಿ ನೋಡುತ್ತಾರೆ. ಈ ಸಿಗದಿ ಮಾಡಿರುವುದೂ ಕೂಡ ಹಾಗಾಗಿದೆ. ಕಾಂಪೊಸಿಷನ್ ವಿಚಾರದಲ್ಲಿ ಈಗನಮ್ಮ ಪಕ್ಷದ ನಾಯಕರು ಹೇಳಿದ ಪ್ರಕಾರ ಏಕೆ ಒಪ್ಪಿಕೊಳ್ಳಬಾರದು ?

ಹಿಂದೆ General discussion ಆದಾಗ ಈ ರೀತಿಯಾಗಿ 3,500 ರೂಪಾಯಿಗಳಿಂದ 5,000 ರೂಪಾಯಿಗಳ ವಿಷಯದಲ್ಲಿ ಚರ್ಚೆ ಬಂದಾಗ ಇದನ್ನು Select Committeeಯಲ್ಲಿ ಸರಿಯಾಗಿ ನೋಡಿ ಒಪ್ಪಿಕೊಳ್ಳೋಣವೆಂದು ಹೇಳಿದ್ದರು, ಆದರೆ ಈಗ ಈ ಮಸೂದೆ ಸೆಲೆಕ್ಟ್ ಸಮಿತಿಯಿಂದ ಪುನಃ ಬಂದಾಗ ನೋಡಿದರೆ ಇದೆಲ್ಲ ನಿಜ ಎಂದು ನನಗನಿಸುತ್ತದೆ. ನೀವು ಏನು ಒಂದು ತತ್ವವನ್ನು ದೊಡ್ಡ ದೊಡ್ಡ ವಾದಗಳನ್ನು ಹೇಳುತ್ತಿದ್ದಿರೋ ಆ ರೀತಿಯಾದ ''Progressive views'' ಏನೂ ಇಲ್ಲಿ ಕಾಣುತ್ತಿಲ್ಲ. ಕೊನೆಯಲ್ಲಿ, ನಾನು ಈ ಸೆಲೆಕ್ಟು ಕಮಿಟಿಯಿಂದ ಈಗ ಬಂದಿರತಕ್ಕ ಈ ಮಸೂದೆಯನ್ನು ಮನಃಪೂರ್ವಕವಾಗಿ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿ, ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ವೈ. ವೀರಪ್ಪ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ಪರಿಶೀಲನಾ ಸಮಿತಿಗೆ ಹೋಗಿ ಯಾವುದೋ ಒಂದು ರೂಪವನ್ನು ತಾಳಿ, ಈಗ ನಮ್ಮಮುಂದೆ ಬಂದಿರತಕ್ಕ ಮಸೂದೆಯನ್ನು ತೀಕ್ಷ್ಣವಾಗಿ ಪರಿಶೀಲಿಸಿ ನೋಡಬೇಕಾಗಿದೆ. ಮತ್ತು ನನ್ನ ಮಾನ್ಯ ಮಿತ್ರರುಗಳೂ ಕೂಡ ಅನೇಕ ವಿಧವಾಗಿ ಮಾತನಾಡಿದ್ದಾರೆ. ಯಾವುದೇ ಒಂದು ಸರ್ಕಾರವಾಗಲೀ ಅದು ಒಂದು ಒಳ್ಳೆಯ ಮೂಲತತ್ವವನ್ನನುಸರಿಸಿ ತನ್ನ ಕಾರ್ಯಗಳನ್ನು ನಡೆಸುತ್ತದೆ.

[MR. SPEAKER in the Chair]

ನಾನು ಕೂಡ ಅದೇ ತತ್ವದಮೇಲೆ ಮಾತನಾಡುವುದು ಅಗತ್ಯವೆಂದು ಇಲ್ಲ ಹೇಳುತ್ತಿದ್ದೇನೆ. ಬಹುಶಃ ಈ ವ್ಯವಸಾಯದ ಆದಾಯದಿಂದ ಸರ್ಕಾರ ತನ್ನ ಬೊಕ್ಕಸವನ್ನು ತುಂಬಲೇಬೇಕೆಂಬ ಮೂಲ ತತ್ವವನ್ನನುಸರಿಸಿ ಈ ಮಸೂದೆಯನ್ನು ತಂದಿದೆ. ಅದಕ್ಕೆ ಒಪ್ಪೋಣ. ಆದರೆ ಇದರ ಹಿನ್ನೆಲೆಯನ್ನು ಪರಿಶೀಲಿಸಿ ನೋಡಿದರೆ ನಿಜವಾಗಿಯೂ ರೈತ ವರ್ಗದವರಿಗೆ ಸರ್ಕಾರದವರು ಎಷ್ಟರಮಟ್ಟಿಗೆ ಜವಾಬ್ದಾರಿ ವಹಿಸಬೇಕೋ, ಎಷ್ಟರಮಟ್ಟಿನ ಸೌಲಭ್ಯಗಳನ್ನು ಒದಗಿಸಬೇಕೋ ಅಂತಹ ಸೌಲಭ್ಯಗಳನ್ನು ಒದಗಿಸಿಲ್ಲ. ಬಹುಶಃ, ಅನೇಕಸಾರಿ ಇದೇ ಒಂದು ತತ್ವವನ್ನು ಹೇಳುತ್ತಿದ್ದಾರೆ. ನಾನೂ ಸಹ ಇವೊತ್ತಿನ ದಿವಸ ಮಾನ್ಯ ಶ್ರೀ ಮುಕ್ಕಣ್ಣಪ್ಪನವರು ಹೇಳಿದ ವಿಷಯವನ್ನು ಸ್ವಲ್ಪಮಟ್ಟಿಗೆ ಪುಷ್ಟೀಕರಿಸಬೇಕಾಗಿದೆ. ಒಂದು ಕಡೆ ಪಂಡಿತ್ ನೆಹರೂ ಅವರು Socialistic pattern of Society ಎಂದು ಹೇಳಿದರು. ಇದೇ ತತ್ವವನ್ನು ಅನುಸರಿಸಿಕೊಂಡು ಬರುತ್ತಿದ್ದಾರೆಯೇ ಎಂಬುದನ್ನು ನಾವು ಈಗ ನೋಡಿ ಹೇಳಬೇಕಾಗಿದೆ. ಒಂದು ಕಡೆ ವ್ಯವಸಾಯಗಾರರಿಗೆ ಒಂದು Sales Tax ಇದೆ. ಇನ್ನೊಂದುಕಡೆ ಒಂದು Irrigation Tax ಅಥವಾ Betterment Levy Tax. ಹೀಗಾಗಿ ಒಂದು ವಿಧದಲ್ಲಿ ಬೊಕ್ಕಸಕ್ಕೆ ದುಡ್ಡನ್ನು ತಾವು ತುಂಬಿಕೊಳ್ಳುತ್ತೀರಿ

ಶ್ರೀ ಟಿ. ಮರಿಯಪ್ಪ.—ಹೊಸದೇನೂ ಅಲ್ಲ. ರೈತರಿಗೂ ಕೂಡ ಈ ಕಾನೂನಿನಿಂದ ಏನೂ ತೊಂದರೆಯಿಲ್ಲ.

ಶ್ರೀ ವೈ. ವೀರಪ್ಪ.—ಪದೇ ಪದೇ ಸಭೆಯ ಮುಂದೆ ಹೇಳುತ್ತಿದ್ದೇನೆ. ನನ್ನ ಸ್ನೇಹಿತರೂ ಹೇಳುತ್ತಿದ್ದಾರೆ. ನಿಜವಾಗಿಯೂ ನಿರ್ವಂಚನೆಯಿಂದ ಸರ್ಕಾರದ ಆಡಳಿತವನ್ನು ನಡೆಸುತ್ತಿದ್ದಾರೆಯೇ ? ಇವತ್ತಿನ ದಿವಸ ಸರ್ಕಾರಕ್ಕೆ ಬರಬೇಕಾದ ಬಾಕಿ ಎಷ್ಟಿದೆ ? ಮಂಡ್ಯ ಜಿಲ್ಲೆಯಲ್ಲಿ ಒಂದು ಕೋಟಿ ರೂಪಾಯಿಗಳು ಬಾಕಿ ಇದೆ.

ಶ್ರೀ ಟಿ. ಮರಿಯಪ್ಪ.—ಅದು ನಿಜ.

ಶ್ರೀ ವೈ. ವೀರಪ್ಪ.—ಇಷ್ಟು ವರ್ಷಗಳಿಂದ ಏತಕ್ಕೋಸ್ಕರ ಅದನ್ನು ವಸೂಲು ಮಾಡಲಿಲ್ಲ ?

Sri T. MARIAPPA.—My friend is entirely under a mistaken impression. The whole thing is being reduced.

ಶ್ರೀ ವೈ. ವೀರಪ್ಪ.—ಸೆಲೆಕ್ಟ್ ಕಮಿಟಿಗೆ ಹೋಗುವುದಕ್ಕೆ ಮುಂಚೆಯೇ ಸಭೆಯಲ್ಲಿ ಅನೇಕ ಭಾಷಣಕಾರರು 3 ಸಾವಿರಕ್ಕೆ ಬದಲಾಗಿ 5 ಸಾವಿರ ಪರಿಮಿತಿ ಇರಲಿ ಎಂದು ಹೇಳಿದರು. ರೈತಾಪಿ ವರ್ಗದವರಿಗೆ ತಮ್ಮ ಮಕ್ಕಳನ್ನು ಅಭಿವೃದ್ಧಿಗೆ ತರುವುದಕ್ಕೆ ಮತ್ತು ವಿದ್ಯಾಭ್ಯಾಸ ಮಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರಿಗೆ ಒಂದು ಸರಿಯಾದ ಪರಿಮಿತಿಯಲ್ಲಿ ಆದಾಯ ಬರುವುದಿಲ್ಲ. ಈ ದೃಷ್ಟಿಯಿಂದ ಕೊನೆಯ ಪಕ್ಷ 3,500 ರೂಪಾಯಿಗಳಿಂದ 4,500 ರೂಪಾಯಿಗಳವರೆಗೆ ಹಳೆಯ ಕಾನೂನಿನ ಲೆವೆಲ್ಲಿಗೆ ತನ್ನಿ ಎಂದು ಹೇಳಿದರೂ ತರುತ್ತಾ ಇಲ್ಲ—ಇವತ್ತಿನ ದಿವಸ ಶ್ರೀಮಂತರಿಗೆ ಈ ಸೆಲೆಕ್ಟ್ ಕಮಿಟಿಯಿಂದ ಅನುಕೂಲವಾಗಿದೆಯೇ ವಿನಾ ರೈತರಿಗೆ ಅನುಕೂಲವಾಗಿಲ್ಲ, ಎಂದು ಹೇಳಬೇಕಾಗಿದೆ. ಅನೇಕ ಸಾರಿ ನಾನು ಹೇಳುತ್ತಿದ್ದೇನೆ. ಈ ತರಹ ವ್ಯವಸಾಯ ತೆರಿಗೆಯನ್ನು ವಿಧಿಸುವುದರಿಂದ ಈರುಳ್ಳಿ, ಬೆಳ್ಳುಳ್ಳಿ, ಕೊತ್ತಂಬರಿ, ಮೆಣಸಿನಕಾಯಿ ಇತ್ಯಾದಿಗಳನ್ನು ರೈತರು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬೆಳೆಗಳ ಉತ್ಪತ್ತಿ ಕಡಿಮೆಯಾಗುತ್ತದೆ. ಉತ್ಪತ್ತಿ ಕಡಿಮೆಯಾದಾಗ ಬೆಲೆ ಜಾಸ್ತಿಯಾಗುತ್ತದೆ. ಸರ್ವೇಸಾಮಾನ್ಯವಾಗಿ ಜನರು ಉಪಯೋಗಿಸುವ ಈರುಳ್ಳಿ, ಬೆಳ್ಳುಳ್ಳಿಗಳಮೇಲೆ ತೆರಿಗೆ ವಿಧಿಸುವುದರಿಂದ ಬೆಳೆಯತಕ್ಕ ಸಾಮಾನ್ಯ ಮನುಷ್ಯನಿಗೆ ಉತ್ತೇಜನ ಎಲ್ಲಿಂದ ಬರಬೇಕು ? ನಿಜವಾಗಿ ಬೆಲೆ ಕಡಿಮೆಯಾಗಿ ಮಾರ್ಕೆಟ್ಟಿನಲ್ಲಿ ವ್ಯಾಪಾರಮಾಡುವ ಪರಿಮಿತಿ ಕಡಮೆ ಆದರೆ ಅದರ ಬೆಲೆ ಜಾಸ್ತಿಯಾಗುತ್ತದೆ. ಇವತ್ತಿನ ದಿವಸ ಒಂದು ಉದಾಹರಣೆ ತೆಗೆದು ಕೊಳ್ಳಿ. 1950ನೇ ಇಸ್ವಿಯಿಂದಲೂ ಆಹಾರದ ಉತ್ಪತ್ತಿಯನ್ನು ಜಾಸ್ತಿಮಾಡುತ್ತೇವೆಂದು ಹೇಳಿ ಕೋಟ್ಯಾಂತರ ರೂಪಾಯಿಗಳನ್ನು ದೇಶದಲ್ಲಿ ಅದಕ್ಕಾಗಿ ಖರ್ಚುಮಾಡಿದರೂ ಇವತ್ತಿನ ದಿವಸ ಆಹಾರದ ಪರಿಸ್ಥಿತಿ ನಿವಾರಣೆಯಾಗಿಲ್ಲ. ಇವತ್ತಿನ ದಿವಸ ಒಂದು ರೂಪಾಯಿಗೆ ಒಂದು ಸೇರು, ಒಂದೂವರೆ ಸೇರು ಅಕ್ಕಿಯನ್ನು ಕೊಂಡುಕೊಳ್ಳುತ್ತಿದ್ದಾರೆಂದು ನಾನು ಹೇಳುತ್ತೇನೆ. ಬರೀ ವರಮಾನ ತೆರಿಗೆ ತೆಗೆದುಕೊಂಡರೆ ಏನು ಪ್ರಯೋಜನ ? ಬೆಳೆಯುವ ರೈತರಿಗೆ ಉತ್ಸಾಹ ಕಡಮೆಯಾಗುತ್ತದೆ. ಅವುಗಳ ಬೆಲೆ ಜಾಸ್ತಿಯಾಗುತ್ತದೆ. ಇದರಿಂದ ಸಾಮಾನ್ಯ ಜನಗಳಿಗೆ ತೊಂದರೆಯಾಗುತ್ತದೆ. ಕೇವಲ ಅಧಿಕಾರದ ವರ್ಗದವರಿಗೂ, ಮತ್ತು ವ್ಯಾಪಾರ ವರ್ಗದವರಿಗೂ ವ್ಯಥೆ ಬರುತ್ತದೆ. ರೈತರು ಯಾವುದೋ ಒಂದು ರೀತಿಯಲ್ಲಿ

ತಮ್ಮ ಜೀವನ ಮಾಡೋಣವೆಂದು ಇರುತ್ತಾರೆ. ಅವರ ಮೇಲೆ ಇನ್‌ಕಂಟ್ಯಾಕ್ಸ್ ಹಾಕಿ ಕಿರುಕುಳ ಕೊಡು ವುದರಿಂದ ಉತ್ಪತ್ತಿ ಜಾಸ್ತಿಯಾಗುತ್ತದೆಯೇ? ವ್ಯವಸಾಯ ತೆರಿಗೆಯನ್ನು ಬೇಕಾದರೆ ಎರಡು ಸಾವಿರ, ನಾಲ್ಕು ಸಾವಿರ ಪಲ್ಲ ಬೆಳೆ ಬೆಳೆಯುವವರ ಮೇಲೆ ಹಾಕಿ. ಅದನ್ನು ನಾನು ತತ್ವಶಃ ಒಪ್ಪುತ್ತೇನೆ. ಅದರಲ್ಲಿಯೂ, ಒಂದು ಮಿತಿ ಇದೆ. ಫಸ್ಟ್ ಸ್ಲ್ಯಾಬ್ ಸೆಕೆಂಡ್ ಸ್ಲ್ಯಾಬ್, ಥರ್ಡ್ ಸ್ಲ್ಯಾಬ್ ಎಂದು ಇಟ್ಟು ಕೊಳ್ಳಬಹುದು. ಈ ರೀತಿ ಯಾವೊಂದು ಸೂಚನೆಯನ್ನೂ ಮಾಡದೆ ಹೆಚ್ಚಿನ ವ್ಯವಸಾಯ ಉತ್ಪತ್ತಿ ಬರುವವರಮೇಲೆ ಹಾಕಿದರೆ, ಕೇವಲ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವವರ ಮೇಲೆ ತೆರಿಗೆ ವಸೂಲು ಮಾಡುವುದನ್ನು ನೋಡಿದರೆ, ಇನ್ನು ನಿಜವಾಗಿಯೂ, ಇವರು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿಯನ್ನು ಸ್ಥಾಪನೆಮಾಡುವ ಮನುಷ್ಯರೇ ಎಂದು ಸಂಶಯವಾಗುತ್ತದೆ. ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದವು. ಆದರೂ ಸರ್ಕಾರದಲ್ಲಿ ದಕ್ಷತೆ ಕಡಮೆ, ದಾಕ್ಷಿಣ್ಯ ಜಾಸ್ತಿಯಾಗಿದೆ. ಯಾವ ಆಧಾರದ ಮೇಲೆ ಹೊಗೆಸೊಪ್ಪಿಗೆ 12 ಎಕರೆಗೆ ವಿನಾಯಿತಿಯನ್ನು ನಿಗದಿ ಮಾಡಿದ್ದಾರೆ? ಅದಕ್ಕೆ ಒಂದು ಸಮಂಜಸವಾದ ಉತ್ತರವನ್ನು ಹೇಳಬೇಕು. ಕೇವಲ ಪ್ರಭುತ್ವ ವ್ಯಕ್ತಿಗಳೇ ಸೇರಿಕೊಂಡು ಮುಂದಿನ ಒಂದು ದೃಷ್ಟಿಯಿಂದ ಅನುಕೂಲವಾಗುವ ರೀತಿ ಮಾಡಿದ್ದಾರೆಯೇ? ಮೊದಲು ನಮ್ಮ ಮುಂದೆ ಇಟ್ಟಿರ ತಕ್ಕ ಬಿಲ್ಲನ್ನು ಒಪ್ಪಿಕೊಂಡಿದ್ದರೆ ಜನಸಾಮಾನ್ಯರಿಗೆ ಚೆನ್ನಾಗಿತ್ತು. ಈಗ ನಮ್ಮ ಮುಂದೆ ಬಂದಿರುವ ಮಸೂದೆ ಸಾಮಾನ್ಯ ಜನರಿಗೆ ಅನುಕೂಲವಾಗಿಲ್ಲ. ಕೇವರ ಅನುಕೂಲಸ್ಥರಿಗೆ ಚೆನ್ನಾಗಿದೆ.

ಶ್ರೀ ಟಿ. ಮರಿಯಪ್ಪ.—ಸಾಮಾನ್ಯ ಜನರಿಗೆ 12 ಎಕರೆ ವಿನಾಯಿತಿ ಇದೆ.

ಶ್ರೀ ವೈ. ವೀರಪ್ಪ.—ಮಾನ್ಯ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಮದರಾಸು ನೋಡಿ, ಕೊಡಗು ನೋಡಿ, ಬೊಂಬಾಯಿ ನೋಡಿ ಎಂದು. ಈಗ ಪ್ಲಾಂಟೇಷನ್ ಕೈಗಾರಿಕೆ ತೆಗೆದುಕೊಳ್ಳೋಣ. ಈ ಕೈಗಾರಿಕೆಗೆ ಉತ್ತೇಜನವನ್ನು ಕೊಡಬೇಕು ಎನ್ನುವ ಭಾವನೆ ತಮಗೆ ಇರಬೇಕು. ವಿನಾಯಿತಿ ಹಿಂದೆ ಕೊಟ್ಟಂತೆ ಕೊಟ್ಟಿಲ್ಲ.

ಶ್ರೀ ಟಿ. ಮರಿಯಪ್ಪ.—ಮದರಾಸ್ ಮತ್ತು ಕೇರಳದಲ್ಲ ವಿನಾಯಿತಿ ಕೊಟ್ಟಿಲ್ಲ.

ಶ್ರೀ ವೈ. ವೀರಪ್ಪ.—ಮದರಾಸಿನ ಬಿಲ್ಲನ್ನು ತೆಗೆದು ನೋಡಿ; ಅಲ್ಲಿ ವಿನಾಯಿತಿ ಕೊಟ್ಟಿದ್ದಾರೆ. 15 ಎಕರೆಗಿಂತ ಕಡಮೆ ಇರುವುದಕ್ಕೆ ವಿನಾಯಿತಿ ಇದೆ. 15 ರಿಂದ 30 ಎಕರೆವರೆಗೆ 3 ರೂಪಾಯಿ ವಸೂಲು ಮಾಡುತ್ತಿದ್ದಾರೆ. ಅಂದಮೇಲೆ ವಿನಾಯಿತಿ ಇಲ್ಲ ಎಂದು ಮಾನ್ಯ ಮಂತ್ರಿಗಳು ವಾದ ಮಾಡಬಾರದು. 15 ಎಕರೆಗಳವರೆಗೆ ಏತಕ್ಕೆ ವಿನಾಯಿತಿ ಕೊಡಬಾರದು? ಅದರಲ್ಲಿ ಕಾಫಿ ಗಿಡಗಳು ಎಷ್ಟಿವೆ, ಇತರ ಗಿಡಗಳು ಎಷ್ಟಿವೆ ಎಂಬುದನ್ನು ನೋಡಬೇಕು. ಅದಲ್ಲದೆ ಸರಿಯಾದ ರೀತಿಯಲ್ಲಿ ವ್ಯವಸಾಯ ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಹೇಳುವುದಾದರೆ ಪರಿಶೀಲನಾ ಕಮಿಟಿಯವರು ಪರಿಶೀಲನೆ ಮಾಡಿ ಬಂದಿರತಕ್ಕ ಈ ಮಸೂದೆ ನಿಜವಾಗಿ ಜನಸಾಮಾನ್ಯರಿಗೆ ಅನುಕೂಲವಾಗಿಲ್ಲ. ದೇಶದ ಸರ್ಕಾರ ಒಂದು ಧ್ಯೇಯವನ್ನೇ ಅನುಸರಿಸಿಕೊಂಡು ಸಾಮಾನ್ಯ ಜನರ ಆಕಾಂಕ್ಷೆಗಳಿಗೆ ಬೆಲೆ ಕೊಟ್ಟು, ಗಮನಕೊಟ್ಟು, ಟ್ಯಾಕ್ಸ್ ಹಾಕುವಂತ ಏರ್ಪಾಡು ಮಾಡಬೇಕು. ಸುಂಕದಮಾರಿ ಬಂದು ನಮ್ಮನ್ನು ಸುಂಟರಗಾಳಿ ಎತ್ತಿಕೊಂಡು ಹೋಗುವ ಹಾಗೆ ಈ ಮಸೂದೆ ಇದೆ.

ಇನ್ನು ಅಪೀಲು ವಿಚಾರ. ಅಪೀಲು ಕೋರ್ಟಿಗೆ ಹೋಗಬೇಕಾದರೆ ಒಂದು ಹಕ್ಕಿನ ಮೇಲೆ ಹೋಗುವ ಹಾಗಿಲ್ಲ. ಏನೋ ಕಮಿಷನರು ರೆಫರೆನ್ಸ್ ಮಾಡಿದರೆ ಆಗ ಮಾತ್ರ ಹೋಗಬಹುದು. ನೇರವಾಗಿ ಏತಕ್ಕೆ ಹೋಗಬಾರದು? ಒಂದು ಅನ್ಯಾಯ ನಡೆದಿದ್ದರೆ ರಿಲೀಫ್ ತೆಗೆದುಕೊಳ್ಳಬಹುದು ಎಂಬ ಪ್ರಾವಿಷನ್ನನ್ನು ಇದರಲ್ಲಿ ಅಳವಡಿಸಿಲ್ಲ.

ಇನ್ನು ನೋಟೀಸ್ ವಿಚಾರ. ಒಬ್ಬ ಅಸೆಸ್ ಮಾಡುವವನು ಹೋಗಿಬಿಟ್ಟು ಅಸೆಸ್ ಮಾಡಿದರೆ ಇಷ್ಟು ಕೊಡಬೇಕೆಂದು ನೋಟೀಸ್ ಕಳುಹಿಸಬೇಕು. ನಾವು ಸಿವಿಲ್ ಕೋಡ್ ಪ್ರಕಾರ ಪ್ರೊಸೀಜರನ್ನು ಅನುಸರಿಸಿ ನೋಟೀಸ್ ಕೊಡಬೇಕು. ಆತನು ಮನೆಯಲ್ಲಿ ಇರುತ್ತಾನೋ ಇಲ್ಲವೋ; ಮನೆ ಬಾಗಿಲು ಹಾಕಿರಬಹುದು. ಅವನಿಗೆ ನೋಟೀಸ್ ಸಿಕ್ಕುತ್ತದೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಕಡ್ಡಾಯವಾಗಿ ಇನ್ನು ಮುಂದೆ ರೆಜಿಸ್ಟರ್ಡ್ ನೋಟೀಸ್ ಮೂಲಕವೇ ನೋಟೀಸ್ ಕೊಡಿ.

ಶ್ರೀ ಟಿ. ಮರಿಯಪ್ಪ.—ರಿಜಿಸ್ಟರ್ಡ್ ಪೋಸ್ಟ್ ಮೂಲಕ ನೋಟೀಸ್ ಕೊಡುತ್ತೇವೆ.

ಶ್ರೀ ವೈ. ವೀರಪ್ಪ.—ರಿಜಿಸ್ಟರ್ಡ್ ಪೋಸ್ಟ್‌ಮೂಲಕ ನೋಟೀಸ್ ಕಳುಹಿಸಿದರೆ ನ್ಯಾಯ ದೃಷ್ಟಿಯಿಂದ ಅನುಕೂಲವಾಗುತ್ತದೆಂದು ಕಾಣುತ್ತದೆ.

ಒಟ್ಟಿನಲ್ಲಿ ಈ ಬಿಲ್ಲು ಪರಿಶೀಲನಾ ಸಮಿತಿಯಲ್ಲಿ ಪರಿಶೀಲಿಸಿ ಬಂದಮೇಲೆ ಅಲ್ಲಿ ಇಲ್ಲಿ ರೂಪಾಂತರ ಹೊಂದಿದೆಯೇ ಹೊರತು ಜನಸಾಮಾನ್ಯರಿಗೆ ಅನುಕೂಲವಾಗಿಲ್ಲ. ಏಕೆಂದರೆ ಮೂಲತತ್ವ ಒಪ್ಪಿಕೊಳ್ಳುತ್ತೀರಿ. ಎಷ್ಟು ಜನ ಇವತ್ತಿನ ದಿವಸ ಐದುನೂರು ಪಲ್ಲ, ಸಾವಿರ ಪಲ್ಲ ಧಾನ್ಯ ಬೆಳೆಯುತ್ತಾರೆ, ಯಾವ ರೇಟ್‌ನಲ್ಲಿ ಕೊಡುತ್ತಾರೆ ಎಂಬುದನ್ನು ನೋಡಿ. ಒಂದು ತತ್ವ ಅನುಸರಿಸಿಕೊಂಡು ಹೊರಟಮೇಲೆ ಭೇದಭಾವನೆ ಮಾಡುವುದು ಸರಿಯಲ್ಲ. ಚುನಾವಣಾ ಕಾಲದಲ್ಲಿ ತಮ್ಮ ಪ್ರಣಾಳಿಕೆಯ ಮೂಲಕ ತಾವು ಹೇಳುವುದೇ ಒಂದು, ಕಾರ್ಯತಃ ಮಾಡುವುದೇ ಒಂದು. ಹಣಕಾಸಿನಮಂತ್ರಿಗಳ ಕಾನ್ಸ್ಟಿಟ್ಯೂಯನ್ಸಿಯಲ್ಲಿ ಇವತ್ತು ಹೋಗೋಣ. ಈ ರೀತಿ ಮಾಡಿದ್ದೇವೆ ಎಂದು ತಾವು ಹೇಳಿ ನೋಡಿ ನಿಮಗೆ ಖಂಡಿತವಾಗಿಯೂ ಓಟು ಬರುವುದಿಲ್ಲ. ಅದು ಬೇರೆ ವಿಚಾರ. ಒಟ್ಟಿನಲ್ಲಿ ಪ್ರತಿಯೊಬ್ಬರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ನಮ್ಮ ಮಾನ್ಯ ಮಿತ್ರರು ತಿದ್ದುಪಡಿ ಸೂಚನೆಮಾಡಿರುವ ಹಾಗೆ ಆಲೂಗಡ್ಡೆ, ಈರುಳ್ಳಿ ಇವೆಲ್ಲಾ ಪ್ರತಿನಿತ್ಯವೂ ಬಳಸತಕ್ಕ ಅತ್ಯವಶ್ಯಕವಾದ ಪದಾರ್ಥಗಳು. ಯಾರೂ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವೇ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ. ಕಾಫೀ, ಟೀ ಇದರಲ್ಲಿ ಒಂದು ಆರ್ಗನೈಸ್ಡ್ ವ್ಯವಸ್ಥೆ ಮಾಡಿದ್ದೀರಿ. ಕಿತ್ತಲೆ ಹಣ್ಣು, ಏಲಕ್ಕಿ, ಮೆಣಸು ಇಂಥ ವಸ್ತುಗಳಿಗೆ ಒಂದು ವ್ಯವಸ್ಥೆ ಮಾಡಿಲ್ಲ. ಸುಗ್ಗಿಕಾಲದಲ್ಲಿ ಉದಾಹರಣೆಗೆ ಕಿತ್ತಲೆಹಣ್ಣು ತೆಗೆದುಕೊಂಡರೆ ತೋಟದಿಂದ ರಾಸಿ ರಾಸಿಯಾಗಿ ಕಿತ್ತಲೆಹಣ್ಣನ್ನು ಸಂತೆಗೆ ಮಾರಲು ತೆಗೆದುಕೊಂಡು ಬರುತ್ತಾರೆ. ಅಲ್ಲಿ ಆರ್ಗನೈಸ್ಡ್ ಮಾರ್ಕೆಟ್ ಇಲ್ಲ. ಒಂದು ಗಾಡಿ ಹಣ್ಣನ್ನು 2 ರೂಪಾಯಿ, 3 ರೂಪಾಯಿಗೆ ಕೊಟ್ಟು ಬಿಡುತ್ತಾರೆ. ಈ ರೀತಿ ಒಂದು ವ್ಯವಸ್ಥೆ ಇಲ್ಲದೇ ಇರುವುದರಿಂದ ಕಿತ್ತಲೆಹಣ್ಣು, ಏಲಕ್ಕಿ, ಮೆಣಸು ಈ ಬೆಳೆಗಳಿಗೂ ಕೂಡ

(ಶ್ರೀ ವೈ. ವೀರಪ್ಪ)

ವಿನಾಯಿತಿ ಕೊಡಬೇಕು. ಏನೋ ಒಂದು ಭಾವನೆಯ ಮೇಲೆ ಲಕ್ಷಾಂತರ ರೂಪಾಯಿ ಸಂಪಾದನೆ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೀರಿ. ಅದು ಸರಿಯಲ್ಲ, ಉತ್ತೇಜನ ಕೊಡೋಣ ಎಂಬ ದೃಷ್ಟಿಯಿಂದ ಅವರಿಗೂ ವಿನಾಯಿತಿ ಕೊಡಲೇ ಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸ್ವಲ್ಪ ಕಾಲಾವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಎಚ್. ಎಂ. ಚನ್ನಬಸಪ್ಪ (ಕೃಷ್ಣರಾಜನಗರ).—ಸ್ವಾಮಿ, ನಾನು ಸೆಲೆಕ್ಟ್ ಸಮಿತಿಯ ಸದಸ್ಯ. ಮಾತನಾಡಬೇಕಾದಂಥ ಪ್ರಮೇಯ ಇರಲಿಲ್ಲ. ಆದಾಗ್ಯೂ ಈ ಸಭೆಯಲ್ಲಿ ಮಾತನಾಡುವಾಗ ಮಾನ್ಯ ಸದಸ್ಯರು ಕೆಲವರು ತಪ್ಪು ಅಭಿಪ್ರಾಯಗಳನ್ನು ಮನಸ್ಸಿನಲ್ಲಿ ಮಾಡಿಕೊಂಡು ಅದರ ಮೇಲೆ ವಾದಗಳನ್ನು ಮಾಡುವುದಕ್ಕೆ ಹೊರಟಿದ್ದಾರೆ. ಆದ್ದರಿಂದ ಸರಿಯಾದ ಅಭಿಪ್ರಾಯಗಳನ್ನು ಸಭೆಯ ಮುಂದೆ ಇಡದಿದ್ದ ಪಕ್ಷದಲ್ಲಿ ಕರ್ತವ್ಯಲೋಪವಾಗುತ್ತದೆ ಎಂಬ ದೃಷ್ಟಿಯಿಂದ ನಾನು ನಾಲ್ಕಾರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂದು ನಿಂತಿದ್ದೇನೆ. ಮೊದಲನೆಯದಾಗಿ ಆಹಾರ ವಸ್ತುಗಳಮೇಲೆ ಏಕೆ ಹಾಕಲಿಲ್ಲ; ಸಾವಿರಾರು ಪಲ್ಲ ಬತ್ತ, ರಾಗಿಯನ್ನು ಬೆಳೆದು ಮಾರತಕ್ಕ ಜನಗಳನ್ನು ಕೈಬಿಟ್ಟಿದ್ದೀರಿ ಮತ್ತು ದೊಡ್ಡ ದೊಡ್ಡವರಿಗೆ ತುಂಬಾ ಅವಕಾಶ ಕಲ್ಪಿಸಿ, ಸಣ್ಣಪುಟ್ಟವರನ್ನು ತೊಂದರೆಗೆ ಈಡುಮಾಡಿ, ಸಮತಾವಾದ ಸಮಾಜ ರಚನೆಯ ತತ್ವಕ್ಕೆ ವಿರೋಧವಾಗಿ ನಡೆಯುತ್ತಾ ಇದ್ದೀರಿ ಎಂಬ ಬಹಳ ಮುಖ್ಯವಾದ ಆಪಾದನೆಯನ್ನು ಮಾನ್ಯ ಸದಸ್ಯರು ಎತ್ತಿದರು. ವ್ಯವಸಾಯದ ಎಲ್ಲ ಬೆಳೆಗಳನ್ನು ತೆಗೆದುಕೊಂಡರೆ ಅದು ಲಾಭದಾಯಕವಾಗಿದೆಯೇ ಎಂಬ ಮೂಲ ಪ್ರಶ್ನೆ ಬರುತ್ತದೆ. ಈ ವ್ಯವಸಾಯ ವ್ಯವಸ್ಥಿತವಾಗಿ ಲಾಭದಾಯಕವಾಗಿಲ್ಲ ಎನ್ನುವುದು ಸರ್ವೇ ಸಾಧಾರಣವಾಗಿ ನಮ್ಮ ಜನಗಳಲ್ಲಿ ಮೂಡಿದೆ. ಅದಕ್ಕೆ ಕಾರಣ ವ್ಯವಸಾಯದಲ್ಲಿ ತಗಲತಕ್ಕ ಖರ್ಚು ಏನಿದೆ, ದನಕರುಗಳಿಗೆ ಉಪಯೋಗಿಸತಕ್ಕ ಹಗ್ಗದಿಂದ ಹಿಡಿದು, ತನ್ನ ಹೆಂಡತಿ, ಮಕ್ಕಳು ಉಳುಮೆ ಮಾಡುವುದಕ್ಕೆ ಕೂಲಿ ಹಾಕಿ, ಎಲ್ಲ ಖರ್ಚುಗಳ ವ್ಯವಹಾರ ಮಾಡಿದರೆ ಆಗ್ಯೆ ನಮಗೆ ಗೊತ್ತಾಗುತ್ತದೆ ವ್ಯವಸಾಯ ಲಾಭದಾಯಕವಾಗಿಲ್ಲ ಎಂಬದು. ಕೇಂದ್ರ ಸರ್ಕಾರದವರಾಗಲಿ, ಅಥವಾ ಪ್ರಾಂತೀಯ ಸರ್ಕಾರದವರಾಗಲಿ, ಆಯಾ ಪ್ರಾಂತ್ಯಕ್ಕೆ ಒಂದು ಸ್ಟ್ಯಾಂಡರ್ಡ್ ಎಕ್ಸ್‌ಪೆಂಡಿಚರ್ ಎಷ್ಟಾಗುತ್ತದೆ ಎನ್ನತಕ್ಕ ಒಂದು ಲೆಕ್ಕಾಚಾರವನ್ನು ಹಾಕುವ ಕೆಲಸಕ್ಕೆ ಇವತ್ತಿನವರೆಗೂ ತೊಡಗಿಲ್ಲ. ಒಟ್ಟಿನಲ್ಲಿ ರೈತ ತಾನು ಬೆಳೆದ ಆಹಾರ ಪದಾರ್ಥವನ್ನು ತನ್ನ ಮನೆ ಬಾಗಿಲಿಗೆ ತಂದು ಹಾಕಿದಾಗ ಆತನ ಮನಸ್ಸಿನಲ್ಲಿ ಇದೆಲ್ಲವೂ ಫಾಯಿದೆ ಆಗಿರುವುದೇ ಎನ್ನುವ ಭಾವನೆ ಇರುತ್ತದೆ. ಆತನು ಏನು ದುಡಿಮೆ ಮಾಡಿದ, ಎಷ್ಟು ದಿವಸ ಕೆಲಸ ಮಾಡಿದ, ಎಷ್ಟು ದುಡ್ಡು ಖರ್ಚುಮಾಡಿದ, ಅದಕ್ಕೆ ಎಷ್ಟು ತ್ಯಾಗ ಮಾಡಿದ್ದಾನೆ ಎಂಬುದೆಲ್ಲವನ್ನೂ ಅವನು ಮರೆತುಬಿಡುತ್ತಾನೆ. ಹೋದ ವರ್ಷ 50 ಪಲ್ಲ ಬಂತು ಈ ವರ್ಷವೂ 50 ಪಲ್ಲ ಬಂದಿದೆ. ಎಲ್ಲವೂ ಲಾಭವೇ ಎನ್ನುವ ಭಾವನೆ ಅವನದು. ಅದನ್ನೇ ನಂಬಿಕೊಂಡು ಇವರೂ ಕೂಡ ಅದೆಲ್ಲವೂ ಲಾಭ ಎಂದು ಭಾವನೆ ಮಾಡಿಕೊಂಡು ವಾದಮಾಡುತ್ತಾ ಇದ್ದಾರೆ ತಮಗೆ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ಚೆನ್ನಾಗಿ ಗೊತ್ತಾಗುತ್ತದೆ. ಸಾಮಾನ್ಯವಾಗಿ ಸಾವಿರಾರು ಪಲ್ಲ ಬತ್ತ ಬೆಳೆಯುತಕ್ಕವರು ಇರುವುದು ಕೃಷ್ಣರಾಜನಗರ, ನಂಜನಗೂಡು, ಟೀ-ನರಸೀಪುರ, ಮಂಡ್ಯ, ಮದ್ದೂರು ಇಂಥ ಪ್ರದೇಶಗಳಲ್ಲಿ ತಾನೆ ಇರಬೇಕು? ಇಲ್ಲಿ ಅಂಕಿಅಂಶಗಳನ್ನು ತೆಗೆದುಕೊಂಡರೆ absentee landlords ಏನು ಇದ್ದಾರೆ ಅವರಿಗೆ ಮಾತ್ರ ಯಾವ ಖರ್ಚೂ ಇಲ್ಲದೆ ಬತ್ತ ಬರುತ್ತದೆ. ಖುದ್ದು ವ್ಯವಸಾಯ ಮಾಡತಕ್ಕ ಜನ ಏನಿದ್ದಾರೆ, ಅವರು ಆಹಾರ ದವಸಗಳನ್ನು ಬೆಳೆದ ಪಕ್ಷದಲ್ಲಿ ಅವರಿಗೆ ವಾಸ್ತವವಾಗಿ ಫಾಯಿದೆ ಆಗುವುದಿಲ್ಲ ಎನ್ನುವುದನ್ನು ಅಂಕಿಅಂಶಗಳ ಮೂಲಕ ತೋರಿಸಲಿಕ್ಕೆ ಸಿದ್ಧವಾಗಿದ್ದೇನೆ. Absentee landlords ಹೆಚ್ಚಾಗಿದ್ದಾರೆ, ಬಹುಮಂದಿ ಸಾವಿರಾರು ಪಲ್ಲ ಬೆಳೆಯುತಕ್ಕವರು ಇದ್ದಾರೆ, ಅವರನ್ನು ಬಿಟ್ಟಿದ್ದೀರಿ ಎಂದು ನೀವು ಮಾಡತಕ್ಕ ಆಪಾದನೆ. ತಮಗೆ ಹೇಳುವುದಾದರೆ ಮಂಡ್ಯ ಒಂದು ತಾಲ್ಲೂಕು ತೆಗೆದುಕೊಂಡರೆ 50 ಎಕರೆ ಮೇಲೆ ಇರತಕ್ಕವರು ಎರಡು ಜನ. ಆ ಎರಡು ಜನರೂ ತಾವೇ ಸ್ವತಃ ವ್ಯವಸಾಯ ಮಾಡುತ್ತಾ ಇದ್ದಾರೆ. ಶ್ರೀರಂಗಪಟ್ಟಣ ತೆಗೆದುಕೊಂಡರೆ ಅಲ್ಲಿ 15 ಸಾವಿರ ಜನ ಹಿಡುವಳಿದಾರರು ಇದ್ದಾರೆ. ಅವರಲ್ಲಿ ಇಬ್ಬರು ಮಾತ್ರ 50 ಎಕರೆಮೇಲೆ ಇರತಕ್ಕವರು. ಮದ್ದೂರಿನಲ್ಲಿ 10 ಸಾವಿರ ಜನ ಹಿಡುವಳಿದಾರರು; ಅವರಲ್ಲಿ 50 ಎಕರೆ ಮೇಲೆ ಇರತಕ್ಕವರು 13 ಜನ.

ಶ್ರೀ ವೈ. ವೀರಪ್ಪ.—ಅಂತಹವರ ಮೇಲೂ ಹಾಕಿ ಎಂದು ಹೇಳುತ್ತಾ ಇದ್ದೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ಒಂದು ಬಿಲ್ಲನ್ನು ಮಾಡಿದ್ದೇವೆಯೇ ವಿನಾ ಬೇರೆಯಲ್ಲ. ಸುಮ್ಮನೆ ಅಂಕಿಅಂಶದ ಆಧಾರವಿಲ್ಲದೆ ತೋಚಿದ ರೀತಿಯಲ್ಲಿ ಮಾಡಿದ್ದಾರೆ ಎಂಬ ಅಭಿಪ್ರಾಯ ತಮ್ಮಲ್ಲಿದ್ದರೆ ಅಂಕಿಅಂಶದ ಆಧಾರದಮೇಲೆ ಮಾಡಿದ್ದೇವೆ ಎಂದು ತಮ್ಮ ಮುಂದೆ ಹೇಳಿದನೇ ಹೊರತು ಮತ್ತೆ ಬೇರೆ ಅಲ್ಲ. ಆದ್ದರಿಂದ ಸಾವಿರಾರು ಪಲ್ಲ ಬೆಳೆಯು ತಕ್ಕ ಜನ ವಾಸ್ತವವಾಗಿ ಸಾವಿರಾರು ಪಲ್ಲ ಬೆಳೆದರೆ ಅದಕ್ಕೆ ತಕ್ಕಂತೆ ಖರ್ಚೂ ಇರುತ್ತದೆ. ಆ ಖರ್ಚನ್ನು ತೆಗೆದಪಕ್ಷದಲ್ಲಿ ಆಹಾರ ದವಸಧಾನ್ಯಗಳು, ಅಕ್ಕಿ, ರಾಗಿ ಬೆಳೆಗಳು ಲಾಭದಾಯಕವಾಗಿಲ್ಲ ಎನ್ನುವುದು ಒಂದು ಮೂಲ ಪ್ರಶ್ನೆ. ಎರಡನೆಯದು ಈಗ ಹಣವನ್ನು ತರತಕ್ಕ ಬೆಳೆಗಳ ವಿಷಯದಲ್ಲಿ ಅವು ಕೊಂಚಮಟ್ಟಿಗೆ ಲಾಭದಾಯಕವಾಗಿವೆ ಎನ್ನುವ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿ ನಮ್ಮ ಉದ್ದೇಶವಾದರೂ ಏನು ಎಂದರೆ ದೇಶದಲ್ಲಿ ವ್ಯವಸಾಯ ಮಾಡತಕ್ಕ ಬಹುಭಾಗದ ಜನರೇನಿದ್ದಾರೋ ಅವರಿಗೆ ಯಾವ ವಿಧವಾದ ಕಿರುಕುಳವೂ ಬರಬಾರದು, ಕೇವಲ ಹಣವನ್ನು ಸಂಪಾದನೆ ಮಾಡತಕ್ಕ ಉದ್ದೇಶದಿಂದಲೇ ಲಾಭದಾಯಕವಾಗಿರತಕ್ಕ ಬೆಳೆಗಳನ್ನು ಯಾರು ಬೆಳೆಯುತ್ತಾರೆಯೋ ಅವರಿಗೆ ಇದನ್ನು ಅನ್ವಯಿಸಬೇಕು ಎನ್ನುವುದು ಇದರ ತತ್ವ, ಮೂಲ ಪ್ರಶ್ನೆ.

12-30 P.M.

ಶ್ರೀ ಟಿ. ತಾರೇಗೌಡ (ಸಿರಾ).—ಭತ್ತ, ರಾಗಿ ಬೆಳೆದು ಹಣ ಸಂಪಾದನೆ ಮಾಡುತ್ತಾ ಇಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭತ್ತ, ರಾಗಿ, ಇವುಗಳಿಂದಲೂ ಹಣ ಬರುತ್ತದೆ. ಅದಕ್ಕೆ ಎಷ್ಟು ಖರ್ಚು ತಗಲುತ್ತದೆ, ಆದರಿಂದ ಫಾಯಿದೆಯಾಗುತ್ತದೆಯೇ ಎನ್ನುವುದನ್ನು ಲೆಕ್ಕಾಚಾರ ಹಾಕಿದರೆ ಗೊತ್ತಾಗುತ್ತದೆ. ಆ ಪ್ರಶ್ನೆಯನ್ನು ಅಲ್ಲಿಗೆ ಬಿಡುತ್ತೇನೆ.

ಇನ್ನು ಹಣವನ್ನು ತರತಕ್ಕ ಬೆಳೆಗಳೇನಿವೆ, Commercial crops ಇವುಗಳಲ್ಲಿ ಕೆಲವರಿಗೆ ಪ್ರಯೋಜನವಾಗುತ್ತದೆ. ಅಂಥವರು ದೇಶಕ್ಕೆ ಹಣವನ್ನು ಕೊಡತಕ್ಕದ್ದು ನ್ಯಾಯ. ಹೀಗೆ ಮಾಡುವಾಗ ಅನೇಕ ಜನ ಸಣ್ಣಪುಟ್ಟ ರೈತರು ಇವರೆಲ್ಲರೂ ಲೆಕ್ಕ ಇಡಬೇಕಾಗಿ ಬರುತ್ತದೆ. ಈ ಮಸೂದೆಯ ಮುಖ್ಯ ತತ್ವವೇನೆಂದರೆ ಒಂದು ವೇಳೆ ಸಾವಿರಾರು ಜನಗಳಲ್ಲಿ ಒಬ್ಬಿಬ್ಬರು ಹಣವನ್ನು ಕೊಡಬೇಕಾಗಿರುವವರು ತಪ್ಪಿಸಿಕೊಂಡರೂ ಚಿಂತೆ ಇಲ್ಲ. ಯಾವನು ಹಣವನ್ನು ಇನ್‌ಕಂಟ್ಯಾಕ್ಸ್ ಕಾನೂನು ಪ್ರಕಾರ ಕೊಡಬೇಕಾಗಿ ಬರುವುದಿಲ್ಲವೋ, ಯಾವನಿಗೆ ಉತ್ಪತ್ತಿ ಇಲ್ಲವೋ ಅಂಥವನಿಂದ ತೆರಿಗೆಯನ್ನು ವಸೂಲು ಮಾಡತಕ್ಕದ್ದು ಧರ್ಮವಲ್ಲ. ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳತಕ್ಕ ಜನ ಬಹಳ ಕಡಮೆ. ನಾಳೆ ದಿವಸ ಎಲ್ಲ ದವಸ ಧಾನ್ಯಗಳಿಗೂ ತೆರಿಗೆಯನ್ನು ಹಾಕಿಬಿಟ್ಟು ಸಣ್ಣಪುಟ್ಟ ರೈತರಿಗೆ exemption limit ಕೊಡೋಣ ಎಂದು ಹೇಳಬಹುದು. ನಾವು ರಾಗಿ, ಭತ್ತ ಮತ್ತು ಇತರ ನಾನಾ ಬೆಳೆಗಳನ್ನು ಬೆಳೆದು, ಆದಾಯ ಎಲ್ಲದರಿಂದಲೂ ಬಂದು, ಉತ್ಪನ್ನ ಹೆಚ್ಚಿ ಸಣ್ಣಪುಟ್ಟ ರೈತರಿಗೂ ನೋಟೀಸ್ ಕೊಡತಕ್ಕ ಸಂದರ್ಭ ಬಂದರೆ ಆಗ ಇವರಿಗೆ ಬಹಳ ಕಷ್ಟವಾಗುತ್ತದೆ. ಇದನ್ನು ನಮ್ಮ ದೇಶದಲ್ಲಿ ಪ್ರಾರಂಭ ಮಾಡಿರುತ್ತೇವೆ. ಇದರ ಅನುಭವವನ್ನು ತೆಗೆದುಕೊಂಡು ಸ್ವಲ್ಪ ಸ್ವಲ್ಪವಾಗಿ ಬಿಗಿ ಮಾಡಿ ದೇಶಕ್ಕೆ ಬರಬೇಕಾದಂಥ ಹಣ ಲೋಪವಾಗದಂತೆ ವ್ಯವಸ್ಥೆ ಮಾಡಬೇಕು ಎನ್ನತಕ್ಕದ್ದೇ ಈ ಮಸೂದೆಯ ಮುಖ್ಯಾಂಶ. ಶ್ರೀ ಕೆಂಚಪ್ಪನವರು ಒಂದು ವಾದ ಮಾಡಿದರು, ಹೊಗೆಸೊಪ್ಪು ಬೆಳೆಗೆ ಏಕೆ ಆರು ಎಕರೆ ಮಾಡಿದ್ದಾರೆ, 15 ಎಕರೆ ಮಾಡಿದ್ದಾರೆ ಎಂದು. ಪಿ.ಎಸ್.ಪಿ. ಲೀಡರ್ ಆದ ಶ್ರೀ ಕೆಂಚಪ್ಪನವರು ಇದನ್ನು 50 ಎಕರೆ ಮಾಡಬೇಕು ಎಂದು. . . .

ಶ್ರೀ ಕೆ. ಕೆಂಚಪ್ಪ.—ನಾನು ಎಲ್ಲಿ ಸ್ವಾಮಿ ವಾದ ಮಾಡಿರುವುದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಪರಸ್ಪರ ಮಾತನಾಡಿದಾಗ ತಾವು ಹೇಳಿರಬಹುದು.

ಮೈಸೂರು ಸಂಸ್ಥಾನದಲ್ಲಿ ಒಂದು ಎಕರೆಗೆ ಎಷ್ಟು ಹೊಗೆಸೊಪ್ಪು ಬೆಳೆಯುತ್ತದೆ ಎನ್ನುವುದರ ಬಗ್ಗೆ statistics 1950-51 ರಿಂದ 1955-56ರ ವರೆಗೂ ಐದು ವರ್ಷಗಳ ಸರಾಸರಿ ಲೆಕ್ಕವಿದೆ. ಇದರಲ್ಲಿ ಒಂದು ಪೌಂಡೂ ಕೂಡ ಹೆಚ್ಚುಕಡಮೆಯಾಗುವ ಕಾರಣವಿಲ್ಲ. ಎಕ್ಸೈಸ್ ಇಲಾಖೆಯಲ್ಲಿ ಇದರ ಬಗ್ಗೆ ಲೆಕ್ಕಗಳಿವೆ. ನಾವು ಬೆಳೆಯುವಂಥ ಪ್ರತಿಯೊಂದು ಪೌಂಡಿಗೂ ಕೂಡ ಲೆಕ್ಕವಿಡುತ್ತಾರೆ. ಸರಾಸರಿ 11·8 ಮಣ ಒಂದು ಎಕರೆಗೆ ಬರುವ ಉತ್ಪತ್ತಿ. ಮಣವೆಂದರೆ 28 ಪೌಂಡುಗಳ ತೂಕದ ಒಂದು ಮಣ. ಈ ಹನ್ನೆರಡು ಮಣಕ್ಕೆ ಉತ್ಪತ್ತಿ ಏನಾಗುತ್ತದೆಂದರೆ ಮಣ ಒಂದಕ್ಕೆ 15 ರೂಪಾಯಿನಿಂದ ಹಿಡಿದು 25 ರೂಪಾಯಿಗಳವರೆಗೂ ಬೆಲೆ ಇರುತ್ತದೆ. ಸರಾಸರಿ ಬೆಲೆ 20 ರೂಪಾಯಿ ಎಂದು ಇಟ್ಟುಕೊಂಡರೆ 240 ರೂಪಾಯಿ ಆಗುತ್ತದೆ. ಇದರಲ್ಲಿ ಮೂರನೆ ಒಂದು ಭಾಗವನ್ನು ಖರ್ಚುಗಳಿಗೆ ಕಳೆದರೆ, 160 ರೂಪಾಯಿ ನಿವ್ವಳ ನಫೆ ಬರುತ್ತದೆ. ಈ ಪ್ರಕಾರ 3,500 ರೂಪಾಯಿಗಳ ವಿನಾಯಿತಿಗೆ ಎಷ್ಟು ಎಕರೆಯಾಗುತ್ತದೆಂದರೆ, 20—22 ಎಕರೆಯಾಗುತ್ತದೆ. ನ್ಯಾಯವಾಗಿ ಇಷ್ಟು ಎಕರೆಯನ್ನು ವಿನಾಯಿತಿ ಮಾಡಬೇಕಾದಂಥ ಪರಿಸ್ಥಿತಿ ಇದೆ ಲೆಕ್ಕದ ಪ್ರಕಾರ. ಆದುದರಿಂದ ತಾವು ಹೇಳತಕ್ಕದ್ದು ಯಾವುದೂ ಲೆಕ್ಕವೇ ಇಲ್ಲದೆ, ಆಧಾರವಿಲ್ಲದೆ ಮಾಡಿದ್ದಾರೆಂಬ ಅಪಾದನೆ ಶುದ್ಧ ತಪ್ಪು.

ಶ್ರೀ ವೈ. ವೀರಪ್ಪ.—1,500 ಪಲ್ಲ, 2,000 ಪಲ್ಲ ಭತ್ತ ಬೆಳೆಯುವವರಲ್ಲಿ ಲೆಕ್ಕವಿದೆಯೇ? ದಯವಿಟ್ಟು ತೋರಿಸಿ convince ಮಾಡುತ್ತೀರಾ?

Sri H. M. CHANNABASAPPA.—Nobody keeps accounts. ಹೊಗೆಸೊಪ್ಪಿನ ಲೆಕ್ಕ ಕರಾರುವಾಕ್ಕಾಗಿ ಸಿಕ್ಕುತ್ತದೆ.

Sri G. N. PUTTANNA (Tumkur).—A point of information. ಈಗ ಮಾನ್ಯ ಸದಸ್ಯರು ಅನೇಕ ಅಂಕಿ ಅಂಶಗಳನ್ನು ಕೊಟ್ಟರು. ಅದು ಎಲ್ಲಿದೆ ಎಂಬುದು ನಮಗೆ ಗೊತ್ತಿಲ್ಲ, ಅದನ್ನು ತಿಳಿಸಬೇಕು.

Sri H. M. CHANNABASAPPA.—I invite the Hon'ble Member's attention to the Government of India publication. ಕೇಂದ್ರ ಸರ್ಕಾರದಲ್ಲಿ ಹೊಗೆಸೊಪ್ಪಿನ ವ್ಯವಹಾರವನ್ನು ನಡೆಸುವುದಕ್ಕೋಸ್ಕರ ಒಂದು statutory ಕಮಿಟಿ ಇದೆ. ಆ ಕಮಿಟಿಯವರು ಇಡೀ ನಮ್ಮ ಭರತ ಖಂಡದಲ್ಲಿರತಕ್ಕ ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯತಕ್ಕ ಹೊಗೆಸೊಪ್ಪಿನ ಮತ್ತು ಅದಕ್ಕೆ ಸಂಬಂಧಪಟ್ಟಂಥ ಎಲ್ಲ ಅಂಕಿ ಅಂಶಗಳನ್ನು ಇಟ್ಟುಕೊಂಡಿರುವುದಲ್ಲದೆ, ಅದರ ವ್ಯವಹಾರವನ್ನು ಸರಿಯಾದ ರೀತಿಯಲ್ಲಿ ರೂಪಿಸುವುದಕ್ಕೆ ಈಗ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಅವರ ರಿಪೋರ್ಟಿನಲ್ಲಿ ಈ ಅಂಕಿಅಂಶಗಳಿವೆ. ಇವೊತ್ತು ಇದು ಬರುತ್ತದೆ ಎಂದು ತಿಳಿದಿದ್ದರೆ ತೆಗೆದುಕೊಂಡು ಬರುತ್ತಿದ್ದೆ. ಬೇಕಾದರೆ ಸಾಯಂಕಾಲ ಅವರಿಗೆ ಕೊಡುತ್ತೇನೆ. ಆದುದರಿಂದ 15 ಎಕರೆಯನ್ನು ಮಂಜೂರು ಮಾಡಿರತಕ್ಕದ್ದು ನ್ಯಾಯವಾದದ್ದು.

ಶ್ರೀ ತಾರೇಗೌಡರು ಕೇಳಿದರು Virginia tobacco ಯಾವ ಲೆಕ್ಕದ ಮೇಲೆ ಹಾಕಿದಿರಿ ಎಂದು. ಶ್ರೀ ಮುಕ್ಕಣ್ಣಪ್ಪನವರು ನಿಪ್ಪಾಣಿ, ಸಾಂಗ್ಲಿ ಈ ಭಾಗದವರು ಹೊಗೆಸೊಪ್ಪಿನಿಂದ ಅಸಾಧ್ಯವಾಗಿ ಹಣ ಮಾಡುತ್ತಿದ್ದಾರೆ, ಅವರು ದೊಡ್ಡ ದೊಡ್ಡ ಬ್ಯಾಂಕುಗಳಲ್ಲಿ ಬೇಕಾದಷ್ಟು ಹಣವನ್ನಿಟ್ಟಿದ್ದಾರೆ ಎಂದು ಹೇಳಿದರು. ದೊಡ್ಡ ದೊಡ್ಡ ವರ್ತಕರು, ಈ ಹೊಗೆಸೊಪ್ಪಿನ ವ್ಯಾಪಾರ ಮಾಡತಕ್ಕವರು ಮತ್ತು ಸಣ್ಣಪುಟ್ಟ ವ್ಯಾಪಾರ ಮಾಡುತ್ತಿದ್ದವರು ಇವೊತ್ತು ಕುಬೇರರಾಗಿದ್ದಾರೆ. ಆದರೆ ಹೊಗೆಸೊಪ್ಪನ್ನು ಕಷ್ಟಪಟ್ಟು ಬೆಳೆಯುವವನು ಹಾಗೆಯೇ ಇದ್ದಾನೆ. ಇವರನ್ನು ನೋಡಿ, ಹೊಗೆಸೊಪ್ಪು ಬೆಳೆಯುವವರೂ ಚೆನ್ನಾಗಿ ದುಡ್ಡು ಮಾಡುತ್ತಿದ್ದಾರೆಂದು ತಿಳಿದುಕೊಂಡು ಇರಬಹುದು. ನಮ್ಮ ಮುಂದೆ ಈಗ ಇರುವುದು ಬೆಳೆಯತಕ್ಕವರ ಮೇಲೆ ವರಮಾನ ತೆರಿಗೆಯನ್ನು ಹಾಕುವ ಮಸೂದೆ. ಹೊಗೆಸೊಪ್ಪಿನಲ್ಲಿ ವ್ಯವಹಾರ ಮಾಡುವವರ ವಿಷಯ ಇದರಲ್ಲಿಲ್ಲ. ಇಂಡಿಯಾ ದೇಶದಲ್ಲಿ ಸರಾಸರಿ ಒಂದು ಎಕರೆಗೆ 10 ರಿಂದ 15 ಮಣದ ವರೆಗೆ ಬೆಳೆ ಬರುತ್ತದೆ ಎಂದು ನನಗೆ ಖಚಿತವಾಗಿ ಬಂದಿರತಕ್ಕ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಒಂದು ಮಣ ಹೊಗೆಸೊಪ್ಪಿಗೆ 50 ರಿಂದ 60 ರೂಪಾಯಿಗಳವರೆಗೂ ಬೆಲೆ ಇದೆ. ಉನ್ನತಮಟ್ಟದ ಬೆಳೆಗೆ 900 ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆಗೆ ಬರುತ್ತದೆ ಎಂದು ಇಟ್ಟುಕೊಂಡರೆ, ಎಕರೆಗೆ 300-400 ರೂಪಾಯಿಗಳವರೆಗೂ ಖರ್ಚನ್ನು ಕಳೆದರೆ ಒಂದು ಎಕರೆಗೆ 600 ರೂಪಾಯಿಗಳ ಉತ್ಪತ್ತಿ ಬರುತ್ತದೆ. ಆರು ಎಕರೆಗಳಿಗೆ 3,600 ರೂಪಾಯಿ ಆಗುತ್ತದೆ. ಈ ಪ್ರಕಾರವಾಗಿ ಆರು ಎಕರೆ ಎಂದು ನಿಗದಿಮಾಡಿದ್ದಾರೆ. ಹೊಗೆಸೊಪ್ಪು ಬೆಳೆಯುವ ಪ್ರಾಂತದಲ್ಲಿರತಕ್ಕ, ಹೊಗೆಸೊಪ್ಪಿನ ವ್ಯವಹಾರದಲ್ಲಿ ಮಾಹಿತಿಯನ್ನು ಪಡೆದಿರತಕ್ಕ ಇನ್ನೂ ಅನೇಕ ಸದಸ್ಯರನ್ನು ವಿಚಾರಮಾಡಿ ಇಷ್ಟು

((SIR H. M. CHANNABASAPPA)

ಸರಾಸರಿ ಬರುತ್ತದೆ ಎಂದು ಮನಸ್ಸಿಗೆ ಖಚಿತ ಮಾಡಿಕೊಂಡು ಆರು ಎಕರೆ ಎಂದು ನಿಗದಿ ಮಾಡಿದ್ದಾರೆ. ಮತ್ತೆ Virginia ಹೊಗೆಸೊಪ್ಪಿನ ವಿಷಯವನ್ನೆತ್ತಿದರು. Virginia ಹೊಗೆಸೊಪ್ಪು ಒಂದು ಎಕರೆಗೆ 5,000 ಪೌಂಡು ಉತ್ಪತ್ತಿಯಾಗುತ್ತದೆ ಎಂದರೆ 200 ಮಣ ಆಗುತ್ತದೆ. ಮಣ ಒಂದಕ್ಕೆ 1-2-0 ರೂಪಾಯಿನಿಂದ ಒಂದೂಕಾಲು ರೂಪಾಯಿಗಳವರೆಗೆ ಕೊಡುತ್ತಾರೆ. ಅಲ್ಲಿಗೆ ಸರಾಸರಿ 1-2-0 ರೂಪಾಯಿ ಎಂದಿಟ್ಟುಕೊಂಡರೆ 225 ರೂಪಾಯಿ ಉತ್ಪನ್ನ ಬರುತ್ತದೆ. 75 ರೂಪಾಯಿಗಳ ಖರ್ಚನ್ನು ಕಳೆದರೆ 150 ರೂಪಾಯಿಗಳ ನಿವ್ವಳ ನಫೆ ಬರುತ್ತದೆ. ನಾನು ಈ ವಿಷಯವನ್ನು ಮಾತನಾಡುವಾಗ ಅಂಕಿ ಅಂಶಗಳ ಆಧಾರದಿಂದ ಮಾತನಾಡುತ್ತಿದ್ದೇನೆಂದು ತಿಳಿದುಕೊಳ್ಳಬೇಕು. . . . .

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರಪುರ).—ಮಾನ್ಯ ಸದಸ್ಯರು ಒಂದು ಎಕರೆಗೆ 150 ರೂಪಾಯಿ ನಿವ್ವಳ ನಫೆ ಬರುತ್ತದೆಂದು ಹೇಳಿದರು. ಅಂದ ಮೇಲೆ ಆರು ಎಕರೆಗಳಿಗೆ 900 ರೂಪಾಯಿಗಳಾದವು.

Sri H. M. CHANNABASAPPA.—I am coming to that point. ಇದು ಹೊಗೆಸೊಪ್ಪಿನ ಹಸೀ ಮಾಲನ್ನು ಮಾರತಕ್ಕ ದರವಾಗಿದೆ. ಹೊಗೆಸೊಪ್ಪನ್ನು ಬೆಳೆದು, ಬಾರ್ನ್‌ನಲ್ಲಿ ಕ್ಯೂರ್ ಮಾಡಿ, ಗ್ರೇಡ್ ಮಾಡಿ ಟೊಬ್ಯಾಕೊ ಕಂಪೆನಿಗೆ ಮಾರುವವರ ಲಾಭ ನಷ್ಟದ ವಿಷಯ ಬೇರೆ. ನಾನು ಈಗ ಹೇಳುತ್ತಿರುವುದು ಹೊಗೆಸೊಪ್ಪನ್ನು ಬೆಳೆದು. . . . .

ಅಧ್ಯಕ್ಷರು.—ಈಗ ಹನ್ನೆರಡೂವರೆ ಗಂಟೆಗೆ ಸಭೆ ಏಳಬೇಕಾಗಿತ್ತು. ತಾವು ಹೇಳಬೇಕಾದ ವಿಷಯ ಜಾಸ್ತಿ ಇದ್ದರೆ ನಾನು ಅದಕ್ಕೆ ಅವಕಾಶ ಕೊಡುತ್ತೇನೆ, ನನ್ನ ಅಭ್ಯಂತರವಿಲ್ಲ. ಆದರೆ ಈಗ ಹೊತ್ತಾಗಿದೆ, ಈಗ ಏಳೋಣವೆ ಎಂಬುದು ನನ್ನ ಪ್ರಶ್ನೆ.

Sri H. M. CHANNABASAPPA.—I submit, Sir, that I have a few remarks to make in reply to the Hon'ble Members. My arguments are based on statistics. I would urge that the House may now rise and when it meets again in the afternoon, I will resume my speech.

Sri G. N. PUTTANNA.—We shall hear the Hon'ble Member now before we adjourn, Sir. We would then be able to reply to him in the afternoon.

ಅಧ್ಯಕ್ಷರು.—ನನ್ನ ಅಭ್ಯಂತರವಿಲ್ಲ. ಈಹೊತ್ತು ಈ ಮಸೂದೆಯ ಮೇಲಿನ ಚರ್ಚೆ ಮುಗಿಯಬೇಕಾಗಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಶ್ರೀ ಚನ್ನಬಸಪ್ಪನವರು ಮಾತನಾಡುವುದಿದ್ದರೆ ಈಗಲೇ ಮುಗಿಸಲಿ, ಇನ್ನು ಐದು ಅಥವಾ ಹತ್ತು ನಿಮಿಷಗಳಲ್ಲಿ.

Sri H. M. CHANNABASAPPA.—I will finish as early as possible. If the House has no objection, I will speak now for some time and be done with it. ನಾನು ಹೇಳುವುದು ವರ್ಜೀನಿಯ ಹೊಗೆಸೊಪ್ಪು ಹಸರು ಸೊಪ್ಪನ್ನು ಮಾರುವ ವಿಷಯಕ್ಕೆ ಸಂಬಂಧಪಟ್ಟದ್ದು. ಅದನ್ನು ಕ್ಯೂರ್ ಮಾಡಿದರೆ ಹೆಚ್ಚು ಲಾಭ ಸಿಕ್ಕುತ್ತದೆ, ಹೆಚ್ಚು ಕಡಮೆ ನಿಪ್ಪಾಣಿಗಿಂತ ಹೆಚ್ಚು ಲಾಭ ಬರುತ್ತದೆಂಬ ಅಭಿಪ್ರಾಯವನ್ನು ತಿಳಿಸಿದರು, ಇದರಿಂದ ಆರು ಎಕರೆಗಿಂತ ಕಡಮೆ ಮಾಡಬೇಕಾದ ಪ್ರಮೇಯ ಬಂತು ಎಂದು ಹೇಳಿದ್ದಾರೆ. ಯಾರು ಹಸರು ಸೊಪ್ಪನ್ನು ಮಾರುತ್ತಾರೋ ಅವರಿಗೆ ಲೆಕ್ಕ ಸಿಕ್ಕುತ್ತದೆ. ಏಕೆಂದರೆ ಇದನ್ನೆಲ್ಲಾ ಕಂಪೆನಿಗೆ ಕೊಡುತ್ತಾರೆ. ಎಷ್ಟು ಬೆಳೆದರು, ಎಷ್ಟು ಹಣ ಅವರಿಗೆ ಬಂತು ಎಂಬ ಲೆಕ್ಕ ಸಿಕ್ಕುವುದರಿಂದ ಅವರಿಂದ ತೆಗೆದುಕೊಳ್ಳಲಿ, ಇನ್ನು ಕ್ಯೂರ್‌ಮಾಡಿ ಮಾರಾಟ ಮಾಡುವವರಿಗೆ ಆರು ಎಕರೆ ಇದ್ದರೆ ಸಾಕೆಂದು ಅಂಕಿಅಂಶಗಳನ್ನು ನೋಡಿ ಈ ನಿರ್ಧಾರಕ್ಕೆ ಬಂದೆವು. ಇಲ್ಲಿಗೆ ಹೊಗೆಸೊಪ್ಪಿನ ಪ್ರಶ್ನೆಗಳೆಲ್ಲಕ್ಕೂ ಉತ್ತರ ಬಂದಿದೆ ಎಂದು ತಿಳಿದುಕೊಂಡಿದ್ದೇನೆ.

ಇನ್ನು ಬಾಕಿ ವಿಷಯಗಳಿಗೆ ಉತ್ತರ ಕೊಡುವುದು ಆವಶ್ಯಕವೆಂದು ತಿಳಿದುಕೊಂಡಿದ್ದೆ But many of the arguments do not merit any reply, because they are all made without any facts and figures. Therefore I would not attempt to take much time of this House. I therefore commend this Bill for the acceptance of the House.

The House adjourned at Forty-five Minutes past Twelve of the Clock and reassembled at Three of the Clock.

[MR. SPEAKER in the Chair.]

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರಿನ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲಿನ ಮೇಲೆ ಮಾತನಾಡುತ್ತಾ ಕೆಲವು ನ್ಯೂನತೆಗಳನ್ನು ಹೇಳಿ ಅದನ್ನು ಸರಿಮಾಡಿಕೊಳ್ಳಬೇಕೆಂದು ಸರ್ಕಾರದವರನ್ನು ಕೇಳಲು ನಾನು ನಿಂತಿದ್ದೇನೆ.

ಈಗ ನಮ್ಮ ಸ್ಥಿತಿ ಏನಾಗಿದೆಯೆಂದರೆ ಒಂದು ಸಾರಿ ಒಬ್ಬ ಕಳ್ಳ ಬಂದು ಒಂದು ಮನೆಯಲ್ಲಿ ಎಲ್ಲಾ ಸಾಮಾನುಗಳನ್ನೂ ದೋಚಿಕೊಂಡು ಹೋದನಂತೆ. ಆಗ ಸುತ್ತಲೂ ಇದ್ದವರೂ ಮತ್ತು ಆ ಮನೆಯವರೂ "ಅವನು ಹಾಳಾಗಲಿ ಸಂಪಾದಿಸಿದ್ದನ್ನೆಲ್ಲಾ ತೆಗೆದುಕೊಂಡು ಹೋದ" ಎಂದು ಶಾಪ ಹಾಕಿದರಂತೆ. ಕೆಲವು ದಿವಸಗಳನಂತರ ಅದೇ ಕಳ್ಳ ನೆರೆಮನೆಗೆ ಬಂದು ಆ ಮನೆಯ ಸಾಮಾನೆಲ್ಲಾ ದೋಚಿದ್ದೂ ಅಲ್ಲದೆ, ಕೆಲವರ ಪ್ರಾಣಹಾನಿಯನ್ನೂ ಮಾಡಿ ಹೋದನಂತೆ. ಅದೇ ನೆರೆಹೊರೆಯವರು "ಪುಣ್ಯಾತ್ಮ, ಮೊದಲು ಬಂದ ಕಳ್ಳನೇ ಧರ್ಮರಾಯ, ಸಾಮಾನು ಮಾತ್ರ ತೆಗೆದುಕೊಂಡು ಹೋದ, ಜನಗಳಿಗೆ ಅಪಾಯ ಮಾಡಲಿಲ್ಲ, ಈಗ ಬಂದವನು ರಾಕ್ಷಸ, ಇವನು ಸಿಕ್ಕಿದರೆ ಬೇಕಾದಷ್ಟು ಶಿಕ್ಷಿಸಬೇಕು" ಎಂದು ಹೇಳಿದರಂತೆ. ಹಾಗೆ ನಾವು ಅನ್ಯಾಯದಲ್ಲಿಯೇ ಒಂದಕ್ಕೊಂದು ಹೋಲಿಸಿ ಇದಕ್ಕಿಂತ ಅದು ವಾಸಿ ಎನ್ನುವ ಸ್ಥಿತಿಗೆ ಬಂದಿದ್ದೇವೆ.

ಶ್ರೀ ಟಿ. ಮರಿಯಪ್ಪ.—ಜಾಸ್ತಿ ತೆರಿಗೆಯೇನೂ ಮಾಡಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮೊದಲು 4 200 ರೂಪಾಯಿಗಳವರೆಗೂ ವಿನಾಯಿತಿ ಇದ್ದ ಲಿಮಿಟ್ಟನ್ನು ಈಗ ನೋಡಿದರೆ 3,500 ರೂಪಾಯಿಗಳಿಗೆ ಇಳಿಸಿದ್ದೀರಿ. ತೆರಿಗೆಯೇನೋ ವಿಧಿಸಬೇಕು. ವಿಧಿಸುತ್ತಿದ್ದೀರಿ. ಆದರೆ ಪ್ರಜೆಗಳಿಗೆ ವಿನಾಕಾರಣ ತೊಂದರೆ ಕೊಡಬಾರದು. ಉದಾಹರಣೆಗೆ ನಮ್ಮ ಕಡೆ ಒಂದು ವರ್ಷ ಮಳೆಯಾದರೆ ಇನ್ನು ಮೂರು ವರ್ಷಗಳ ತನಕ

ಮಳೆಯಾಗುವುದಿಲ್ಲ. ಮಳೆ ಸಕಾಲದಲ್ಲಿ ಆಗಲಿಲ್ಲ. ಬೆಳೆಯಾಗಲಿಲ್ಲ. ಆ ವರ್ಷದಲ್ಲಿ ದನಕರು, ಆಳುಗಳು ಮತ್ತು ಎಷ್ಟಾಬ್ಲಿಷ್‌ಮೆಂಟನ್ನೆಲ್ಲಾ ಮುಚ್ಚಿ ಮನೆ ಖಾಲಿ ಮಾಡಲಾಗುವುದಿಲ್ಲ, ನಮಗೆಷ್ಟು ತೊಂದರೆ ಯಾದರೂ ನಮ್ಮ ಎಸ್ಟಾಬ್ಲಿಷ್‌ಮೆಂಟನ್ನು ನಡೆಸಿ ಕೊಂಡು ಹೋಗಲೇಬೇಕಾಗುತ್ತದೆ

ಕಮರ್ಷಿಯಲ್ ಕ್ರಾಪಿನಿಂದ ನಮಗೇನು ಬರುತ್ತದೋ ಅದರಿಂದ ಖುಷ್ಕಿ ಜಮೀನುಗಳಲ್ಲಿ ಆದಾಯ ಬರಲಿ, ಬಾರದಿರಲಿ, ಇದರಿಂದ ಬಂದ ವರಮಾನ ಅದಕ್ಕೆ ಹಾಕಿಕೊಂಡು ಸಮತೂಕ ಮಾಡಿಕೊಂಡು, ಬೇಸಾಯ ಜರುಗಿಸಿಕೊಂಡು ಹೋಗುತ್ತಿರಬೇಕಾಗುತ್ತದೆ.

ಸರ್ಕಾರದವರು ಕಮರ್ಷಿಯಲ್ ಕ್ರಾಪನ್ನು ಬೆಳೆಯುವುದಕ್ಕೆ ಖರ್ಚು ಮಟ್ಟಿಗೆ ಕಳೆದು ಬಾಕಿ ವರಮಾನಕ್ಕೆ ಟ್ಯಾಕ್ಸ್ ಕೊಡಬೇಕೆಂದು ಹೇಳಿರುತ್ತಾರೆ. ಆದರೆ ಅದೇ ಖುಷ್ಕಿ ಬೆಳೆ ಇಟ್ಟು ಅದರಿಂದ ನಷ್ಟವಾದರೆ ಅದರ ನಷ್ಟ ಇದರಿಂದ ತೆಗೆಯಕೂಡದೆಂದು ಪ್ರತಿಬಂಧಕ ವಿದೆ. ನಾನು ಮೊದಲೇ ಹೇಳಿದಂತೆ ಇದರಿಂದ ಅದಕ್ಕೆ ಅದರಿಂದ ಇದಕ್ಕೆ ಖರ್ಚು ವೆಚ್ಚಗಳನ್ನು ಸರಿದೂಗಿಸಿ ಕೊಂಡು ಹೋಗುವವರಿಗೆ ಈ ಆಕ್ಟಿನಿಂದ ಎಷ್ಟು ತೊಂದರೆಯಾಗುತ್ತದೆಂದು ಆಡಳಿತ ಪಕ್ಷದವರು ಸ್ವಲ್ಪ ಯೋಚನೆ ಮಾಡಬೇಕು. ಅನೇಕ ಕಡೆ ನೂರಾರು ಎಕರೆ ಗದ್ದೆಯನ್ನು ಇಟ್ಟುಕೊಂಡು ಸಾವಿರಾರು ಪಲ್ಲ ಬತ್ತ ಬಂದರೂ ಫುಡ್ ಕ್ರಾಪ್ ಎಂದು ಅದಕ್ಕೆ ತೆರಿಗೆ ಇಲ್ಲ. ನನ್ನ ಸಹೋದರ ಸದಸ್ಯರಾದ ಮಾನ್ಯ ಶ್ರೀ ಚನ್ನಬಸಪ್ಪನವರು ನಾಲೆಯಲ್ಲಿ ಬೆಳೆಯುವ ಬತ್ತವೂ ಒಂದೇ, ಖುಷ್ಕಿ ಜೋಳ ಮತ್ತು ರಾಗಿ ಬೆಳೆಯೂ ಒಂದೇ, ಎಂದು ಹೇಳಿದರು. ಅದು ಹೇಗೆ ಎರಡೂ ಒಂದೇ ಆಗುವುದೋ ನನಗೆ ಅರ್ಥವಾಗುತ್ತಿಲ್ಲ. ಚಾನಲ್‌ನಿಂದ ನೀರು ತೆಗೆದುಕೊಳ್ಳುವವರಿಗೆ ಪೂರಾ ಬೆಳೆ ಆಗುವುದೂ, ಮಳೆ ನಂಬಿಕೊಂಡಿರುವವರು ಪೂರಾ ಕೆಟ್ಟಿರುವುದೂ, ಎಲ್ಲರಿಗೂ ತಿಳಿದ ವಿಷಯ. ಫುಡ್ ಕ್ರಾಪ್ ಆದಾಕ್ಷಣ ಯಾವುದು ತರೀ ಬೆಳೆ, ಯಾವುದು ಖುಷ್ಕಿ ಬೆಳೆ ಎನ್ನುವ ನಿರ್ಧಾರವನ್ನು ಸುಲಭವಾಗಿ ಮಾಡಬಹುದು ಎಂದು ನನ್ನ ಭಾವನೆ. ಆದರೆ ವ್ಯವಸಾಯ ವರಮಾನ ತೆರಿಗೆಯಿಂದ ಕಮರ್ಷಿಯಲ್ ಕ್ರಾಪ್ ಮತ್ತು ಖುಷ್ಕಿ ಬೆಳೆ—ಹೀಗೆ ಮಿಶ್ರ ಬೆಳೆ ಬೆಳೆಯುವವರಿಗೆ ಒಂದು ಕಣ್ಣು ಹೋಯಿತು, ತರೀ ಬೆಳೆಯಾದ ಬತ್ತ ಬೆಳೆಯುವವರಿಗೆ ತೆರಿಗೆ ಇಲ್ಲ, ಅವರಿಗೆ ಎರಡು ಕಣ್ಣುಗಳು ಹೋಗಲಿ ಎಂದು ಹೇಳಲು ನಿಂತಿಲ್ಲ. ಆದರೆ ನಮ್ಮ ಪ್ರಾಂತದ ಕಡೆಯವರ ಹಾಗೆ ಮಿಶ್ರ ಬೆಳೆ ಬೆಳೆಯುವವರು ಇನ್ನೂ ಅನೇಕರು ಇರಬಹುದು. ಹೀಗೆ ಒಂದರಿಂದ ಒಂದಕ್ಕೆ ಸಮತೂಗಿಸಿ ತಮ್ಮ ಕಷ್ಟನಷ್ಟಗಳನ್ನು ನಿವಾರಿಸಿಕೊಳ್ಳತಕ್ಕ ರೈತರಿಗೆ ಈ ಮಸೂದೆಯಿಂದ ತೊಂದರೆಯಾಗಬಾರದ ರೀತಿಯಲ್ಲಿ ಸರ್ಕಾರದವರು ಕೆಲವಾರು ಅಂಶಗಳನ್ನು ರಿವೈಸ್ ಮಾಡಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri G. VENKATAI GOWDA (Palaiyam).—Mr. Speaker, Sir, it occurs to me that discrimination is being done in respect of this Bill on the one hand and in respect of many other Bills on the other hand. Because, the Select Committee has not adopted even the rates prevailing in the old Mysore area in this Bill. In respect of other Bills, the highest prevailing rates in Madras, Andhra and other neighbouring areas have been adopted. I do not understand what has made the Select Committee to come to a decision like this. At least the old rates prevailing in Mysore should have been taken. I do not know why the Hon'ble Minister in charge of the Bill has yielded. It shows that they have shown concessions and relaxations to persons who are placed better in life and in respect of landlords. I do not understand why discrimination should have been made so far as this Bill is concerned. Taking into consideration the statistics supplied by the Hon'ble Minister while introducing the Bill, it is most unsatisfactory to adopt the rates mentioned in the Bill. I would say that after the third or fourth stage, increasing rates should have been adopted.

Sri T. MARIAPPA.—Your suggestion is that Madras rates should have been adopted.

Sri G. VENKATAI GOWDA.—Whichever is higher in the higher region should have been adopted. I do not understand why the Minister has failed to do so. Even regarding compensation so many substantial concessions have been shown. Regarding other matters, my friends have already touched. Regarding rent, for agricultural income purposes, rent should not have been taken into consideration. Nobody can be expected to live or reside in a building attached to an agricultural farm. I do not think it has made any agriculturist to take advantage and say that somebody is living for rent. Nobody will live there for rent, *i.e.*, in a building attached to an agricultural farm.

Sri T. MARIAPPA.—That provision is found in all the Acts, both in Madras and Coorg. It is contemplated that where a planter has constructed buildings and leases them out—in such cases the rent will be taken into consideration and not otherwise.

Sri G. VENKATAI GOWDA.—No other person will go and reside there. My contention is regarding the building.

Sri T. MARIAPPA.—Only rented building.

Sri G. VENKATAI GOWDA.—How is it possible to prove that people have

Date

(SRI G. VENKATAI GOWDA)

taken advantage to say that somebody is residing for rent? All these things will be cumbersome and for the purposes of calulating agricultural income, it is not really possible......

Sri T. MARIAPPA.—Particularly in Coorg, these cases are found. That is the reason why it is included in the Bill.

Sri G. VENKATAI GOWDA.—In respect of deductions contained in section 5, I beg to differ on one or two points. They give reduction only in respect of any interest paid in the previous year, etc., etc. Even if the interest is not paid and is due for many years, it is not taken into consideration. An agriculturist has got to pay that interest if he has not paid for the previous year or for the years preceding it. This also should have been taken into consideration.

Under section 19(4) if a person fails to make a return, the Agricultural Income-tax Officer shall make the assessment to the best of his judgment and determine the sum payable by the assessee. The assessee may not complete the return. It may not be possible for the assessee to comply with the directives issued by the assessing authority. In that case the assessing authority assesses income-tax to the best of his judgment and there the matter ends. Supposing he does vexatiously, does it mean that the assessee should be deprived to go against appeal, as it is stated here that there is no appeal against 19(4)? In the absence of the submission of the return the assessing officer assesses him to the best of his judgement. But in section 22, it is said that no appeal shall lie. Is it not a hardship caused? After all we know that most of the agriculturists are illiterate. They may not comply with the direction of the assessing officer. In such cases the assessment will be made to the best of the judgment of the assessing officer. But having received a notice of assessment, the agriculturist must be invested with the right to go in appeal if he is aggrieved. Taking away that right is against the principle of law.

We concede that he has not submitted the return and complied with the directives of the assessing officer. There is a provision for imposing penalty. He is asked to pay an amount equal to two times the tax. But again under section 51, failure to furnish return or to supply information, submission of returns are made mandatory. If he does not comply with the directive of the assessing authority, he is running the risk of being assessed in his absence by the assessing authority to the best of his judgment. But under section 51, if he fails to submit the returns, he shall be punishable with fine which may extend to five rupees for every day during which the default continues. In the other sections of the Bill it is provided that if the return is not submitted, the assessing officer assesses to the best of his judgment. Everything is over. Why should you again take this question up in section 51? Why should it be made compulsory? I do not understand. I would request the Hon'ble Minister to delete clauses (*a*) to (*d*) of 51, which is only a repetition of failure of returns specified in sub-section (1) or sub-section (2) of section 18 or in section 39, because in the case of failure to comply with these, the assessing authority assesses to the best of his judgment. This section is therefore derogatory.

Even in respect of composition, I have already submitted that it is too much. There is no composition in the higher rates.

So far as planters are concerned, in Madras exemption is given for 15 acres, 5 acres in respect of coffee and 5 acres in respect of tea and that too the Select Committee has not taken into account. With regard to the deductions to be made from the agricultural income so far as bonus and other concessions that would be given too the labourers are concerned, no provision is made in the Bill. I suggest that a provision be included in respect of that also.

I invite particular attention of the Hon'ble Minister to clauses (*a*) to (*d*) of clause 51 relating to penalty and under clause 22 also there is penalty for failure to submit the returns of income. One has also to pay in addition to the amount of agricultural income-tax a sum not exceeding that

amount as penalty. There is double penalisation. In other words it wants an assessee to submit the returns compulsorily. But imposing a penalty for the same offence twice is not justifiable.

Sri T. MARIAPPA.—Certainly not.

Sri G. VENKATAI GOWDA.—As it stands, there is a lot of scope for evasion. Two conditions must be satisfied for a person to be made liable to pay this tax; he must be in receipt of an income of Rs. 3,500 from agriculture and he must be able to raise plantation or other commercial crops. Supposing a person raises a crop of chillies and derives an income of Rs. 10,000; there is no provision to ask him to pay tax, and he is not liable to tax. I am afraid whether the Hon'ble Minister expects to derive or raise taxes to his expectation. Only the planters will be affected and none others would try to pay because there is scope for evasion.

Sri T. MARIAPPA.—There seems to be some truth in what the Hon'ble Member says.

Sri G. VENKATAI GOWDA.—The Hon'ble Minister himself admits. I submit that Government must be serious in the matter of getting the expected revenue.

Sri T. MARIAPPA.—I only said there is some truth in what the Hon'ble Member said.

Sri G. VENKATAI GOWDA.—I therefore suggest that exemption may be given for 15 or 20 acres and a flat rate put, and slab rate after 20 acres may be adopted. Put a limit of 20 acres whether it is commercial crop or any other crop and thereby the Government will be able to derive income and not in the way stated here.

With these few remarks, I thank you, Sir.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈ ಬಿಲ್ಲಿನ ಮೇಲೆ ಈಗಾಗಲೇ ಸಾಕಾದಷ್ಟು ಚರ್ಚೆ ಯಾಗಿದೆ. ಈ ದಿವಸವೇ ಈಬಿಲ್ಲನ್ನು ಮುಗಿಸಬೇಕೆಂಬುದಾಗಿ ಹಿಂದಿನ ದಿನ ತೀರ್ಮಾನವಾಗಿತ್ತು. ಅದರ ಪ್ರಕಾರ ಈ ದಿವಸ ನಾವು ಈ ಬಿಲ್ಲನ್ನು ಪಾಸ್ ಮಾಡಲೇ ಬೇಕಾಗಿದೆ. ಆದುದರಿಂದ ನಾನೀಗ ಕ್ಲೋಷರ್ ಮೋಷನ್ ಮಾಡುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಆ ದಿವಸ ಮಾನ್ಯ ಮಂತ್ರಿಗಳು ಹೇಳಿದರು "ಯಾರೂ ಹೇಳದ್ದನ್ನು ಹೇಳತಕ್ಕವರಿಗೆ ಅವಕಾಶ ಕೊಡಲಾಗುವುದು" ಎಂದು. ಈಗ ನನಗೆ ಅವಕಾಶಕೊಡಿ. ಯಾರೂ ಇಲ್ಲಿಯ ವರೆಗೆ ಹೇಳದೆ ಇದ್ದಂಥ ವಿಷಯಗಳನ್ನು ನಾನೀಗ ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ನಿಮ್ಮ ಪಾರ್ಟಿಗೆ ಸೇರಿರ ತಕ್ಕ ಕೆಲವು ಮಾನ್ಯ ಸದಸ್ಯರು ಎಂದರೆ—ಶ್ರೀಮಾನ್ ಶ್ರೀನಿವಾಸಶೆಟ್ಟರು, ಕೆ. ಕೆಂಚಪ್ಪನವರು ಡಿಸೆಂಟಿಂಗ್ ನೋಟನ್ನು ಕೊಟ್ಟಿದ್ದಾರೆ. ಆ ಡಿಸೆಂಟಿಂಗ್ ನೋಟಿನ ಬಗ್ಗೆ ತಾವು ಏನೇನು ಹೇಳಬಹುದಾಗಿತ್ತೋ ಅದೆಲ್ಲ ವನ್ನೂ ಹೇಳಿರುತ್ತೀರಿ. ಇಷ್ಟೆಲ್ಲಾ ಮಾಡಿದ್ದೂ ನಮ್ಮ ಪಾರ್ಟಿ ಅದರಲ್ಲಿ ಪ್ರತಿಬಿಂಬಿಸಲಿಲ್ಲ, ನಾವು ಸಾಕಷ್ಟು ಈ ಮಸೂದೆಯ ಚರ್ಚೆಯಲ್ಲಿ ಭಾಗವಹಿಸಲು ಅವಕಾಶ ಕೊಡಲಿಲ್ಲ, ಎಂಬುದಾಗಿ ಹೇಳತಕ್ಕದ್ದು ಸರಿಯಾದದ್ದಲ್ಲ.

ಶ್ರೀ ಜಿ. ಎಚ್. ಪುಟ್ಟಣ್ಣ.—ನಾನು ನಮ್ಮ ಅಪ್ಪನ ಮಾತನ್ನೇ ಕೇಳಿದವನಲ್ಲ. ನಮ್ಮ ಮೇಷ್ಟರ ಮಾತನ್ನೂ ಕೇಳದವನಲ್ಲ. ಹಾಗಿರುವಾಗ ಇನ್ನು ಬಾಕಿಯವರ ವಿಚಾರ ಏಕೆ? ನಿಮಗೆ ಒಪ್ಪಿಗೆಯಿದ್ದರೆ ಅವಕಾಶಕೊಡಿ. ಇಲ್ಲದಿದ್ದರೆ ಬಿಡಿ.

ಅಧ್ಯಕ್ಷರು.—ಶ್ರೀಮಾನ್ ತಾರೇಗೌಡರು ಪದೇ ಪದೇ ಏಳುತ್ತಿದ್ದಾರೆ. ಆದರೆ ನಾನು ಈಗ ಏನೂ ಮಾಡುವುದಕ್ಕೂ ಬರುವುದಿಲ್ಲ. ನಾನು ಬೆಳಗ್ಗೆ ಅವರಿಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದ್ದುದು ಸರಿ. ಆದರೆ ಈಗ ಸಭೆ ಪ್ರಾರಂಭವಾದ 15 ನಿಮಿಷಗಳತನಕ ಕಾದು ನೋಡಿದ್ದಾಯಿತು. ಅಲ್ಲಿಯ ತನಕ ಮಾನ್ಯ ಸದಸ್ಯರು ಬಂದಿರಲಿಲ್ಲ. ಆದ್ದರಿಂದ ನಾನು ಮಾತನಾಡಲು ಬೇರೆ ಸದಸ್ಯರಿಗೆ ಅವಕಾಶಕೊಟ್ಟಾಗಿ ಹೋಯಿತು. ಆದ್ದರಿಂದ ಈಗ ತಮ್ಮ chance ಹೋಗಿಬಿಟ್ಟಿತು. ಈಗ ರೂಲ್ಸಿನ ಬಂಧನಗಳು ಜಾಸ್ತಿಯಾಗಿವೆ. . . .

ಶ್ರೀ ಟಿ. ತಾರೇಗೌಡ (ಸಿರಾ).—ತಾವು ಈ ಮಧ್ಯಾಹ್ನದ ಮೀಟಿಂಗಿನಲ್ಲಿ ನನಗೆ ಪ್ರಥಮತಃ ಮಾತನಾಡಲು ಅವಕಾಶ ಕೊಡುತ್ತೀರೆಂಬುದು ನನಗೆ ಗೊತ್ತಿರಲಿಲ್ಲ.

ಅಧ್ಯಕ್ಷರು.—ನಾನು ಈ ಬೆಳಗ್ಗೆ ತಮಗೆ ಈ ಸಭೆಯು ಪುನಃ ಯಾವಾಗ ಪ್ರಾರಂಭವಾಗುತ್ತದೋ ಆಗ ತಮಗೆ ಮೊದಲ ಅವಕಾಶ ಕೊಡುತ್ತೇನೆಂದೇ ತಿಳಿಸಿದ್ದೆ. ಆದರೂ ತಾವು ವೇಳೆಗೆ ಸರಿಯಾಗಿ ಹಾಜರಿರಲಿಲ್ಲ. ಈಗ ತಾವೆಲ್ಲರೂ ಸೇರಿ ಈ ವಿಚಾರಗಳಿಗೆ ರೂಲ್ಸು ಕಾನೂನುಗಳನ್ನು ಮಾಡಿರುತ್ತೀರಿ ಅವುಗಳನ್ನು ಉಲ್ಲಂಘನೆಮಾಡಿ ಕೆಲಸಮಾಡಲು ಸಾಧ್ಯವಿಲ್ಲ. ಹಾಗೂ ನಾನೇನಾದರೂ ಮಾಡುವುದಕ್ಕೆ ಹೋದರೆ ಆ ರೂಲ್ಸುಗಳು ಅಡ್ಡಿ ಬರುತ್ತವೆ. ಈಗ ಅವರು ಕ್ಲೋಜರ್ ಮೋಷನ್ ಮಂಡಿಸಿದ್ದಾರೆ. ನಾನೀಗ ಅದನ್ನು ತಮ್ಮ ಮುಂದೆ ಇಡುತ್ತೇನೆ. ತಾವು ಅದನ್ನು ಬೇಕಿದ್ದರೆ ಅಂಗೀಕರಿಸ ಬಹುದು ಇಲ್ಲವೇ ತಿರಸ್ಕರಿಸಬಹುದು.

ಶ್ರೀ ವೈ. ವೀರಪ್ಪ.—ಸ್ವಾಮಿ, ತಾವೀಗ ಹೇಳಿದ್ದು ಬಹಳ ಸೊಗಸಾದ ಮಾತು. ಆದರೆ ಈಗ ಕೆಲವು ಮಾನ್ಯ ಸದಸ್ಯರುಗಳು ಬಹಳ ಉತ್ಸಾಹದಿಂದ ಕೆಲವು ವಿಷಯಗಳನ್ನು ಸಂಗ್ರಹಿಸಿಕೊಂಡು ಬಂದಿದ್ದಾರೆ ಅದನ್ನು ತಿಳಿಸಲು ಅವರಿಗೆ ಅವಕಾಶಕೊಡದೆ ಸದಸ್ಯರ ಹಕ್ಕನ್ನು ಮೊಟಕು ಮಾಡಿದರೆ ತೊಂದರೆ ಯಾಗುತ್ತದೆ. ಮೆಜಾರಿಟಿ ತೀರ್ಮಾನದ ಆಧಾರದ ಮೇಲೆ ಹೋಗುತ್ತೇನೆಂದು ತಾವು ಹೇಳತಕ್ಕ ಮಾತು ಅಷ್ಟೇನೂ ಫಲಕಾರಿಯಾಗಿ ಪರಿಣಮಿಸಲಾರದೆಂದು ಹೇಳುತ್ತೇನೆ. ಆದ್ದರಿಂದ ತಾವು ಇದರ ಮೇಲಿನ ಚರ್ಚೆಗೆ ಇನ್ನೂ ಸ್ವಲ್ಪ ಕಾಲಾವಕಾಶವನ್ನು ಕೊಡ ತಕ್ಕದ್ದು ಉಚಿತವಾದುದೆಂದು ಹೇಳುತ್ತೇನೆ.

ಅಧ್ಯಕ್ಷರು.—ಕ್ಲೋಜರ್ ಮೋಷನ್ ಮೂವ್ ಆಗಿದೆ. ನಾನೀಗ ಅದನ್ನು ತಮ್ಮ ಮುಂದಿಡುತ್ತೇನೆ. ನಾನೀಗ ಆ ಮೋಷನನ್ನು ಅಂಗೀಕಾರ ಮಾಡಿದ್ದೇನೆ. ಸಭೆಯವರು ಬೇಕಾದರೆ ಡಿಫೀಟ್ ಮಾಡಿ ತಾವು ಭಾಷಣಗಳನ್ನು ಮಾಡಬಹುದು. ಆ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ, ತಾವು ಈ ರೀತಿಯಾಗಿ ಸಭೆಯನ್ನು ಪ್ರಾರಂಭಿಸಿದ 15-20 ನಿಮಿಷಗಳಲ್ಲೇ ಕ್ಲೋಜರ್ ಮೋಷನ್ ಮೂವ್ ಮಾಡಿಸುತ್ತೀರೆಂಬ ವಿಚಾರ ನಮಗೆ ಗೊತ್ತಿರಲಿಲ್ಲ. ಇದಕ್ಕಿಂತಲು, ತಮಗೆ ಅಷ್ಟು ಬೇಜಾರಾಗಿದ್ದರೆ, ನೀವು ಎದ್ದು ಹೊರಟು ಹೋಗಬೇಕೆಂದು ಹೇಳಿಬಿಡಿ.

ಈ ಕಡೆ ನಾವು ಎದ್ದು ನಿಂತುಕೊಂಡರೂ ಕೂಡ ತಾವು ಮಾತನಾಡಲು ಅವಕಾಶ ಕೊಡುತ್ತಿಲ್ಲ. ಈಗಲೂ ತಮಗೆ ಇಷ್ಟವಿದ್ದರೆ ಕೊಡಿ—ಹಾಗೆ ಕೊಟ್ಟರೆ ನಿಮ್ಮ ಧರ್ಮ ಕೊಡದಿದ್ದರೆ ನಿಮ್ಮ ಇಷ್ಟ.

ಅಧ್ಯಕ್ಷರು.—ತಾವು ಈ ರೀತಿಯೆಲ್ಲಾ ಕೋಪದಿಂದ ಮಾತನಾಡುತ್ತಿರುವುದನ್ನು ನೋಡಿದರೆ ನನಗೆ ಬಹಳ ವ್ಯಸನವಾಗುತ್ತದೆ. ತಾವೆಲ್ಲರೂ ಏಕ ಕಾಲದಲ್ಲೇ ಹೀಗೆಲ್ಲಾ ಮಾತನಾಡಲು ಹೊರಟರೆ ಸಭೆಯನ್ನು ಕಂಟ್ರೋಲ್ ಮಾಡುವುದು ಬಹಳ ಕಷ್ಟಕ್ಕೆ ಬರುತ್ತದೆ. ತಾವುಗಳೆಲ್ಲ ಸ್ವಲ್ಪ ಸಮಾಧಾನದಿಂದಿರಬೇಕಾದದ್ದು ಅಗತ್ಯ. ಸಿಟ್ಟಿನ ಭರದಲ್ಲಿ ಏನೇನೋ ಪದಗಳು ಹೊರಡುತ್ತವೆ. ಈ ದಿವಸ ಈ ಬಿಲ್ಲನ್ನು ಮುಗಿಸಬೇಕೆಂಬುದಾಗಿ ತಾವೆಲ್ಲರೂ ಹಿಂದೆಯೇ ಒಪ್ಪಿಕೊಂಡಿದ್ದೀರಿ. ನಾನೀಗ ಇದನ್ನು ತಮ್ಮೆಲ್ಲರ ಮುಂದೆ ಇಡುತ್ತೇನೆ. ತಾವು ಯಾರೂ ಈಗ ಪುನಃ ಲೆಕ್ಚರ್ ಮಾಡುವುದು ಬೇಡ. ತಾವು ಆ ಮೋಷನ್ನನ್ನು ಡಿಫೀಟ್ ಮಾಡಿ ಅನಂತರ ಮಾತನಾಡಬಹುದು.

ಶ್ರೀ ಟಿ. ತಾರೇಗೌಡ.—ಸ್ವಾಮಿ, ನನಗೆ ಈಗ ಈ ಬಿಲ್ಲು ಪಾಸಾಗಬೇಕೆಂಬುದೊಂದೇ ಪ್ರಾಮುಖ್ಯವಾದುದಲ್ಲ. ಈ ಬಿಲ್ಲಿನಲ್ಲಿ ಬಹಳ ಕೂಲಂಕಷವಾಗಿ ವಿಮರ್ಶೆಮಾಡಿ ನೋಡಬೇಕಾದಂಥ ವಿಚಾರಗಳು ಇನ್ನೂ ಅನೇಕ ಇವೆ. ಈ ಮಸೂದೆಯನ್ನು ತಯಾರಿಸುವುದರಲ್ಲಿ ಸರ್ಕಾರದವರು ಎಲ್ಲ ಎಚ್ಚರಿಕೆಗಳನ್ನೂ ತೆಗೆದುಕೊಂಡಿದ್ದಾರೆ, ಇದರಲ್ಲಿ ಯಾರೊಬ್ಬರಿಗೂ ನೋವಾಗುವ ರೀತಿಯಲ್ಲಿ ತೀರ್ಮಾನ ತೆಗೆದುಕೊಂಡಿಲ್ಲವೆಂಬ ಅಂಶ ಮಹಾಜನಗಳಿಗೆ ತಿಳಿಯಬೇಕು. ಹಾಗೆ ವಿಮರ್ಶೆ ಮಾಡದೆ ಈಗ ಇರತಕ್ಕ ರೀತಿಯಲ್ಲೇ ಈ ಬಿಲ್ಲನ್ನು ನಾವು ಒಪ್ಪಿಕೊಂಡರೆ ಇದರಿಂದ ಅನೇಕರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಇದರ ಮೇಲಿನ ಚರ್ಚೆಗೆ ಇನ್ನೂ ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಮರಿಯಪ್ಪ.—ಸ್ವಾಮಿ ಈಗ ಇನ್ನೂ 3½ಗಂಟೆ. ಇನ್ನೂ ಅರ್ಧಗಂಟೆ ತನಕ ಮಾತನಾಡಲು ಅವಕಾಶಕೊಡಬಹುದು. 4 ಘಂಟೆಗೆ ಇದರ ಚರ್ಚೆ ಮುಗಿದರೆ ಬಹಳ ಅನುಕೂಲವಾಗುತ್ತದೆ. ಅಲ್ಲಿಯವರೆಗೂ ಸದಸ್ಯರಿಗೆ ಮಾತನಾಡಲು ಅವಕಾಶ ಕೊಡಬಹುದೆಂದು ಕಾಣುತ್ತದೆ.

ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಈ ಮಸೂದೆಯ ಮೇಲೆ ಶೇಕಡ 75 ರಷ್ಟು ಮಂದಿ ಕಾಂಗ್ರೆಸ್ ಪಾರ್ಟಿಯವರು ಮಾತನಾಡಿದ್ದಾರೆ. ಆ ದಿವಸ ತಾವೇ ವಿರೋಧ ಪಕ್ಷದ ಸದಸ್ಯರಿಗೆಯೇ ಹೆಚ್ಚಿನ ಅವಕಾಶವನ್ನು ಈ ದಿವಸ ಕೊಡುವುದಾಗಿ ತಿಳಿಸಿದ್ದಿರಿ. ಹಾಗೆ ಈ ದಿವಸ ಇಷ್ಟಕ್ಕೆ ಪೂರೈಸುವುದಾಗಿದ್ದರೆ ನಾವು ಈಗ ಏಕೆ ಸಭೆ ಸೇರತಕ್ಕ ಅವಶ್ಯಕತೆ ಇತ್ತು? ಬೆಳಗ್ಗೆಯೇ ಮುಗಿಸಬಹುದಿತ್ತು.

3-30. P.M.

ಶ್ರೀ ಟಿ. ಮರಿಯಪ್ಪ.—ನಾನು ತಮ್ಮಲ್ಲಿ ಒಂದು ಪ್ರಾರ್ಥನೆ ಮಾಡಬೇಕಾಗಿದೆ. ಇದರಲ್ಲಿ ಹೀಗೆ ಮಾಡಬೇಕಾಗಿತ್ತು ಹಾಗೆ ಮಾಡಬೇಕಾಗಿತ್ತು ಎಂದು ಹೇಳುವಾಗ ಸ್ವಲ್ಪ ತಾವೆಲ್ಲ ಯೋಚನೆ ಮಾಡಬೇಕು. ಈಗ ಈ ಸೆಲೆಕ್ಟ್ ಸಮಿತಿ ರಿಪೋರ್ಟಿನ ಮೇಲೆ ಎಷ್ಟು ಅಮೆಂಡುಮೆಂಟುಗಳು ಬಂದಿವೆ ಎನ್ನುವುದನ್ನು ನೋಡಿದರೆ ತವಗೇ ಗೊತ್ತಾಗುತ್ತದೆ. ಇನ್ನು ಹೊಸದಾಗಿ ಯಾವ ವಿಷಯಗಳನ್ನೂ ಹೇಳದೆ ಸುಮ್ಮನೆ ಮೊದಲಿನಿಂದ, A.B.C. ಯಿಂದ, ಈಗ ಮಾತನಾಡಲಾರಂಭಿಸಿದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮೀ, ಮಂತ್ರಿಗಳು ಒಂದುಸಾರಿ ಹೀಗಿರಬೇಕೆಂದು ಹೇಳುತ್ತಾರೆ. ಇನ್ನೊಂದು ಸಾರಿ ಸೆಲೆಕ್ಟ್ ಸಮಿತಿಯಲ್ಲೇ ಬಿಲ್ಲು ಚರ್ಚೆಯಾಗಿದೆ ಎಂದು ಹೇಳುತ್ತಾರೆ. ನಮಗೆಲ್ಲ ಮಾತನಾಡಲು ಅವಕಾಶ ದೊರೆಯದಿದ್ದರೆ ನಾವೆಲ್ಲ ಇಲ್ಲಿ ಏತಿರಬೇಕು? ನಾವಿಲ್ಲದೆ ಅವರೇ ಮಾಡಿಕೊಳ್ಳಬಹುದು.

ಅಧ್ಯಕ್ಷರು.—ಈಗ ಯಾರೂ ಭಾವನಾಪರನಾಗಬೇಡಿ. ಶ್ರೀ ಪುಟ್ಟಣ್ಣನವರು ಭಾವನಾಪರನಾಗಿದ್ದಾರೆಂದು ತೋರುತ್ತದೆ. ಈ ರೀತಿ ಭಾವನಾಪರರಾಗಬೇಕಿಲ್ಲ. ಪ್ರಶ್ನೆ ಹೀಗಿದೆ. ಇದನ್ನು ಇವೊತ್ತಿನ ದಿನ ಮುಗಿಸಬೇಕು ಎಂದು ಮೊದಲೇ ಒಪ್ಪಿಕೊಂಡಿತ್ತು. ಶ್ರೀ ನರಸಿಂಹೇ ಗೌಡರು ಹೇಳಿದ ಹಾಗೆ ಇದರ ಮೇಲೆ ಮಾತನಾಡಲು ಸಾಕಷ್ಟು ಅವಕಾಶ ಕೊಡಬೇಕು ನಿಜ! ಏನು ಮಾಡುವುದು, ಆದರೆ ನನಗೇನೋ ಈಗ closure motion ಬಂದಿದೆ. ಅದಕ್ಕೆ ಅವಕಾಶಕೊಟ್ಟರೆ ಅದನ್ನು ನಾನು ಓಟಿಗೆ ಹಾಕಬೇಕು. ಆದರೆ ಈಗ ನಾನು ಓಟಿಗೆ ಹಾಕುವುದಿಲ್ಲ. ನಾಲ್ಕು ಗಂಟೆಗೆ ಹಾಕುತ್ತೇನೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಬೇಡಿ ಸ್ವಾಮಿ, ಹಾಗೆ ಹಾಕಬೇಕಾಗಿದ್ದರೆ ಈಗಲೇ ಹಾಕಿಬಿಡಿ.

ಅಧ್ಯಕ್ಷರು.—ಒಂದು ವಿಷಯ ನಾನು ಹೇಳಬೇಕಾಗಿದೆ. ಸಭೆಯಲ್ಲಿ ಒಬ್ಬರು ಮಾತನಾಡುವಾಗ ಮಧ್ಯೆ ಇನ್ನೊಬ್ಬರು ಮಾತನಾಡಬಾರದು. ಹೀಗಿಲ್ಲದೆ, ನೀವು ಇಲ್ಲಿ ಮಾತನಾಡುವುದನ್ನು ಮತ್ತು ಇನ್ನೊಬ್ಬರು ಇನ್ನೊಂದು ಕಡೆ ಮಾತನಾಡುವುದು ಹೀಗೆ ಮಾಡುವುದನ್ನು ನೋಡಿದರೆ ಸಂತೆಯಂತಾಗುತ್ತದೆ. ಇದು ಯೋಗ್ಯವಲ್ಲ. It is not fair ಕುಳಿತುಕೊಳ್ಳಿ. ಹಾಗೆಲ್ಲ ಮಾಡಬಾರದು.

I have to see that this Bill is finished to-day.

Sri Y. VEERAPPA.—This is a money Bill. It pertains to the entire State.

Mr. SPEAKER.—I cannot understand members going back upon their programme. I would request all members to behave well. If they want to say anything, let them stand one by one. What is the meaning of some members standing on their legs when the Speaker also is on his legs?

Sri Y. VEERAPPA.—Our request is to give chances to some of us to put forth grievances. We obey the Chair

in an orderly manner and represent our grievances.

Mr. SPEAKER.—The first and foremost thing that you have to observe is, when the Speaker stands, no Hon'ble Member should be on his legs. When one member is speaking, others should be seated. These are very simple matters, If we do not observe simple manners, somebody who comes from outside may say something adverse against this House. International people are coming here. I have heard an international tourist saying that we are not behaving well in this House. It has hurt me. Vidhana Sabha is a very important and sacred place; it is a sacred place where we have to behave well.

ಶ್ರೀ ವೈ. ವೀರಪ್ಪ.—ತಾವು ಹೇಳಿದ International Tourist ವಿಷಯುವನ್ನು ನಾನು ಖಂಡಿತ ಒಪ್ಪುತ್ತೇನೆ. ಒಂದು ವಿಷಯ ನಾನು ಹೇಳಬೇಕಾಗಿದೆ. ಯಾವ ಯಾವ ಮಸೂದೆಯನ್ನು ಯಾವ ಯಾವ ಮಟ್ಟದಲ್ಲಿ ಪರಿಶೀಲನೆ ಮಾಡಬೇಕು ಎನ್ನುವುದನ್ನು ನೋಡಿ ಅದಕ್ಕೆ ತಕ್ಕ ಹಾಗೆ ದೀರ್ಘವಾದ ಚರ್ಚೆಗೆ ಅವಕಾಶ ಕೊಡಬೇಕು. ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೂ ಸಹ ಅವಕಾಶ ದೊರೆಯಬೇಕು. ಈ ಸಭೆಯ ಶಿಸ್ತು, ಘನತೆ ಮತ್ತು ಗೌರವಗಳನ್ನು ನಾವುಗಳು ಕಾಪಾಡಿಕೊಂಡು ಬರಬೇಕು. ನಾನು ಇಂಟರ್ ನ್ಯಾಷನಲ್ ಟ್ಯೂರಿಸ್ಟರವರ ಅಭಿಪ್ರಾಯವನ್ನು ಖಂಡಿತ ಒಪ್ಪುತ್ತೇನೆ. ಈ ಹೌಸ್‌ನಲ್ಲಿ ತಮಗೆ ಮನಸ್ಸಿದ್ದರೆ ಹೇಗಾದರೂ ಅವಕಾಶ ಕೊಡಬಹುದು.

Mr. SPEAKER.—We need not be afraid of the closure motion. Let the Hon'ble Members have some faith in me. If I find that Hon'ble Members want to discuss still more, I do give time. There can be no doubt about it.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ವಿಷಯದಲ್ಲಿ ಕಾಂಗ್ರೆಸ್ಸಿನವರೇ ಮಾತನಾಡಲಿ ನಾವು ಬೇಕಾದರೆ ಮಾತನಾಡುವುದನ್ನು ನಿಲ್ಲಿಸಿಬಿಡುತ್ತೇವೆ.

ಡಾ|| ಸರದಾರ್ ಬಿ. ಕೆ. ನಾಗೂರ್ (ಬಿಜಾಪುರ).—ತಮಗೆ ಈಗ ಎರಡು ಮೂರು ಕಡೆಗಳಿಗೆ ಲಕ್ಷ ಕೊಡಬೇಕಾಗಿರುವುದರಿಂದ ಕಷ್ಟವಾಗಿದೆ. ಅದನ್ನು ನಾನು ಒಪ್ಪುತ್ತೇನೆ. ಆದರೆ ನಾವು ಇಲ್ಲಿಗೆ ಬಂದು ಎರಡು ಮಾತನಾಡಲು ಪ್ರಯೋಜನವಾಗದಿದ್ದರೆ ನಮ್ಮ ಕಡೆಯ ಜನಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಹೇಗೆ ಎನ್ನುವುದನ್ನು ತಾವು ಸ್ವಲ್ಪ ತಿಳಿದುಕೊಳ್ಳಬೇಕು. ತಾವು ಹೇಳಿದಂತೆ ಸಭೆಯ ಗೌರವ ಮತ್ತು ಸಭೆಯ ಕಾರ್ಯಕಲಾಪಗಳನ್ನು ಆಸಕ್ತಿಯಿಂದ ನಡೆಸಬೇಕು. ಆದರೆ ಈಗ ಚರ್ಚೆ ನಡೆಸಲು ಸಾಕಷ್ಟು ಕಾಲಾವಕಾಶ ಕೊಡದಿದ್ದರೆ ಹೇಗೆ? ಇದು ಬಹಳ ವಿಚಿತ್ರವಾಗಿದೆ. ಅದರಲ್ಲೂ ನಾವುಗಳು ಎದ್ದು ಎದ್ದು ಮಾತನಾಡಲಿಕ್ಕೆ ನಿಂತರೆ "ಕೂಡಿ, ಕೂಡಿ" ಎಂದು ಬೇರೆ ತಾವು ಹೇಳಿ ಬಿಡುತ್ತೀರಿ. ಇಂತಹ ರೈತರಿಗೆ ಮುಖ್ಯವಾದ ಈ ಬಿಲ್ಲಿನ ಮೇಲೆ ಮಾತನಾಡಲು ಸಾಕಷ್ಟು ಕಾಲಾವಕಾಶ ಕೊಡುವುದಿಲ್ಲವೆಂದು ಹೇಳಿದರೆ. . . .

ಅಧ್ಯಕ್ಷರು.—ಇದು ಚಿಕ್ಕ ಭಾಷಣವೇ ಆಯಿತು; ಅಧ್ಯಕ್ಷರು ಮಾತನಾಡಲು ಎದ್ದು ನಿಂತಾಗ ಸದಸ್ಯರು ನಿಲ್ಲಬಾರದು. ಸದಸ್ಯರು ನಿಂತಾಗ ಅಧ್ಯಕ್ಷರು ಕುಳಿತಿರಬೇಕು. ಒಬ್ಬರು ಮಾತನಾಡುತ್ತ ನಿಂತಿರುವಾಗ ಮತ್ತೊಬ್ಬರು ಸಹ ಎದ್ದು ನಿಂತರೆ ಹೇಗೆ? ಒಬ್ಬರು ಮಾತನಾಡುತ್ತಿದ್ದರೆ ಅವರ ಎದುರಿನಲ್ಲೇ ಮಾತನಾಡುತ್ತೀರಿ. ಅಲ್ಲದೆ crossing floor ಮಾಡುವುದು.—ಈ ತರಹ ಮಾಡಿದರೆ ಚೆನ್ನಾಗಿ ಕಾಣುವುದಿಲ್ಲ. ಆದುದರಿಂದ ನೀವು point of orderಗಳನ್ನು ಸ್ವಲ್ಪ ಕಡಮೆ ಮಾಡಬೇಕು. ಇದರಿಂದ ಕಾಲವ್ಯಯವಾಗುತ್ತದೆ. ಮುಂದಕ್ಕೆ ನಮಗೇ ತೊಂದರೆಯಾಗುತ್ತದೆ.

ಶ್ರೀ ಟಿ. ತಾರೇಗೌಡ.—ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕು.

ಅಧ್ಯಕ್ಷರು.—ನನಗೆ ನೀವು ಮಾತನಾಡಿದರೆ ಏನೂ ಅಭ್ಯಂತರವಿಲ್ಲ. But rules do not permit.

ಶ್ರೀ ಜಿ. ಎನ್. ಪುಟ್ಟಣ್ಣ.—ಮಾನ್ಯ ಅಧ್ಯಕ್ಷರೇ ನಾನು ಇಷ್ಟೊಂದು ಹೊಡೆದಾಡಿದಮೇಲೆ ನನಗೆ ಮಾತನಾಡಲು 10 ನಿಮಿಷಗಳ ಅವಕಾಶವನ್ನು ಕೊಟ್ಟದ್ದಕ್ಕಾಗಿ ನಾನು ತಮಗೆ ಚಿರಋಣಿಯಾಗಿದ್ದೇನೆ. ಕಾಗ್ರೆಸ್ ಮಿತ್ರರು ನಮಗೆ ಶತ್ರುಗಳಲ್ಲ. ಆದರೆ ಒಂದೇ ಸಾರಿ ಏತಕ್ಕೋಸ್ಕರ ಕ್ಲೋಷರ್ ಮೋಷನ್ ಎತ್ತಿದ್ದಾರೋ ನನಗೆ ಗೊತ್ತಾಗಲಿಲ್ಲ. ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಬಿಲ್ಲನಲ್ಲಿ ಅನೇಕ ಲೋಪ ದೋಷಗಳಿವೆ. ನನಗೆ ಆರೋಗ್ಯ ಚೆನ್ನಾಗಿಲ್ಲದೆ ಇರುವುದರಿಂದ ಎಲ್ಲಾ ವಿಷಯುಗಳನ್ನೂ ಹೇಳುವುದಕ್ಕಾಗುವುದಿಲ್ಲ. ಆದರೆ ರೈತನಮೇಲೆ ಒಂದು ದೊಡ್ಡ ಚಪ್ಪಡಿ ಎಳೆಯುವುದಕ್ಕಾಗಿಯೇ ಈ ಮಸೂದೆಯನ್ನು ತಂದಿದ್ದಾರೆಂದು ನನಗೆ ಕಾಣುತ್ತದೆ. ಈ ಸಭೆಯಲ್ಲಿ ಸಾಮಾನ್ಯವಾಗಿ ಈಗ ಒಂದು ತಿಂಗಳಿಂದ ಸೇಲ್ಸ್‌ಟ್ಯಾಕ್ಸ್ ಬಿಲ್, ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ಬಿಲ್, ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬಿಲ್, ಬೆಟರ್‌ಮೆಂಟ್‌ಲೆವಿ ಟ್ಯಾಕ್ಸ್ ಬಿಲ್ ಇತ್ಯಾದಿ ಅನೇಕ ಬಿಲ್ಲುಗಳು ಬಂದಿವೆ. ರೈತರು ಈರೀತಿ ನಾನಾ ವಿಧವಾದ ಟ್ಯಾಕ್ಸ್‌ಗಳನ್ನು ತೆತ್ತು ತೆತ್ತು ಸಾಕಾಗಿದೆ. ಪ್ರತಿವರ್ಷವೂ ಸುಮ್ಮನೆ ಹೀಗೆ ಟಾಕ್ಸ್ ಜಾಸ್ತಿ ಮಾಡುವುದರಿಂದ ಜನ ಸಾಮಾನ್ಯರಿಗೆ ಬಹಳ ತೊಂದರೆಯಾಗುವುದಿಲ್ಲವೇ ಎಂದು ಕೇಳಿದರೆ, ಮಂತ್ರಿಗಳು 'It will be rectified under the rules' ಎಂದು ಹೇಳುತ್ತಾರೆ. ಅನೇಕ ಆಕ್ಟುಗಳಿಗೆ ರೂಲ್ಸ್ ಆಗಿಲ್ಲ. ರೈತರ ತಲೆಯನ್ನು ಕಡಿಯುವ ಮಸೂದೆ ಇದು. ಇಂತಹ ಮಸೂದೆಯನ್ನು ನಾವು ಅನುಮೋದಿಸಬೇಕೆಂದು ಹೇಳುತ್ತಾರೆ. ಮಂತ್ರಿಗಳು 20–30 ವರ್ಷಗಳಿಂದ ಇಂಥ ಸಿಟಿಯಲ್ಲಿಯೇ ಇದ್ದುಕೊಂಡು ಅವರಿಗೆ ಹಳ್ಳಿಯವರ ಸ್ಥಿತಿಗತಿಗಳೇನೆಂಬುದೇ ಗೊತ್ತಿಲ್ಲ. ಕ್ಲಾಸ್ 2 ಡೆಫಿನಿಷನ್ 3ರ ಪ್ರಕಾರ ಇನ್‌ಕಂಟ್ಯಾಕ್ಸ್, ಅಗ್ರಿಕಲ್‌ಚರಲ್ ಟ್ಯಾಕ್ಸ್ ಕೊಡಬೇಕು. ಲ್ಯಾವೆಂಡರ್ ಎಂಬ ಚಿಗುರಿನಿಂದ ಆಯಿಲ್ ಎಕ್ಸ್‌ಟ್ರಾಕ್ಟ್ ಮಾಡಿ ಅದನ್ನು ಅಮೇರಿಕಾಕ್ಕೆ ಕಳುಹಿಸುತ್ತಾರೆ ಅದರಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಾರೆ. ಎಸೆನ್ಷಿಯಲ್ ಆಯಿಲ್ ಒಂದು ಪೌಂಡಿಗೆ 700–800 ರೂಪಾಯಿಗಳಾಗುತ್ತದೆ. ಇದು ಅನೇಕರಿಗೆ ಗೊತ್ತಿಲ್ಲ. ಯಾವುದೋ ಬೆಳೆದರು ಎಂದು ಹೇಳಬಾರದು. ಇನ್ನೊಂದು ವಿಷಯ, ಇಂಡಿಯನ್ ದಿನದ ಎಣ್ಣೆಗೆ ಒಂದು ಪೌಂಡಿಗೆ 700 ರೂಪಾಯಿ

(ಶ್ರೀ ಜಿ. ಎಸ್. ಪುಟ್ಟಣ್ಣ)
ಗಳಾಗುತ್ತದೆ ಎಂದು ನಮಗೆ ಇನ್‌ಫರ್‌ಮೇಷನ್ ಗೊತ್ತಿದೆ. ಮತ್ತೆ ಸಾವಿರಾರು ಹುಣಸೆ ಮರಗಳೂ ಇವೆ. ಆದಕ್ಕೆ ಟ್ಯಾಕ್ಸ್ ಹಾಕಬಹುದು ಮತ್ತು ಸೋಪ್ ನಟ್ಸ್ ಬೇಕಾದಷ್ಟು ಬೆಳೆಯುತ್ತಾರೆ. ಇದರಿಂದ ಸಾವಿರಾರು ರೂಪಾಯಿ ಬರುತ್ತದೆ. ಅಂಟುವಾಳಕ್ಕೆ ಟ್ಯಾಕ್ಸ್ ಹಾಕಿಲ್ಲ. ಇದು ಫಾರೆಸ್ಟ್ ಪ್ರಾಡಕ್ಟ್ ಇದನ್ನು ಫಾರೆಸ್ಟಿನಲ್ಲಿ ಬೆಳೆಯುತ್ತಾರೆ.

Sri T. MARIAPPA.—I will have it examined. It will be rectified under the rules.

ಶ್ರೀ ಜಿ. ಎನ್. ಪುಟ್ಟಣ್ಣ.—ಕ್ಲಾಜ್ 6ರಲ್ಲಿ ಈ ರೀತಿ ಇದೆ :—"where agricultural income is derived from land partly from within the State and partly without the State the agricultural income tax shall be levied under this Act." ಇದು ನನಗೆ ಅರ್ಥವಾಗುವುದಿಲ್ಲ. Out side the State ಎಂದು ಮಾತ್ರ ಇರಬೇಕು ಅಲ್ಲಿಯೂ ಹಾಕುತ್ತಾರೆ ಇಲ್ಲಿಯೂ ಹಾಕುತ್ತಾರೆ. ಅವಕ್ಕೆ ಡಬ್ಬಲ್ ಟ್ಯಾಕ್ಸ್ ಕೊಡಬೇಕು.

ಶ್ರೀ ಟಿ. ಮರಿಯಪ್ಪ.—ಹಾಗಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಹಾಗಾದರೆ ವಜಾ ಮಾಡಿ. ಕ್ಲಾಸ್ (7)ರಲ್ಲಿ ಮೆತೆಡ್ ಆಫ್ ಅಕೌಂಟಿಂಗ್ ವಿಷಯ ಹೇಳಿದೆ. ಶ್ಯಾನುಭೋಗರು ರೈತರ ತಲೆ ಬೋಳಿಸುತ್ತಾರೆ. ಅವರು ಆಮೇಲೆ ಪೂಟ್ ಲಾಯರ್, ಪುಡಾರಿಗಳ ಹತ್ತಿರ ಹೋಗಬೇಕಾಗುತ್ತದೆ. ಇದಕ್ಕೆ ಒಂದು ದೃಷ್ಟಾಂತ ಹೇಳುತ್ತೇನೆ. ಕುಣಿಗಲ್ ತಾಲ್ಲೂಕಿನಲ್ಲಿ ಕಬ್ಬು ಬೆಳೆಯುವವರ ಸ್ಥಿತಿ ಬಹಳ ಕಷ್ಟಕರವಾಗಿದೆ. ಅವರು ಎಷ್ಟೋ ತೆರಿಗೆ ಕೊಡುತ್ತಾರೆಂಬುದನ್ನು ತಿಳಿದಿದ್ದರೂ ಕುಣಿಗಲ್‌ನಿಂದ ಬಂದಿರುವ ಮಾನ್ಯ ಸದಸ್ಯರು ಮಾತನಾಡದೆ ಸುಮ್ಮನೆ ಕುಳಿತಿರುವುದು ನನಗೆ ವಿಷಾದವಾಗುತ್ತದೆ. ಸೆಕ್ಷನ್ 9ರ ಪ್ರಕಾರ ಅಸೆಸ್ ಮೆಂಟ್ ಆಫ್ ಹಿಂದೂ ಅನ್ ಡಿವೈಡೆಡ್ ಫಾಮಿಲಿ ಇಟಂನಲ್ಲಿ 7 ಸಾವಿರ ರೂಪಾಯಿ ಕೊಡಬೇಕೆಂದು ಹೇಳುತ್ತಾರೆ. ಕೆಲವು ಕಡೆ ಇಬ್ಬರೇ ಇರುತ್ತಾರೆ ಆಗಲೂ 7 ಸಾವಿರ. ಇನ್ನು ಕೆಲವು ಕಡೆ 5–6 ಜನ ಮಕ್ಕಳು ಬೇರೆ ಸಂಸಾರದಲ್ಲಿದ್ದರೆ ಅವರಿಗೆ ಬಟ್ಟೆ ಬರೆ ಕೊಟ್ಟು ಒದಗಿಸಿ ಜೀವನ ಮಾಡುವುದು ಹೇಗೆ ? ನಮ್ಮ ಕಾಂಗ್ರೆಸ್ ಸಹೋದರರಿಗೆ ದೇವರು ಏಕೆ ಬುದ್ಧಿ ಕೊಡಲಿಲ್ಲವೋ ಗೊತ್ತಿಲ್ಲ. ಸೆಕ್ಷನ್ III ಸಬ್ ಕ್ಲಾಸ್ 2 (a)ರಲ್ಲಿನ "so much of the agricultural income of a wife or minor child of an individual as arises directly or indirectly" ಇದರ ಅರ್ಥವೇನೋ ನನಗೆ ಗೊತ್ತಾಗಲಿಲ್ಲ. ಭಗವಂತನಿಗೇ ಪ್ರೀತಿಯಾಗಬೇಕು. ಒಬ್ಬ ಹುಡುಗ, ಹುಡಿಗಿಗೆ ಅವರ ತಾತ, ಅಜ್ಜ ಲ್ಯಾಂಡ್ ಕೊಟ್ಟರೆ ಅಪ್ಪನ ಆಸ್ತಿ ಉತ್ಪತ್ತಿಯೊಡನೆ ಮಗನೂ ಟ್ಯಾಕ್ಸ್ ಕೊಡಬೇಕು. ನೀವು ಹೊಸದಾಗಿ ಸ್ತ್ರೀಧನಕ್ಕೆ ತೆರಿಗೆ ಹಾಕಬೇಡಿ. ಬಹಳ ಪಾಪ ಬರುತ್ತದೆ. ನಾನು ಅನೇಕ ಸಾರಿ ಹೇಳಿದ್ದೇನೆ ; ಆದರೂ ನಮ್ಮ ಸಲಹೆಗಳು ನರಿಯ ಕೂಗು ಗಿರಿಗೆ ಮುಟ್ಟೀತೆ ಎಂಬ ಹಾಗಾಗಿದೆ.

It is stated in Section 19 (4) that the agricultural income tax officer shall make the assessment to the best of his judgment. He should be asked to give sufficient reasons in writing in the order of assessment, so that no mischief can be played. ಇನ್ನು ಸೆಕ್ಷನ್ 20 ನ್ನು ನೋಡಿದರೆ ಇದು ಮಗು ಹುಟ್ಟುವುದಕ್ಕ ಮುಂಚೆಯೇ ಕುಲಾವಿ ಹೊಲಿಸಿದರು ಎನ್ನುವ ಹಾಗೆ ಇದೆ. ಆದ್ದರಿಂದ ದಯವಿಟ್ಟು ವ್ಯವಸಾಯಗಾರರ ಮೇಲೆ ಈ ತೆರಿಗೆ ಹಾಕುವುದನ್ನು ಬಿಟ್ಟುಬಿಡಿ. ಸ್ತ್ರೀಧನಕ್ಕೆ ಅಂದರೆ ನಮ್ಮ ಅಕ್ಕ ತಂಗಿಯರ ಮೇಲೆ ಟ್ಯಾಕ್ಸ್ ಹಾಕಿ ಎಂದು ಯಾರೂ ಹೇಳಲಿಲ್ಲ. ಈಗಲಾದರೂ ಇದನ್ನು ಪೂರ್ತಿಯಾಗಿ ಬಿಟ್ಟು ಬಿಡಬೇಕು. ಸೆಕ್ಷನ್ 22 (d) ಯಿಂದ ರೈತನಿಗೆ ಬಹಳ ತೊಂದರೆಯಾಗುತ್ತದೆ ಅದನ್ನು ಡಿಲೀಟ್ ಮಾಡಿ. ಸೆಕ್ಷನ್ 22 ಕ್ಲಾಸ್ 4ರಲ್ಲಿ ಹೇಳಿರುವಂತೆ ಅದರ ಜೊತೆಗೆ free copy to the party ಕೊಟ್ಟೇ ತೀರಬೇಕು, ಇಲ್ಲದಿದ್ದರೆ ರೈತರು ಉಳಿಯುವ ಹಾಗಿಲ್ಲ. ಕ್ಲಾಜು 22 (4)ರಲ್ಲಿ ಹೀಗೆ ಹೇಳಿದೆ :—

"If the Commissioner or Deputy Commissioner makes an order under sub-section (1) he shall forthwith send a copy of the same to the Agricultural Income-Tax officer concerned" ಈ ಸಂಬಂಧದಲ್ಲಿ ಪಾರ್ಟಿಗೂ ಸಹ ಒಂದು ಕಾಪಿ ಕಳಿಸಬೇಕು ಎಂದು ನಾನು ಸೂಚಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ 20ನೆಯ ಕ್ಲಾಜದಲ್ಲಿಯೂ ಸಹ ಟ್ರಾನ್ಸ್‌ಫರ್ ಆಗಿದ್ದರೆ ಅವರಿಗೆ ಸಹ ಕಾಪಿ ಕಳಿಸುವಂತೆ ಸೇರಿಸಬೇಕು.

ಇನ್ನು 34ನೆಯ ಕ್ಲಾಜದಲ್ಲಿ ಅಪೀಲು ಮಾಡುವುದಕ್ಕೆ 30 ದಿವಸಗಳ ಅವಧಿ ಕೊಡಲಾಗಿದೆ. 30 ದಿವಸಗಳ ಬದಲು 60 ದಿವಸ ಕೊಟ್ಟರೆ ಚೆನ್ನಾಗಿರುತ್ತದೆ. ಅಪೀಲುಗಳಿಗೆ ಸಾಮಾನ್ಯವಾಗಿ 60 ದಿವಸಗಳು ಇರುತ್ತವೆ.

41ನೇ ಕ್ಲಾಜದಲ್ಲಿ ಈರೀತಿ ಇದೆ.—

"Provided that, when an assessee has presented an appeal under section 32, the Agricultural Income-Tax Officer may, in his discretion, treat the assessee as not being in default as long as such appeal is undisposed of" and ಇದರಲ್ಲಿಯ undisposed of ಎಂಬುದರ ಬದಲು pending disposal ಎಂದು ಇದ್ದರೆ ಚೆನ್ನಾಗಿರುತ್ತದೆ.

ಕ್ಲಾಜ 51 (d)ದಲ್ಲಿ ರಿಟರ್ನ ಕಳಿಸದಿದ್ದರೆ ಒಂದು ದಿವಸಕ್ಕೆ 5 ರೂಪಾಯಿವರೆಗೆ ದಂಡ ವಿಧಿಸಬೇಕೆಂದು ಇದೆ. ಒಂದು ದಿವಸಕ್ಕೆ ಐದು ರೂಪಾಯಿ ದಂಡ ಕೊಟ್ಟರೆ ಅವನ ಮನೆ ಹಾಳಾಗಿ ಹೋಗುತ್ತದೆ. ಸ್ವಲ್ಪ ನಿಧಾನವಾದರೆ ಏನೂ ಆಗುವುದಿಲ್ಲ. ಆದಕಾರಣ ದಯವಿಟ್ಟು ಈ ಸಬ್‌ಕ್ಲಾಜನ್ನು delete ಮಾಡಬೇಕು.

"Clause 62. Power to inspect register of members of company, etc., ಇದರಲ್ಲಿ "any person authorised" ಎಂದು ಇರುವುದು ಸರಿಯಿಲ್ಲ. "any person authorised" ಬದಲು "Inspector" ಎಂದು ಇರಬೇಕು. ಯಾರಾದರೂ ಎಂದರೆ ಸರಿಯಾಗುವುದಿಲ್ಲ.

ಉಳಿದ ಅಂಶಗಳ ವಿಚಾರದಲ್ಲಿ ನನ್ನ ಸ್ನೇಹಿತರು ಎಲ್ಲವನ್ನೂ ವಿವರವಾಗಿ ಹೇಳಿದ್ದಾರೆ. ಆದಕಾರಣ ನಾನು ಹೆಚ್ಚಿಗೆ ಹೇಳುವುದಿಲ್ಲ. ನನಗೆ ಹೆಚ್ಚಿಗೆ ವೇಳೆ ಇಲ್ಲದ ಮೂಲಕ ಇಲ್ಲಿಗೆ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಸ್ವಾಮಿ, ಈಗ ಸಭೆಯ ಮುಂದಿರುವ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲಿನ ಮೇಲೆ ಅನೇಕ ಮಾನ್ಯ ಮಿತ್ರರು ಈಗಾಗಲೇ ಮಾತನಾಡಿದ್ದಾರೆ. ಮಾನ್ಯ ಮಿತ್ರರು ಹೇಳಿದ ಹಾಗೆ ಮೊದಲು ಇದ್ದ ಕಾನೂನಿನಲ್ಲಿಯ ಅಂಶಗಳನ್ನು ಒಪ್ಪಿ ಕೊಂಡಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ. ರೈತನ ಮೇಲೆ ತೆರಿಗೆಯ ಹೊರೆ ಎಷ್ಟಾಗುತ್ತದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ತಿಳಿಸಬೇಕಾಗಿತ್ತು. ಮೈಸೂರು ರಾಜ್ಯದಲ್ಲಿ ಹೊಸದಾಗಿ ಸೇರ್ಪಡೆಯಾದ ಪ್ರದೇಶದಿಂದ ಎಷ್ಟು ಉತ್ಪತ್ತಿ ಬರುತ್ತದೆ ಹಾಗೂ ಹಳೆಯಮೈಸೂರು ಪ್ರದೇಶದಲ್ಲಿ ಎಷ್ಟು ಉತ್ಪತ್ತಿ ಬರು ವುದು ಎಂಬ ಅಂಶವನ್ನು ಅಂಕಿ ಸಂಖ್ಯೆಗಳ ಸಮೇತ ವಾಗಿ ಈ ಮಸೂದೆಯನ್ನು ಇಟ್ಟಿದ್ದರೆ ಚೆನ್ನಾಗಿತ್ತು.

4 P.M.

ಶ್ರೀಮಾನ್ ಚನ್ನಬಸಪ್ಪನವರು ಬಹಳ ಸುಲಭವಾಗಿ ವ್ಯವಸಾಯದ ಅಂಕಿಅಂಶ ಹೇಳಿದರು. ಸ್ವಾಮಿ, ನಾನು ಹೇಳುತ್ತೇನೆ, ರೈತ ಯಾವ ರೂಪದಲ್ಲೇ ಆಗಲಿ ಬೆಳೆಯತಕ್ಕ ಆಹಾರವೆಲ್ಲಾ ರೈತರಿಗೆ ಸೇರಿದ್ದೇ. ರಾಗಿ ಆಗಲಿ, ಅಕ್ಕಿ ಆಗಲಿ, ಆಲೂಗಡ್ಡೆ ಆಗಲಿ, ತೆಂಗು ಆಗಲಿ ನಿಮ್ಮ ಷೆಡ್ಯೂಲ್‌ನಲ್ಲಿ ಕೊಟ್ಟಿರತಕ್ಕ ಆಹಾರ ಪದಾರ್ಥ ಗಳೆಲ್ಲಾ ರೈತರು ಮಾಡತಕ್ಕದ್ದೇ ವಿನಾ ಹೊರಗಿನವರು ಯಾರೂ ಮಾಡುತ್ತಿಲ್ಲ. ಅಥವಾ ಮೆಷಿನ್‌ನಲ್ಲಿ ಪ್ರೆಸ್ ಮಾಡಿಹಾಕಿದ ಪದಾರ್ಥಗಳಲ್ಲ. ಉದಾಹರಣೆಗೆ ಹೇಳುವುದಾದರೆ ಮಾನ್ಯ ಮಂತ್ರಿಗಳಾದ ಮರಿಯಪ್ಪ ನವರಿಗೆ 50 ಎಕರೆ ತರೀ ಜಮೀನು ಇದ್ದರೆ ಅವರಿಗೆ ಎಕರೆಗೆ 6 ಪಲ್ಲಾ ಗುತ್ತಿಗೆ ಬರತ್ತದೆ. 6 ಪಲ್ಲ ಗುತ್ತಿಗೆ ಬಂದರೆ 50 ಎಕರೆಗೆ 300 ಪಲ್ಲಾ ಬತ್ತ ಬರುತ್ತದೆ. 300 ಪಲ್ಲಾ ಬತ್ತಕ್ಕೆ 9,000 ರೂಪಾಯಿ ಆಗುತ್ತದೆ. ಕಮ್ಮಿ ದರ ಹಾಕಿದ್ದೇನೆ. 25 ಎಕರೆ ಇರುವವನಿಗೆ 4½ ಸಾವಿರ ರೂಪಾಯಿ ಬರುತ್ತದೆ. 100 ಎಕರೆ ಇರತಕ್ಕವನಿಗೆ 18 ಸಾವಿರ ರೂಪಾಯಿ ಉತ್ಪನ್ನ ಬರುತ್ತದೆ, ಇವರೆಲ್ಲರನ್ನೂ ಬಿಟ್ಟು ಬಿಟ್ಟು, ಟ್ಯಾಕ್ಸ್ ಇಲ್ಲ ಎನ್ನುವುದಾದರೆ ನಾನು ಹೇಳುತ್ತೇನೆ, ಮಾನ್ಯ ಹಣಕಾಸಿನ ಮಂತ್ರಿಗಳು ಹಾಸನ ಡಿಸ್ಟ್ರಿಕ್ಟ್ ನಲ್ಲಿ ಆಲೂಗಡ್ಡೆ ಬೆಳೆಯುವವರು ಇಷ್ಟು ಜನ ಇದ್ದಾರೆ ಎಂಬುದನ್ನು ಸರ್ವೆ ಮಾಡಲಿ. ಆಲೂಗಡ್ಡೆಯ ಮೇಲೆ ಟ್ಯಾಕ್ಸ್ ಇದೆ. 5 ವರ್ಷದ ಸರ್ವೇ ಕೊಡುತ್ತೇನೆ. ಬೇಕಾದರೆ ರೈತರ ಮನೆ ಹತ್ತಿರ ಅವರನ್ನು ಕರೆದು ಕೊಂಡು ಹೋಗುತ್ತೇನೆ. ನಿಜವಾಗಿಯೂ ಅವರಿಗೆ 3 ಕಾಸು ಫಾಯದೆ ಇಲ್ಲ. ಒಂದು ಎಕರೆ ಉಳುಮೆ ಮಾಡಬೇಕಾದರೆ ಕನಿಷ್ಠಪಕ್ಷ 250 ರೂಪಾಯಿಗಳಿಂದ 750 ರೂಪಾಯಿಗಳವರೆಗೂ ಖರ್ಚು ಬೀಳುತ್ತದೆ. ಇವ ತ್ತಿನ ಪರಿಸ್ಥಿತಿಯಲ್ಲಿ ರೈತನಿಗೆ ಯಾವ ಫಾಯಿದೆಯೂ ಇಲ್ಲ. ಖರ್ಚು ಜಾಸ್ತಿ, ಲೆಕ್ಕ ಕೊಡುವುದಕ್ಕಾಗು ವುದಿಲ್ಲ. ವರ್ಷಕ್ಕೆ 20 ಸಾವಿರ ರೂಪಾಯಿ ಬಂದರೂ ಬಿತ್ತನೆ ಬೀಜ ಕೊಳ್ಳಲು ದುಡ್ಡು ಕೊಡತಕ್ಕ ಶಕ್ತಿ ಇರುವುದಿಲ್ಲ. ಉಳುಮೆ ಮಾಡತಕ್ಕ ಶಕ್ತಿ ಇರುವುದಿಲ್ಲ, ಇದನ್ನೆಲ್ಲಾ ಗಮನಿಸದೆ 20 ಸಾವಿರ ರೂಪಾಯಿ ಲೆಕ್ಕ ಹಾಕಿದರೆ ಹೇಗೆ? ಪ್ರತಿದಿವಸ ಸಾಲ ಮಾಡುತ್ತಾ ಇದ್ದಾನೆ. ಇವತ್ತಿನ ದಿವಸ ಹಾಸನ ತಾಲ್ಲೂಕಿನಲ್ಲಿ. ಆಲೂಗಡ್ಡೆ ಬೆಳೆಯತಕ್ಕ ರೈತನಿಗೆ ನಿಜವಾಗಿಯೂ ಆದಾಯವಿಲ್ಲ. ಆದ್ದರಿಂದ ನಮ್ಮ ಮೈಸೂರು ದೇಶ ದಲ್ಲಾಗಲಿ, ಅಥವಾ ಹೊರಗಡೆ ಮದರಾಸಿನಲ್ಲಾ ಗಲಿ ಹೋಗಿ ನೋಡಿ, ಇದನ್ನು ಕಮರ್ಷಿಯಲ್ ಕ್ರಾಪ್ ಎಂದು ಪರಿಗಣಿಸಿದ್ದಾರೆಯೇ ಹೇಗೆ ಎಂದು. ಈ ವಿಷ ಯದಲ್ಲಿ ಹೇಳಬೇಕಾದರೆ, ಕಾಂಗ್ರೆಸ್ ಸರಕಾರ ಬಂಡ ವಾಳ ಶಾಹಿಗಳ ಅನುಕೂಲಕ್ಕೆ ಇದನ್ನು ಸೆಲೆಕ್ಟ್ ಕಮಿ ಟಿಗೆ ಹಾಕಿ, ಅಲ್ಲಿ ಯಾವ ಯಾವುದನ್ನು ತಳ್ಳಿಹಾಕ ಬೇಕೋ ಅದನ್ನು ತಳ್ಳಿಹಾಕಿ ಸುಮ್ಮನೆ ನಾಮಕಾ ವಾಸ್ತೆ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಿಲ್ಲನ್ನು ಮಂಡಿಸಬೇಕೆಂದು ತಂದಿದ್ದೀರಿ. ಆದ್ದರಿಂದ ಖಂಡಿತ ವಾಗಿಯೂ ಇದನ್ನು ವಿರೋಧಿಸಬೇಕಾಗುತ್ತದೆ. ನಾನು ಹೇಳುವುದು ಇಷ್ಟೆ. ಈ ಬಿಲ್ಲನ್ನು ಪಾಸ್ ಮಾಡುವುದಕ್ಕೆ ಬದಲಾಗಿ ಮುಂದೆ ತಳ್ಳಿಹಾಕಿ, ಅಂಕಿ ಅಂಶಗಳನ್ನೆಲ್ಲಾ ಕಂಡುಹಿಡಿದು ಪುನಃ ನಮ್ಮ ಮುಂದೆ ತಂದಿಟ್ಟರೆ ನಿಜವಾಗಿಯೂ ಸಂತೋಷವಾಗಿ ಅಂಗೀ ಕರಿಸುತ್ತೇವೆ. ಬೊಂಬಾಯಿನಲ್ಲಿ ಹಾಕಿಲ್ಲ, ಅವರು ಕೈಬಿಟ್ಟು ಹೋಗುತ್ತಾರೆ, ಆದ್ದರಿಂದ ಯೂನಿಫಾರಂ ಆಗಿ ಎಲ್ಲ ಭಾಗಗಳಿಗೂ ಆದಾಯ ತೆರಿಗೆ ಹಾಕ ಬೇಕೆಂದು ಹೇಳಿ ಇದನ್ನು ಜಾಗ್ರತೆ ತಂದಿದ್ದೇವೆ, ಇದು ನ್ಯಾಯವಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಆ ಭಾಗದಲ್ಲಿರತಕ್ಕ ನಾಲ್ಕು ಡಿಸ್ಟ್ರಿಕ್ಟಿನಿಂದ ಎಷ್ಟು ಸಿಕ್ಕಬಹುದು ಎಂಬುದನ್ನು ಡಿಸ್ಟ್ರಿಕ್ಟ್‌ವಾರ್ ಸರ್ವೇ ಮಾಡಿ, ಈ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸನ್ನು ತಂದಿದ್ದರೆ ಚೆನ್ನಾಗಿತ್ತು ಎಂದು ಹೇಳತ್ತೇನೆ. ರೈತ ಬಹಳ ಕಷ್ಟಪಟ್ಟು, ಆತನ ಹೆಂಡತಿ ಮಕ್ಕಳು ದುಡಿದು 3½ ಸಾವಿರ ರೂಪಾಯಿ ಗಳಿಗೆ ಮೇಲ್ಪಟ್ಟು ಆದಾಯ ಬಂದರೆ ಅಂತಹವರು ಆದಾಯ ತೆರಿಗೆ ಕೊಡಬೇಕೆಂದು ಹೇಳಿದ್ದೀರಿ. ಅದೇ ಅಧಿಕಾರವರ್ಗದವರಿಗೆ 3½ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಬರತಕ್ಕವರಿಗೆ ಏನು ತೆರಿಗೆ ಎನ್ನುವುದನ್ನು ತಾವು ವಿವರಣೆಯಲ್ಲಿ ಕೊಡಬಹುದಾಗಿತ್ತು. ಅವ ರೆಲ್ಲಾ ತಪ್ಪಿಸಿಕೊಂಡಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಜನರಲ್ ಇನ್‌ಕಂ ಟ್ಯಾಕ್ಸ್ ನಲ್ಲಿ 3,000 ರೂಪಾಯಿಗೆ ಮೇಲ್ಪಟ್ಟು ಬರತಕ್ಕವರೆಲ್ಲ ರಿಗೂ ಹಾಕಿದ್ದಾರೆ. ತಾವು ಸ್ವಲ್ಪ ಓದಿನೋಡಿ.

ಶ್ರೀ ಎನ್. ಜಿ. ನರಸಿಂಹೇಗೌಡ.—ಇರಬಹುದು ಮಂತ್ರಿಗಳ 1000, 1,500 ರೂಪಾಯಿ ಟಿ. ಎ. ತೆಗೆದುಕೊಳ್ಳುತ್ತೀರಿ, ಅದೂ ಸೇರುತ್ತದೆಯೇ ?

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆ ಗಳ ಮಂತ್ರಿಗಳು).—ಪೆಟ್ರೋಲ್ ಬಂಕಿನವರು ಕೊಡುತ್ತಾರೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಎಲ್ಲಾ ಖರ್ಚು ಕಳೆಯುತ್ತೀರಿ. ಆದರೆ ರೈತನ ಕಷ್ಟ ಏನು ಎಂಬು ದನ್ನು ವಿವರಣೆ ಮಾಡದೆ ರೈತರ ಮೇಲೆ ಆದಾಯ ತೆರಿಗೆ ಹಾಕಬೇಕೆಂದು ಹೇಳುತ್ತೀರಿ.

ಶ್ರೀ ಟಿ. ಮರಿಯಪ್ಪ.—ವೆಂಕಟೇಗೌಡರ ಭಾಷಣ ನಾವು ಕೇಳಲಿಲ್ಲ. ಈಗ ಮಾಡಿರತಕ್ಕ ಪ್ರಕಾರ 3 ಕಾಸೂ ಬರುವುದಿಲ್ಲ. ಎಲ್ಲಾ ಎಕ್ಸಂಪ್ಟ್ ಆಗುತ್ತದೆ. ಒಂದು ಕಡೆ ಲಿಬರಲ್ ಆಗಿರಿ ಎಂದು ಹೇಳುತ್ತೀರಿ ಮತ್ತೊಂದು ಕಡೆ ದುಡ್ಡು ಬರುವುದಿಲ್ಲ ಎಂದು ಹೇಳು ತ್ತೀರಿ. ಹೀಗಾದರೆ ಹೇಗೆ ?

ಶ್ರೀ ಎನ್. ಜಿ. ನರಸಿಂಹೇಗೌಡ.—ನಾನು ಜನರಲ್ ಆಗಿ ವಿರೋಧಿಸುತ್ತಾ ನಮ್ಮ ಮುಂದೆ ಇರತಕ್ಕ ಈ ಬಿಲ್ಲನ್ನು ಇನ್ನೂ ಕೆಲವು ದಿವಸ ತಳ್ಳಿಹಾಕಿ ಅನಂತರ ತನ್ನಿ ಎಂದು ಸಲಹೆ ಮಾಡುತ್ತೇನೆ.

*ಡಾ॥ ಸರ್ದಾರ್ ಬಿ. ಕೆ. ನಾಗೂರ್.—ಈ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಬಹಳ ಹೆಚ್ಚು ಜೋರಿ ನಿಂದ ಮಾತನಾಡುವುದರಿಂದ ಕೆಲವು ಜನರಿಗೆ ರಿಪೋರ್ಟ್ ಮಾಡಿಕೊಳ್ಳುವುದಕ್ಕೆ ಆಗಲಿಲ್ಲ ಮತ್ತು ಇಲ್ಲಿ ಒಳಗಡೆ ಇರತಕ್ಕವರಿಗೆ ಸರಿಯಾಗಿ ಕೇಳುವುದಿಲ್ಲ ಎಂದು ಹೇಳಿದ ಮೇಲೆ ಇವತ್ತು ನಾನು ನಿಧಾನವಾಗಿ

(ಡಾ॥ ಸರ್ದಾರ್ ಬಿ. ಕೆ. ನಾಗೂರ್)

ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇನೆ. ಈ ಕರಕರಾರಣೆ ಅಧಿಕಾರಿಗಳಿಗೆ ಒಕ್ಕಲುತನ ಉತ್ಪನ್ನದ ಮೊತ್ತವನ್ನು ಗೊತ್ತುಪಡಿಸುವ ವಿಷಯದಲ್ಲಿ ಸಂಪೂರ್ಣ ಅಧಿಕಾರ ಕೊಡಲಾಗಿದೆ ಎಂಬುದನ್ನೂ ನಮೂದಿಸಿದ್ದೀರಿ. ಈ ಅಧಿಕಾರಿಗಳಿಗೆ ಹೊಸದಾಗಿ ಲಂಚ ತೆಗೆದುಕೊಳ್ಳಲಿಕ್ಕೆ ನಿಮ್ಮ ಭಾಷೆಯಲ್ಲಿ ಹೇಳುವುದಾದರೆ ಸಂಭಾವನೆ ಮಾಡಬೇಕು ಎಂದರೆ ಸಂಪೂರ್ಣ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಇಲ್ಲಿ ಇದ್ದಂಥ ಎಷ್ಟೋ ಜನಮಂತ್ರಿವರ್ಯರು ಹೆಚ್ಚು ಜಮೀನ್‌ದಾರರೇ ಇದ್ದಾರೆ. ಅದರಲ್ಲೂ ಹಿಂದಿನ ಮಂತ್ರಿವರ್ಯರಾಗಿದ್ದ ಶ್ರೀಮಾನ್ ಚನ್ನಬಸಪ್ಪನವರಂಥವರು ದೊಡ್ಡ ಜಮೀನ್‌ದಾರರು ಆಗಿದ್ದಾರೆ. ಅವರು ಒಂದು ವ್ಯವಸ್ಥಿತ ರೀತಿಯಲ್ಲಿ ಇದುವರೆಗೂ ತಮ್ಮ ಕಾರ್ಯವನ್ನು ಮಾಡಿಕೊಳ್ಳುತ್ತಾ ಇದ್ದಾರೆಯೋ, ಅವರೂ ಕೂಡ ಲೆಕ್ಕಾಚಾರ ಇಡುತ್ತಾರೆಯೋ ಇಲ್ಲವೋ, ಎಷ್ಟು ಹಣ ಬರುತ್ತದೆಯೋ ಏನೋ ಎಂದು ಅನ್ನಲಿಕ್ಕೆ ಏನು ಕಾರಣವೋ ನನಗಂತೂ ತಿಳಿಯುವದಾಗಲಿಲ್ಲ. ಮೈಸೂರಿನವರು ಮುಂದುವರಿದವರು, ಹೆಚ್ಚಿನ ಜನ ಪ್ಯಾಣೀರು ಇರಬೇಕು, ಇರುತ್ತಾರೆ ಎಂದು ಒಂದು ತರಹದ ಅಂಜಿಕೆಯ ಭಾವನೆಯಿಂದ ಹೇಳುತ್ತಾ ಇದ್ದೇನೆ. ಮೈಸೂರಿನವರು ಮಾದರೀ ಮೈಸೂರಿನವರು, ಮುಂದುವರಿದ ಮೈಸೂರಿನವರು. ನಮಗೆ ಸಂತೋಷ. ಅಂತಹದರಲ್ಲಿ ಲೆಕ್ಕಪತ್ರ ಇಟ್ಟಿಲ್ಲ ಎಂದರೆ ನಮಗೆ ಸಂಶಯ ಬರುತ್ತದೆ. ಹೀಗಿರುವ ಕಾಲದಲ್ಲಿ ಒಂದು ಯೋಚನೆ ಮಾಡಿ ಯಾವುದನ್ನು ಬಿಟ್ಟಿದ್ದಾರೋ ಅದನ್ನು ಕೇಳುತ್ತಾ ಇದ್ದಾರೆ. ಎಲ್ಲ ತೆರಿಗೆ ಕೊಡುವವನೂ ರೈತ, ಜಪರ್ ಸಂಟಿಮೆಂಟ್‌ನಂತೆ, ಯಾವ ತೆರಿಗೆ ಹಾಕಿದರೂ ರೈತನ ಮೇಲೆ ಬೀಳುತ್ತದೆ. ಅದರಲ್ಲೂ ಇವತ್ತಿನ ದಿನ ರೈತರ ಒಕ್ಕಲುತನದ ಉತ್ಪನ್ನದ ಮೇಲೆ ಕರಗಳನ್ನು ಹೇರುತ್ತಾ ಇರುವುದು ನಿಜವಾಗಿಯೂ ವಿಷಾದದಿಂದ ಹೇಳಬೇಕಾಗಿದೆ, ಮಹಾತ್ಮಾ ಗಾಂಧಿಯವರು ಇದನ್ನು ರೈತನ ರಾಜ್ಯ, ರಾಮರಾಜ್ಯ ಎಂದು ಹೇಳುತ್ತಾ ಇದ್ದರು. ಅವರು ಈ ಕರ ಕೊಡುವಂಥ ಈ ಕಾಲದಲ್ಲಿ ಜೀವಂತವಾಗಿದ್ದಿದ್ದರೆ ಅವರು ಕಣ್ಣೀರಿನಲ್ಲಿ ಮುಳುಗುತ್ತಾ ಇದ್ದರು ಎಂದು ವಿಷಾದದಿಂದ ಹೇಳುತ್ತೇನೆ. ಯಾವುದನ್ನು ರೈತರ ರಾಜ್ಯ ಎಂದು ಹೇಳಿಕೊಳ್ಳುತ್ತಾ ಇದ್ದೀರೋ ಅಲ್ಲೇ ಈ ರೀತಿ ರೈತರ ಉತ್ಪನ್ನದ ಮೇಲೆ ತೆರಿಗೆ ಹಾಕುವುದು ಸರಿಯಾದ ಮಾರ್ಗವಲ್ಲ. ಇದರಲ್ಲಿ ಕೂಡ ಏಳನೆಯ ಕಲಮ್ಮಿನಲ್ಲಿರುವ "as he may determine" ಎಂಬ ಮಾತನ್ನು ತೆಗೆದುಹಾಕಿ "as may be prescribed" ಎಂಬ ಪದಗಳನ್ನು ಹಾಕಬೇಕೆಂದು ನಾನು ಹಣಕಾಸಿನ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

ಇನ್ನು "ನೀವು ಏನಾದರೂ ಹೇಳಿಕೊಳ್ಳಿ" ಎನ್ನುವ ವಿಚಾರವನ್ನು ಮಾನ್ಯ ಮಂತ್ರಿಗಳವರು ದಯಮಾಡಿ ತೆಗೆದು ಹಾಕಬೇಕು. ವಿರೋಧ ಪಕ್ಷದ ಯೋಗ್ಯವಾದ ವಿಚಾರಗಳನ್ನೂ ನ್ಯಾಯ ದೃಷ್ಟಿಯಿಂದ ತುಲನಾತ್ಮಕ ದೃಷ್ಟಿಯಿಂದ ನೋಡಿ ತಿಳಿದುಕೊಂಡರೆ ಅದರಿಂದ ಸರ್ಕಾರಕ್ಕೆ ಹಿತವಾಗುತ್ತಿತ್ತು. ನಮಗೆ ಮಾತನಾಡಲು ಹೆಚ್ಚು ಅವಕಾಶವನ್ನು ಮಾಡಿಕೊಡಬೇಕಾಗಿತ್ತು. ಅದನ್ನೆಲ್ಲ ಬಿಟ್ಟು ಈ ವಿಧೇಯಕವನ್ನು ಇವೊತ್ತೇ ಮುಗಿಸಬೇಕು ಎನ್ನುವ ಭಾವನೆಯನ್ನು ತೋರಬಾರದು ಎಂದು ನಾನು ಕಳಕಳಿಯಿಂದ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾತನಾಡಿಕೊಳ್ಳುತ್ತೇನೆ.

ಬೇರೆ ಬೇರೆ ಪಕ್ಷಗಳಲ್ಲಿ ಜನಗಳು ಮಾತನಾಡಿದ್ದಾರೆ. ತೊಗಲಕ್ ರಾಜ್ಯ, ರಾವಣ ರಾಜ್ಯ, ಈ ರೀತಿಯಾಗಿ ಹೇಳಿದ್ದಾರೆ. ನೀವು ಏನೇ ಮಾತನಾಡಿರಿ, ನಾವು ಬೇಕಾದ್ದನ್ನು ಮಾಡಿಕೊಳ್ಳುತ್ತೇವೆ ಎನ್ನುವ ಭಾವನೆ ಸರ್ಕಾರದವರಲ್ಲಿ ಬರಬಾರದು. ರಾವಣ ರಾಜ್ಯ ಎಂದು ತಿಳಿದುಕೊಂಡು ಮಾತನಾಡಿದ್ದಾರೆ. ನನಗೆ ಕೂಡ ಸಂಶಯ ಬರುತ್ತದೆ. ರಾವಣ ಚಲೋ ಇದ್ದ. ಅಂದ ಮೇಲೆ ಬರೀ ರಾವಣ ರಾಜ್ಯ ಎಂದು ಹೇಳಲಿಕ್ಕೆ ಬರುವುದಿಲ್ಲ. ನೀವು ಎಷ್ಟೋ ಮಾತನಾಡಿ ಹಿಂದುಗಡೆ ನಾವು ಬೇಕಾದ್ದನ್ನು ಮಾಡುತ್ತೇವೆ ಎನ್ನಬೇಡಿ. ರಾವಣನಿಗೆ ಹತ್ತು ತಲೆ ಇಪ್ಪತ್ತು ಕೈ ಇದ್ದರೆ, ಈ ಸಭೆಯಲ್ಲಿ 150 ತಲೆಗಳಿವೆ, 300 ಕೈಗಳಿವೆ. ಅವುಗಳ ಉಪಯೋಗ ಸದುಪಯೋಗವಾಗಲಿ. ಆ ರಾವಣನಿಗೆ ಆತ ಚಲೋ ಇದ್ದ ಎಂದು ಶುಭ ಹೇಗೆ ಬರುತ್ತಿದೆಯೋ ಅದರಂತೆ ನಮ್ಮ ಕರ್ಣಾಟಕ ಮಂತ್ರಿಮಂಡಳಕ್ಕೆ ಶುಭ ಹೆಸರು ಬರಲಿ, ಯೋಗ್ಯವಾದ ಹೆಸರು ಬರಲಿ. ಬಡಜನ, ರೈತರು, ಒಕ್ಕಲಿಗರು, ಕೂಲಿಕಾರರು, ಇವರೆಲ್ಲ ಮಂತ್ರಿ ಮಂಡಲದವರ ಪ್ರೀತಿ ವಿಶ್ವಾಸಗಳನ್ನು ಕಾಣುವಂತೆ 12-13 ವರ್ಷಗಳ ಹಿಂದಿನ ಭಾವನೆ ಬರಲಿ. ತಾವುಗಳು ಹಳ್ಳಿಗಳಿಗೆ ಹೋಗಿ ನೋಡಿಕೊಂಡು ಬನ್ನಿ. ನನಗೆ ಇಲ್ಲಿ ಅದನ್ನು ಹೇಳಲಿಕ್ಕೆ ಸಹ ಸ್ವಲ್ಪ ಭಯವಾಗುತ್ತಿದೆ. ನಮ್ಮ ಮಂತ್ರಿಮಂಡಲ ಹೆಚ್ಚು ಜನಪ್ರಿಯವಾಗಬೇಕು. ನಮಗೆ ಬಂದಿರುವ ಸ್ವಾತಂತ್ರ್ಯವು ಉಳಿದು ಜನಗಳಿಗೆ ಮಾರ್ಗದರ್ಶಕವಾಗುವಂತೆ ಮಾಡಬೇಕು. Agricultural Income-Tax ಸಂಪೂರ್ಣವಾಗಿ ತೆಗೆದುಹಾಕಿ. ಇದರಿಂದ ಸಾಕಷ್ಟು ವರಮಾನ ಬರುವದಿಲ್ಲ. 40-50 ಲಕ್ಷ ರೂಪಾಯಿ ಬಂದರೆ ಸಾಕಷ್ಟಾಗುತ್ತದೆಯೇ? ಇದರ ಲೆಕ್ಕಗಳನ್ನಿಡುವುದಕ್ಕೆ ಕಾಲದಲ್ಲಿ ಇದೂ ಒಂದು ಹೊಸ ಇಲಾಖೆಯಾಗಬೇಕಾಗುತ್ತದೆ. ಮುಂದೆ ಈ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೆ ಲಂಚತಿನ್ನಲಿಕ್ಕೆ ಒಂದು ಡಿಪಾರ್ಟ್‌ಮೆಂಟ್ ಆಗುತ್ತದೆಯೇ ವಿನಾ ಇದರಿಂದ ಯಾವ ಆದಾಯವೂ ಬರುವುದಿಲ್ಲ. ರೈತನು ಸರಿಯಾಗಿ ತನ್ನ ರಿಟರ್ನ್ ಕೊಡದೆ ಇದ್ದರೆ, ಅವನ ಮೇಲೆ ಕ್ರಮ ತೆಗೆದುಕೊಳ್ಳಲು ಕೆಲವು ಅಧಿಕಾರಗಳನ್ನು ಈ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ವಾರೆಂಟ್ ಕೊಟ್ಟು, ನೋಟೀಸ್ ಕೊಟ್ಟು ಅವನನ್ನು ತಮ್ಮ ಕಚೇರಿಗೆ ಕರೆಯಿಸಿಕೊಳ್ಳಬಹುದು ಎಂದು ಅಧಿಕಾರವನ್ನು ಕೊಟ್ಟಿದ್ದಾರೆ. ರೈತನು ರಾಷ್ಟ್ರದ ಬೆನ್ನೆಲುಬು, ಇದು ರೈತನ ರಾಜ್ಯ ಎಂದು ಹೇಳಿಕೊಳ್ಳುತ್ತೀರಿ.........

ಶ್ರೀ ಎಂ. ಕೆ. ಸರುಪೂರ್ (ಇಂಡಿ).—ಸ್ವಾಮಿ, ಇದು ಜನರಲ್ ಡಿಸ್ಕಷನ್ ಅಲ್ಲ, ನಮ್ಮ ಮುಂದಿರುವ ಬಿಲ್ಲಿನ ಮೇಲೆ ಮಾತ್ರ ಮಾತನಾಡಬೇಕು. ಈ ರೀತಿ ಮಾತನಾಡಬಾರದು.

ಡಾ॥ ಸರ್ದಾರ್ ಬಿ. ಕೆ. ನಾಗೂರ್.—ನಾನು ಜನರಲ್ ಡಿಸ್ಕಷನ್ ಮಾಡುತ್ತಿಲ್ಲ. ಅವರಿಗೆ ಸರಿಯಾದ ಅರ್ಥವಾಗಿಲ್ಲ. ನನ್ನಲ್ಲೇನಾದರೂ ತಪ್ಪಿದ್ದರೆ ಅದನ್ನು ತಿದ್ದಿಕೊಳ್ಳುವುದಕ್ಕೆ ತಯಾರಿದ್ದೇನೆ. ಇದು ಜನರಲ್ ಡಿಸ್ಕಷನ್ ಅಲ್ಲ. ಯಾವಾಗಲೂ ಜನರಲ್ ಡಿಸ್ಕಷನ್‌ನಲ್ಲಿ ಇರುವವರು ಹಾಗೆ ಹೇಳುತ್ತಾರೆ ಅಷ್ಟೆ. ನನಗೆ ಕೊಟ್ಟಿರುವುದು ಹತ್ತು ನಿಮಿಷಗಳ ಕಾಲ ಇದೆ. ಬೇರೆ ಕಡೆ ನನಗೆ ಹೇಳಿದ್ದರೆ ನಾನು ಉತ್ತರವನ್ನು ಕೊಡುತ್ತಿದ್ದೆ.

ಇನ್ನು ಹತ್ತೊಂಬತ್ತನೆಯ ಕಲಮಿನಲ್ಲಿ ಹಾಗೂ 38ನೆಯ ಕಲಮಿನಲ್ಲಿ ಕರಾಕರಣೆಯ ಅಧಿಕಾರಿಗೆ ರೈತನನ್ನು ತನ್ನ ಕಚೇರಿಗೆ ಕರೆಯಿಸಿಕೊಳ್ಳುವ ಅಧಿ

ಕಾರವನ್ನು ಕೊಡಲಾಗಿದೆ. ಈ ಅಧಿಕಾರದಿಂದ ನಿಜವಾಗಿಯೂ ರೈತರಿಗೆ ತುಂಬ ಅನ್ಯಾಯವಾಗುತ್ತದೆ. ಇದನ್ನು ಮಾತ್ರ ದಯವಿಟ್ಟು ತೆಗೆದುಹಾಕಬೇಕೆಂದು ನಾನು ಅವರಿಗೆ ಕೇಳಿಕೊಳ್ಳುತ್ತಿದ್ದೇನೆ.

ಇನ್ನು ಈ ವಿಷಯದಲ್ಲಿ ಹೆಚ್ಚು ಮಾತನಾಡಲಿಕ್ಕೆ ನಾನು ಅಪೇಕ್ಷೆಪಡುವುದಿಲ್ಲ. ಏಕೆಂದರೆ ನಾನು ಒಂದು ವಿಚಾರ ಮಾಡಿಕೊಂಡಿದ್ದೇನೆ. ಹೋದಸಲವೇ ವಿನಂತಿ ಮಾಡಿಕೊಂಡಿದ್ದೇನೆ. ಯೋಗ್ಯ ದೃಷ್ಟಿಯಿಂದ ಮಾತನಾಡಬೇಕು, ಸುಮ್ಮನೆ ಮಾತನಾಡಿಕೊಂಡು ನಿಲ್ಲುವ ಹಾಗಿಲ್ಲ. ಏಕೆಂದರೆ, ನಮ್ಮ ಗೆಳೆಯರು ಸುರಪುರ ಮಲ್ಲಪ್ಪನವರು ಹೇಳಿದ ಹಾಗೆ ಸುಮ್ಮನೆ ವೃಥಾ ನಮ್ಮ ಹೆಸರು ವರ್ತಮಾನ ಪತ್ರಿಕೆಗಳಲ್ಲಿ ಬರಲಿ ಎನ್ನುವ ಅಭಿಪ್ರಾಯವಿಲ್ಲ. ಕೆಲವು ಯೋಗ್ಯವಾದ ವಿಚಾರಗಳನ್ನೂ ನ್ಯಾಯವಾದ ವಿಚಾರಗಳನ್ನೂ ಹೇಳಬೇಕು; ನಮ್ಮ ಸರ್ಕಾರದವರು ಬಲಭಾಗದಲ್ಲಿದ್ದರೂ ನಾವು ಎಡಭಾಗದಲ್ಲಿದ್ದರೂ ನಾನು ಕರ್ಣಾಟಕ ರಾಜ್ಯದ ವಿಧಾನಸಭೆಯ ಸದಸ್ಯ ಎಂದು ಹೇಳಿಕೊಳ್ಳಬಲ್ಲೆ. ಆರೀತಿ ಸಕಾರಣವಾಗಿ, ವಿಚಾರ ತಿಳಿದು ಮಾತನಾಡಿದರೆ ಜನಗಳಿಗೆಲ್ಲ ಗೊತ್ತಾಗುತ್ತದೆ. ನಾನು ಇನ್ನು ಹೆಚ್ಚು ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ. ರೈತರ ಬಗ್ಗೆ ಈಗ ಇರತಕ್ಕ ಟ್ಯಾಕ್ಸನ್ನು ಸಂಪೂರ್ಣವಾಗಿ ತೆಗೆದುಹಾಕಿ ಬಿಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಾಕಲಿಕ್ಕೆ ಬೇರೆ ಮಾರ್ಗವಿದೆ, ಬೇರೆ ಟ್ಯಾಕ್ಸ್ ಇದೆ. ಟ್ಯಾಕ್ಸ್ ಹಾಕದೆ ಯಾವ ಸರ್ಕಾರವೂ ಇರುವುದಿಲ್ಲ. ಕರ ಹಾಕಲಿಕ್ಕೆ ಒಂದು ಅಳತೆ ಇದೆ ಎಂದು ಹೇಳುತ್ತಿದ್ದೇನೆ. ಬೇರೆ ರೀತಿಯಿಂದ ಎಂದರೆ ಮನರಂಜನೆಕರ, ಶ್ರೀಮಂತರು ಉಪಯೋಗಮಾಡಿಕೊಳ್ಳುವುದಕ್ಕೋಸ್ಕರ ಇರುವ ಅಪವ್ಯಯ ವಸ್ತುಗಳು, ಇಂಥವುಗಳ ಮೇಲೆಲ್ಲ ಹೆಚ್ಚು ಕರ ಹಾಕಿದರೆ ಯಾರಿಗೂ ಬೇಸರವಾಗುವದಿಲ್ಲ. ಬಡ ರೈತರ ಮೇಲೆ ಈ ರೀತಿಯಾಗಿ ಅನ್ಯಾಯ ಕರಗಳನ್ನು ಹೇರುವುದು ಸ್ವತಂತ್ರ ಕರ್ಣಾಟಕಕ್ಕೆ ಅಷ್ಟು ಭೂಷಣವಲ್ಲ. ಕನ್ನಡ ನಾಡಿನಲ್ಲಿ ಹೆಚ್ಚಿಗೆ ಜನ ಅಂದರೆ ನೂರಕ್ಕೆ ಎಂಭತ್ತು ಜನ ರೈತಾವಳಿಂದ ಜೀವನ ಮಾಡುತ್ತಿದ್ದಾರೆ. ನಾಳೆ ಇವರು ಎಲ್ಲಿಯಾದರೂ ಹೋದರೆ ಏನು ಹೇಳುತ್ತಾರೆ ಎಂಬ ಪ್ರಶ್ನೆ ಬರುತ್ತದೆ. ನಾವು ಹೀಗೆ ಇಂಥಿಂಥ ಯೋಗ್ಯ ಕಾನೂನುಗಳನ್ನು ಮಾಡಿದೇವೆ ಎಂದು ಭರವಸೆಯನ್ನು ಕೊಟ್ಟಿದ್ದರು. ಎಲ್ಲಿಯಾದರೂ ಭಾಷಣಕ್ಕೆ ಹೋದಾಗ ಅಂಥ ಕಷ್ಟ ಜನರ ಕೇಳಿದರೆ ಯಾವ ರೀತಿ ಹೇಳುತ್ತಾರೆ? ರೈತರಿಗೆ, ಒಕ್ಕಲಿಗರಿಗೆ, ನಿಮಗೆ ಯೋಗ್ಯವಾದ, ನ್ಯಾಯವಾದ ರೀತಿ ಇರತಕ್ಕ ಕಾನೂನುಗಳನ್ನು ಮಾಡಿದ್ದೇವೆಂದು ಹೇಳುವುದಕ್ಕಾದರೂ ಅವಕಾಶವನ್ನಿಟ್ಟುಕೊಳ್ಳಬೇಕು. ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಸಂಪೂರ್ಣವಾಗಿ ಹೋಗಬೇಕು.

ಈ ಬಿಲ್ಲಿನಲ್ಲಿ ಅರಸಿನ, ಕೊತ್ತಂಬರಿ, ತೆಂಗಿನ ಕಾಯಿ, ಮೆಣಸು, ಶುಂಠಿ ಇವುಗಳನ್ನೆಲ್ಲ ಸೇರಿಸಿದ್ದಾರೆ. ನಮ್ಮ ಕಡೆ ಲಗ್ನದೊಳಗೆ ಅರಸಿನ ಹಚ್ಚುವ ಪದ್ಧತಿ ಇದೆ. ಪವಿತ್ರವಾಗಿರತಕ್ಕ ಜೀವನದ ಜೊತೆಗಾರ್ತಿಯನ್ನು ಕೈ ಹಿಡಿಯುವಾಗ ದೇವರಿಂದ ಆಶೀರ್ವಾದ ಪಡೆಯುವ ಕಾಲದಲ್ಲಿ ಅರಸಿನ ಹಚ್ಚುವ ಪದ್ಧತಿ ನಮ್ಮಲ್ಲಿದೆ. ಈ ಕಡೆ ಲಗ್ನದಲ್ಲಿ ಅರಸಿನ ಹಚ್ಚಿಕೊಳ್ಳುತ್ತಾರೆಯೋ ಇಲ್ಲವೋ ಗೊತ್ತಿಲ್ಲ. ಅಂಥ ಶ್ರೇಷ್ಠವಾದ ಅರಸಿನಕ್ಕೂ ಕೂಡ ಸುಂಕ ಬಂದಿದೆ. ತೆಂಗಿನಕಾಯಿ, ಮೆಣಸು, ಶುಂಠಿ, ಕೊತ್ತಂಬರಿ ಇವುಗಳಿಗೆಲ್ಲ ಕರ ಬಿದ್ದಿರುವಾಗ ಮಾನ್ಯ ಮಂತ್ರಿಗಳಾದ ಮರಿಯಪ್ಪನವರ ಕಣ್ಣಿಗೆ ಸಾಸಿವೆ, ಜೀರಿಗೆ ಇವು ಬಿದ್ದಿಲ್ಲ. ಇದಕ್ಕಾಗಿ ಧನ್ಯವಾದಗಳನ್ನರ್ಪಿಸಬೇಕಾಗಿದೆ. ಇನ್ನು ನಾನು ಹೆಚ್ಚು ಮಾತನಾಡುವುದಿಲ್ಲ. ಅಧ್ಯಕ್ಷರಿಂದ ಮೊದಲ ಗಂಟೆಯಾಯಿತು. ಎರಡನೆಯ ಸಲ ಗಂಟೆ ಬಡಿಸಿಕೊಳ್ಳದೆ, ಅದಕ್ಕೆ ಪೂರ್ವದಲ್ಲಿಯೇ ಮತ್ತೊಮ್ಮೆ ಮಾನ್ಯ ಮರಿಯಪ್ಪನವರಲ್ಲಿ ಸಂಪೂರ್ಣವಾಗಿ ಟ್ಯಾಕ್ಸ್ ತೆಗೆದುಹಾಕಬೇಕೆಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ಮಾನ್ಯ ಮಂತ್ರಿಗಳು ವ್ಯವಸಾಯಗಾರರ ವಂಶದಲ್ಲಿ ಹುಟ್ಟಿ ಹಳ್ಳಿಗಳಲ್ಲಿ ಬೆಳೆದು ವ್ಯವಸಾಯಗಾರರ ಮೇಲೆ ಇವರು ಇಷ್ಟು ತೀವ್ರವಾಗಿರುವುದನ್ನು ನೋಡಿದರೆ ತುಂಬ ವ್ಯಥೆಯಾಗುತ್ತದೆ. ಇವರು ಹಿಂದೆ ಮಂತ್ರಿಗಳಾಗಿದ್ದಾಗ ಕೆಂಗೇರಿ ಬಳಿ ಜಮೀನನ್ನು ಮಾಡಿದ್ದರು ಎಂದು ಕೇಳಿದ್ದೇನೆ. ಅದರಲ್ಲಿ ಎಷ್ಟರಮಟ್ಟಿಗೆ ಆದಾಯ ಬಂತೋ ಗೊತ್ತಿಲ್ಲ. ಅಂತೂ ಅದನು ಮಾರಿಬಿಟ್ಟರು. ಇವರು ವ್ಯವಸಾಯಗಾರರ ವಂಶದಲ್ಲಿ ಹುಟ್ಟಿ ತಮ್ಮ ವಿದ್ಯಾಭ್ಯಾಸದ ಕಾಲದಲ್ಲಿ ತಮ್ಮ ತಂದೆ ತಾಯಿಗಳು ದುಡ್ಡನ್ನು ಒದಗಿಸಬೇಕಾಗಿದ್ದರೆ ಏನು ಕಷ್ಟಪಡುತ್ತಿದ್ದರು, ಯಾವ ರೀತಿ ಒದ್ದಾಡುತ್ತಿದ್ದರು ಎಂದು ತಿಳಿದಿರುತ್ತದೆ. ಇಷ್ಟೆಲ್ಲ ತೊಂದರೆಯಲ್ಲಿ ಇವರು ವಿದ್ಯಾಭ್ಯಾಸ ಮಾಡಿ, ಲಾಯರಾಗಿದ್ದು ಈಗ ಮಂತ್ರಿಗಳಾಗಿದ್ದಾರೆ. ಮಾರಿ ಕಣ್ಣು ಹೋತನ ಮೇಲೆ ಎಂದ ಹಾಗೆ ಇವರು ವ್ಯವಸಾಯಗಾರರ ಮೇಲೆ ಇಂಥ ಕಾನೂನನ್ನು ತರಲು ಹೊರಟಿದ್ದಾರೆ. ಸಣ್ಣಪುಟ್ಟ ಜಮೀನ್ದಾರರ ಮೇಲೆಯೂ ಕೂಡ ಈ ರೀತಿ ಒಂದು ತೆರಿಗೆ ಹಾಕುತ್ತಿರುವುದನ್ನು ನೋಡಿದರೆ ತುಂಬ ವಿಷಾದವಾಗುತ್ತದೆ.

ತೆಂಗು, ಕಾಫಿ ಮೊದಲಾದವುಗಳಿಗೂ ತೆರಿಗೆಯನ್ನು ಹಾಕಿದ್ದಾರೆ. ಒಂದು ತೆಂಗಿನ ಮೊಳಕೆ ಆಗಬೇಕಾದರೆ ಕನಿಷ್ಠ ಆರು ತಿಂಗಳು ಆಗಬೇಕಾಗಿದೆ. ಫಸಲು ಬರಬೇಕಾದರೆ ಹತ್ತು ವರ್ಷ ಬೇಕು. ಸ್ವಲ್ಪ ದಿವಸಗಳ ಕಾಲಬಿಟ್ಟರೆ ಕೆಟ್ಟು ಹೋಗುತ್ತದೆ. ಈಗಾಗಲೇ ಸೇಲ್ಸ್ ಟ್ಯಾಕ್ಸ್ ಹಾಕಿದ್ದಾರೆ. ಇದರ ಜೊತೆಗೆ ಈ ತೆರಿಗೆಗಳನ್ನು ಹಾಕುತ್ತಿರುವುದನ್ನು ನೋಡಿದರೆ ತುಂಬ ಅನ್ಯಾಯ. ಕಾಫಿ ಬೀಜಕ್ಕೆ ವಿನಾಯಿತಿ ಕೊಟ್ಟಿಲ್ಲ. ಇಪ್ಪತ್ತೈದು ಎಕರೆಯ ವಿನಾಯಿತಿಯನ್ನು ಕೊಡಬೇಕಾದ್ದು ಧರ್ಮ. ವ್ಯವಸಾಯ ಉತ್ಪತ್ತಿ ಲಾಯರುಗಳು, ಅಧಿಕಾರಿಗಳು, ಶ್ರೀಮಂತರು, ಅಥವ ವ್ಯಾಪಾರಸ್ಥರು ಇವರುಗಳಿಗಿರುಷ್ಟು ಸುಲಭವಲ್ಲ. ವ್ಯವಸಾಯಗಾರರ ಮಕ್ಕಳು, ಮರಿ ಕುಟುಂಬವೆಲ್ಲ ಶ್ರಮಪಟ್ಟು ಜಮೀನಿನಲ್ಲಿ ದುಡಿಯಬೇಕು. ಅಕಸ್ಮಾತ್ ಮಳೆ ಹೋದರೂ ಹೋಯಿತು. ಮಳೆ ಹೆಚ್ಚು ಬಂದರೂ ಹೋಯಿತು. ಬಿತ್ತನೆ ಕಾಲದಲ್ಲಿ ಮಳೆ ಇಲ್ಲದೆ ಹೋದರೆ ಅಥವ ಕಾಯಿ ಬಿಡುವ ಕಾಲದಲ್ಲಿ ಮಳೆ ಬಂದರೂ ಸಹ ಬೆಳೆ ಹೋಗುತ್ತದೆ. ಹಳ್ಳಿಗಾಡಿನ ವ್ಯವಸಾಯಗಾರರ ಮನೆಯಲ್ಲಿ, ನಿಮ್ಮ ಮನೆಗಳಲ್ಲಿರುವಂತೆ ಕುರ್ಚಿ, ಮೇಜು ಇಲ್ಲ. ಇತರ ಸಲಕರಣೆಗಳು ಇಲ್ಲ. ತಾವುಗಳು ಮನೆಗೆ ಹೋದ ತಕ್ಷಣ ಸೋಪು, ಟವಲು ಹಿಡಿದುಕೊಂಡು ಹಿಂದುಮುಂದು ಎಷ್ಟು ಜನರಿರುತ್ತಾರೆ! ಹಳ್ಳಿಯವರಿಗೆ ಇವೇನಾದರೂ ಇದೆಯೋ? ಎಲ್ಲಿಯಾದರೂ ಈ ರೀತಿ ಇರುವುದನ್ನು ನೋಡಿದ್ದೀರಾ? ಈ ಕನಿಕರವಾದರೂ ತಮಗೆ ಬರಬೇಡವೇ? ತಾವು ಇದನ್ನೆಲ್ಲ ಆಲೋಚನೆ ಮಾಡಬೇಕು. ಹಿಂದೆ ಕನ್ನಂಬಾಡಿ ಕಟ್ಟೆಯನ್ನು ಕಟ್ಟಿದಾಗ ಇವರ ಪಕ್ಷದವರೇ ಹೆಚ್ಚು ಜಮೀನು ಮಾಡಿಕೊಂಡಿರುವುದರಿಂದ ಭತ್ತಕ್ಕೆ ತೆರಿಗೆಯನ್ನು ಹಾಕದೆ ಬಿಟ್ಟಿದ್ದಾರೆಂದು ಕಾಣುತ್ತದೆ. ಆಲೂಗಡ್ಡೆ ಮುಂತಾದ ಬೆಳೆಗಳಿಗೆ ತೆರಿಗೆ ಹಾಕಿ

(ಶ್ರೀ ಕೆ. ಪಿ. ರೇವಣಸಿದ್ದಪ್ಪ)

ಬತ್ತ ಅಕ್ಕಿ ಮುಂತಾದುವನ್ನು ಬಿಟ್ಟಿದ್ದಾರೆ. ನಾಳೆ ಬೈಲಿನಲ್ಲಿ ಬತ್ತ ಬೆಳೆಯುವವರು ತಮ್ಮವರನೇಕರಿದ್ದಾರೆಂದು ಅದರ ಮೇಲೆ ತೆರಿಗೆ ಹಾಕವೆ ಬಿಟ್ಟಿದ್ದಾರೆಯೆ ? ಅಲ್ಲದೆ ಹಳ್ಳಿಗಳಲ್ಲಿ ವಿದ್ಯಾವಂತರಿರುವುದಿಲ್ಲ. ಅವರು ಲೆಕ್ಕ ಹೇಗಿಡುವುದು ? ಶ್ಯಾನುಭೋಗರ ಸಹಾಯವನ್ನು ಪಡೆಯಬೇಕು ಅಥವ ಗುಮಾಸ್ತರನ್ನಿಟ್ಟುಕೊಂಡು ಅವರಿಗೆ ಹಣ ಖರ್ಚು ಮಾಡಬೇಕು. ಈಗ ಕೆಲವರು ಮಂತ್ರಿಗಳಾಗಿದ್ದಾರೆ. ಅವರು ಮುಂದೆ ಲಾಯರುಗಳಾಗುತ್ತಾರೆ. ಆಗ ತಮಗೆ ಹೆಚ್ಚು ಕೇಸುಗಳು ಬರಲೆಂಬ ಉದ್ದೇಶದಿಂದ ಈರೀತಿ ಹಾಕುತ್ತಿದ್ದಾರೆಯೋ ಏನೋ ಎನಿಸುತ್ತದೆ.

*ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮಿ, ನಾನು ಈ ಮಸೂದೆಯನ್ನಲ್ಲ, ಈ ಮಸೂದೆಯ ಹಿಂದೆ ಅಡಗಿರುವ ತತ್ವವನ್ನೇ ವಿರೋಧಿಸಿ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ . . .

ಅಧ್ಯಕ್ಷರು.—ಈಗ ತತ್ವವನ್ನು ವಿರೋಧಮಾಡುವ ಹಾಗಿಲ್ಲ, ಹಿಂದೆಯೇ ತತ್ವವನ್ನು ಈ ಸಭೆ ಒಪ್ಪಿದೆ. ಈಗ ಸೆಲೆಕ್ಟ್ ಕಮಿಟಿಯಿಂದ ಬಂದಿರುವುದರ ವಿಚಾರದಲ್ಲಿ ಹೇಳಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸೆಲೆಕ್ಟ್ ಕಮಿಟಿಯಿಂದ ಇದು ಹೇಗೆ ಬರಬೇಕಾಗಿತ್ತೋ ಹಾಗೆ ಬಾರದೇಯಿರುವುದರಿಂದ ಇದರ ಮೂಲ ತತ್ವವನ್ನು ವಿರೋಧ ಮಾಡಬೇಕಾಗಿದೆ.

ಅಧ್ಯಕ್ಷರು.—ಈಗ ಮೂಲತತ್ವವನ್ನು ವಿರೋಧ ಮಾಡುವಹಾಗಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಯಾವ ಭೂಸುಧಾರಣೆಯಮಾತನ್ನು ಹತ್ತು ಇಪ್ಪತ್ತು ವರ್ಷಗಳಿಂದ ಹೇಳುತ್ತಿದ್ದಾರೋ ಅದನ್ನು ಜಾರಿಗೆ ತನ್ನಿ ಎಂದು ಜನರು ಕೇಳುವುದನ್ನು ಸ್ವಲ್ಪಕಾಲ ತಡೆಗಟ್ಟುವುದಕ್ಕಾಗಿಯೂ ಈ ಮಧ್ಯೆ ತಮಗೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿಯೂ ಈ ಮಸೂದೆಯನ್ನು ತಂದಿದ್ದಾರೆ. ಯಾವ ತೆರಿಗೆಯನ್ನು ಹಾಕಬೇಕಾದರೂ ಒಂದು ತತ್ವದ ಮೇಲೆ ಹಾಕಬೇಕು. ಜನರ ಐಶ್ವರ್ಯದಲ್ಲಿರುವ ಏರುಪೇರುಗಳನ್ನೂ ಅಂತರಗಳನ್ನೂ ತಡೆಗಟ್ಟಿ ಸಮಾನತೆಯನ್ನು ತರುವ ದೃಷ್ಟಿಯಿಂದ ಹಾಕಬೇಕು. ಬಡವರನ್ನು ಮೇಲಕ್ಕೆತ್ತಿ ಐಶ್ವರ್ಯವಂತರನ್ನು ಕಡಮೆಮಾಡಿ ಎಲ್ಲರಿಗೂ ಒಂದೇ ಸಮನಾದ ಸ್ಥಾನಮಾನ ಕಲ್ಪಿಸುವುದಕ್ಕಾಗಿ ಸುಂಕಗಳನ್ನು ಹಾಕಬೇಕು. ಸೆಲೆಕ್ಟ್ ಕಮಿಟಿಯಿಂದ ಬಂದಿರುವ ಶಿಫಾರಸುಗಳಲ್ಲಿ ಇದೇನಾದರೂ ಅಡಕವಾಗಿದೆಯೆ ಎಂದು ಮಂತ್ರಿಗಳನ್ನು ಕೇಳುತ್ತೇನೆ. ಶ್ರೀ ಮುಕ್ಕಣ್ಣಪ್ಪನವರು ಮಾತನಾಡುವಾಗ ಇದನ್ನು ಸರಿಯಾಗಿ ತಿಳಿಸಿದ್ದಾರೆಂದು ಕಾಣುತ್ತದೆ. ಭಾರಿ ಬಂಡವಾಳಗಾರರಿಗೆ ಅನುಕೂಲವಾಗುವುದಕ್ಕಾಗಿ ಬಡವರನ್ನು ಮತ್ತೂ ನೋಯಿಸಿ ಅವರಿಂದ ಹಣವನ್ನು ವಸೂಲುಮಾಡುವ ವಿಧಾನವಿದೆಯೇ ಹೊರತು ರಾಷ್ಟ್ರಕ್ಕೆ ಇದರಿಂದ ಯಾವರೀತಿಯ ಅನುಕೂಲವೂ ಆಗುವುದಿಲ್ಲವೆಂದು ಹೇಳುತ್ತೇನೆ. ಒಂದುವೇಳೆ ಈ ಸರ್ಕಾರ ಈ ಕಾನೂನನ್ನು ಈಗ ಮಾಡಿದರೂಕೂಡ ಬಹುಕಾಲ ಜನಾಭಿಪ್ರಾಯದ ಪ್ರವಾಹವನ್ನು ತಡೆಯುವುದಕ್ಕಾಗುವುದಿಲ್ಲ. ಮುಂದೆ ಬೇರೆಯವರು ಅಧಿಕಾರಕ್ಕೆ ಬಂದು ಇದನ್ನು ಸರಿಪಡಿಸುತ್ತಾರೆ. ಅನೇಕ ಜನ ಭಾರಿ ಜಮೀನ್ದಾರರು ಸುರಕ್ಷಿತವಾಗಿರುವುದಕ್ಕಾಗಿ ಅನುಕೂಲಮಾಡಿದ್ದಾರೆ. ಹೀಗೆ ತಮಗೆ ಅನುಕೂಲ ಮಾಡಿಕೊಟ್ಟಿದ್ದಾರೆಂದು ಅವರು ತಾತ್ಕಾಲಿಕವಾಗಿ ತಿಳಿದುಕೊಂಡರೂ ಇದು ಮುಂದೆ ಇರಲಾರದು. ನಾನು ತೆರಿಗೆಯನ್ನು ಹಾಕಬಾರದೆಂದು ಹೇಳುವುದಿಲ್ಲ. ಯಾರಿಗೆ ತೆರಿಗೆ ಹಾಕಬೇಕು, ಯಾರಿಂದ ತೆರಿಗೆ ವಸೂಲು ಮಾಡಬೇಕು ಎಂಬ ನೀತಿ ಇದರಲ್ಲಿ ಸರಿಯಾಗಿಲ್ಲ, ಕ್ರಮವಾಗಿಲ್ಲ. ಅಕ್ಕಪಕ್ಕದ ರಾಷ್ಟ್ರಗಳಲ್ಲಿ ಈಗಾಗಲೇ ಭೂ ಸುಧಾರಣೆ ಪ್ರಯತ್ನ ನಡೆಯುತ್ತಿದೆ. ಅದರಲ್ಲಿ 'ಸೀಲಿಂಗ್' ಕೂಡ ಬರುತ್ತದೆ. ಇದನ್ನು ಮಾಡಿದರೇ ಭೂ ಸುಧಾರಣೆ ಆಗುತ್ತದೆಯೇ ಹೊರತು ಬೇರೆ ಮಾರ್ಗವಿಲ್ಲ.

ಅಧ್ಯಕ್ಷರು.—'ಸೀಲಿಂಗ್' ಪ್ರಶ್ನೆ ಇದರಲ್ಲಿ ಹೇಗೆ ಬರುತ್ತದೆ ?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅದು ಬಹಳ ಮುಖ್ಯವಾದ ವಿಚಾರ, ಅದಿಲ್ಲದಿದ್ದರೆ ಸಮತೆ ಹೇಗೆ ಬರುತ್ತದೆ ?

ಅಧ್ಯಕ್ಷರು.—ತಾವು ಹೀಗೆ ಮಾಡಿದರೆ ಬಹಳ ಕಷ್ಟವಾಗುತ್ತವೆ. 'ಸೀಲಿಂಗ್' ಪ್ರಶ್ನೆ ಇಲ್ಲಿ ಬರುವುದಿಲ್ಲ, ಮಸೂದೆಯ ಮೇಲೆ ಮಾತನಾಡಬೇಕು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದರಿಂದ ಎಷ್ಟು ತೆರಿಗೆ ಬರುತ್ತದೆ, ದೇಶಕ್ಕೇನು ಸಹಾಯವಾಗುತ್ತದೆಂಬುದನ್ನು ನೋಡಬೇಕು. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ. ಸುಮ್ಮನೆ ಬೂಟಾಟಿಕೆಗೆ ಹೇಳಬಹುದೇ ವಿನಾ ಇದರಲ್ಲಿ ಯಾವ ನೀತಿ ನಿಯಮವೂ ಇಲ್ಲ. ಈ ಸರ್ಕಾರ ಸರಿಮಾಡದೇಯಿದ್ದರೆ ಬೇರೆ ಯಾರಾದರೂ ಬರುತ್ತಾರೆ, ಸರಿಮಾಡುತ್ತಾರೆ. ಕಾಲ ಓಡುತ್ತಿದೆ, ನಡೆಯಬೇಕಾದುದು ನಡೆಯುತ್ತದೆ. ಇದನ್ನೆಲ್ಲಾ ಹೇಳುವುದು ಬೇಡವೆಂದು ಅಧ್ಯಕ್ಷರು ಹೇಳಿದರು, ಆದಕಾರಣ ಇಲ್ಲಿಗೇ ಬಿಡುತ್ತೇನೆ. ಶ್ರೀ ಮುಕ್ಕಣ್ಣಪ್ಪನವರು ಬಹಳವಾಗಿ ಹೇಳಿದ್ದಾರೆ, ನಾನು ಹೇಳಿದರೆ ಪುನರುಕ್ತಿಯಾಗುತ್ತದೆ. ಈ ಸರ್ಕಾರವನ್ನು ಬದಲಾವಣೆ ಮಾಡದೇಯಿದ್ದರೆ ಪ್ರಜೆಗಳಲ್ಲಿರುವ ಅಸಮತೆಯನ್ನು ತೊಡೆದುಹಾಕಿ ಸಮತೆಯನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ.

ಈ ಮಸೂದೆಯ ಹಿನ್ನೆಲೆಯನ್ನು ನೋಡಿದರೆ, ಅದರಲ್ಲಿ ಹಿಂಸೆ ಇದೆ. ಈ ಮಸೂದೆಯಪ್ರಕಾರ ತೆರಿಗೆಹಾಕಿರುವ ರೀತಿಯನ್ನು ನೋಡಿದರೆ, 1956-57 ರಿಂದ ವಸೂಲುಮಾಡಬೇಕೆಂದಿದೆ. ಯಾವ ಇಂಥಾ ಮಸೂದೆಯನ್ನು ತರಬೇಕಾದರೂ ಅದನ್ನು ಆ ವರ್ಷದ ಏಪ್ರಿಲ್ ಒಂದನೆಯ ತಾರೀಖಿನೊಳಗಾಗಿ ಶಾಸನ ಸಭೆಗಳ ಮುಂದೆ ತಂದು ಅಂಗೀಕಾರ ಮಾಡಬೇಕು. ಹೀಗೆ ಅಂಗೀಕಾರವಾಗಿ ಕಾನೂನಾದ ತಾರೀಖಿನಿಂದ ಈ ತೆರಿಗೆಯನ್ನು ರೈತರಿಂದ ತೆಗೆದುಕೊಳ್ಳಬಹುದು. ಇಷ್ಟೊಂದು ಅಧಿಕಾರಿಗಳೂ ಇಷ್ಟು ದೊಡ್ಡ ಸೆಕ್ರೆಟೇರಿಯಟ್ಟೂ ಇದ್ದರೂ ಸರ್ಕಾರಕ್ಕೆ ಇದನ್ನು ಸಕಾಲಕ್ಕೆ ಮಾಡುವುದಕ್ಕಾಗಲಿಲ್ಲವೆಂದರೆ ಏನರ್ಥ ? ಭೂ ಸುಧಾರಣೆ ಮಾಡುತ್ತೇವೆಂದು ಹೇಳಿ ಅದನ್ನು ತಡೆಹಿಡಿಯುವುದಕ್ಕೆ ಹೀಗೆ ಮಾಡುವುದೆ ? ಏಪ್ರಿಲ್ ಆದ ಮೇಲೆ ಈ ಯೋಚನೆ ಬಂತೆಂದು ಕಾಣುತ್ತದೆ—after thought ಎಂದು ಕಾಣುತ್ತದೆ. ಹಿಂದಿನ ವರ್ಷದಲ್ಲಿ ಅಧಿಕಾರಿಗಳು ತೆರಿಗೆ ಅಸೆಸ್ ಮಾಡಿದ್ದಾರೆ. ಈ ಮಸೂದೆಯನ್ನು ತರುತ್ತೇವೆ, ಅಸೆಸ್ ಮಾಡಬೇಡಿ ಎಂದು ಅವರಿಗೆ ಮೊದಲು ಹೇಳಿದ್ದರೆ ಇದಲ್ಲಿ ಬಂಡವಾಳಗಾರರು ತೆರಿಗೆ ಕೊಡದೇಯಿರುವ ಹಾಗೆ ಮಾಡಿದ್ದಾರೆ; ಬಹಳ ಕಡಮೆ ವರಮಾನವಿರುವವರು ಕೊಡಬೇಕಾಗಿದೆ. ನಮ್ಮ ದೇಶದಲ್ಲಿ ರೈತರಲ್ಲಿ ವಿದ್ಯಾವಂತರು ಬಹಳ ಕಡಮೆ. ಇವೆಲ್ಲ ದೃಷ್ಟಿಯಿಂದಲೂ ರೈತರಿಗೆ ಹಿಂಸೆಯಾಗುತ್ತದೆ. ಸರ್ಕಾರ ಬಡ ರೈತರನ್ನು ತುಳಿದು ಕೆಲವು ದಿನ ಇಟ್ಟುಕೊಳ್ಳಬಹುದು.

ಈ ತೆರಿಗೆಯಿಂದ ಬಹಳ ಹಣ ಸರ್ಕಾರಕ್ಕೆ ಬರುತ್ತದೆಂದು ಹೇಳಲು ನಾನು ತಯಾರಾಗಿಲ್ಲ. ಹಳೆಯ ಕಾನೂನಿನಲ್ಲಿ ವಿನಾಯಿತಿ ದೊರೆಯುವ ಮಿತಿ 4,200 ರೂಪಾಯಿ ಇತ್ತು. ಈಗ ಇದನ್ನು ಕಡಮೆಮಾಡಿದ್ದಾರೆ. ಹಿಂದೆ ಕಡಮೆ ವರಮಾನ ಬರುವವನಿಗೆ ಕಡಮೆ ತೆರಿಗೆಯಿತ್ತು. ಈಗ ಕಡಮೆ ಬರುವವನು ಜಾಸ್ತಿ ಕೊಡಬೇಕೆಂದು ಒತ್ತಾಯಹಾಕಿದ್ದಾರೆ. ಹಳೆಯ ಕಾನೂನಿನಪ್ರಕಾರ 4,200 ರೂಪಾಯಿವರೆಗೆ ಏನೂ ಕೊಡಬೇಕಾಗಿರಲಿಲ್ಲ.

4-30 P.M.

ರೈತರಿಗೆ ಬರುವ ಉತ್ಪತ್ತಿ ಬಹಳ ಕಡಮೆ ಎಂದು ಈಗಾಗಲೇ ಅನೇಕ ಸದಸ್ಯರು ಹೇಳಿದ್ದಾರೆ. ನಾನು ಪುನಃ ಹೇಳಿದರೆ ಅದು ರಿಪಿಟಿಷನ್ ಆಗುತ್ತದೆ. ಆದ್ದರಿಂದ ರೈತನ ಮಕ್ಕಳು ವಿದ್ಯಾಭ್ಯಾಸ ಸೌಕರ್ಯ ಪಡೆಯಬೇಕಾದರೆ ಅವನ ಮಕ್ಕಳನ್ನು ಬುದ್ಧಿವಂತರನ್ನಾಗಿ ಮಾಡಬೇಕಾದರೆ ಮತ್ತು ರೈತನ ಮನೆತನ ಬೆಳೆಯಬೇಕಾದರೆ ಅವರ ವರಮಾನ, ಉತ್ಪತ್ತಿ ಜಾಸ್ತಿಯಾಗಬೇಕು. ಅದನ್ನು ಬಿಟ್ಟು ನೀವು ಹೆಚ್ಚು ಹಣವಂತರೇ ಬುದ್ಧಿವಂತರಾಗಲಿ, ಶಕ್ತಿವಂತರಾಗಲಿ ಮತ್ತು ದಕ್ಷರಾಗಲಿ ಎಂದು ಅವಕಾಶ ಮಾಡಿಕೊಡುವಂತಾಗಕೂಡದು, ಎಂಬುದಾಗಿ ಎಲ್ಲಾ ಸದಸ್ಯರೂ ಹೇಳಿದ್ದಾರೆ. ಅದನ್ನೇ ಪುನಃ ರಿಪೀಟ್ ಮಾಡುವುದಕ್ಕೆ ನನಗೆ ಇಷ್ಟವಿಲ್ಲ.

ಇಂಟಿಗ್ರೇಷನ್ ಆದಮೇಲೆ ಇದು ಒಂದು ಹೊಸದಾಗಿ ಉದ್ಭವವಾದ ಸಮಸ್ಯೆಯಾಗಿದೆ. ಇತರ ದೇಶಗಳಲ್ಲಿ ಈ ತೆರಿಗೆ ಜಾಸ್ತಿ ಇದೆಯೋ ಅಥವಾ ಕಡಮೆ ಇದೆಯೋ ಎಂಬುದನ್ನು ನೋಡಿ ಸಮನ್ವಯಮಾಡಿ ಇಲ್ಲಿಯೂ ಒಂದು ಲೆಖ್ಖಾಚಾರದಂತೆ ತೆರಿಗೆಯನ್ನು ವಿಧಿಸಬೇಕು.

ಅಧ್ಯಕ್ಷರು.—ಇನ್ನು ಎರಡು ನಿಮಿಷಗಳಿವೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗಲೇ ಕುಳಿತುಕೊ ಎಂದು ಹೇಳಿದರೆ ಕುಳಿತುಕೊಳ್ಳುತ್ತೇನೆ. ಈಗ ಹೈದರಾಬಾದಿನಲ್ಲಿ ಪ್ಯಾಡಿಲ್ಯಾಂಡ್ಸ್‌ಮೇಲೆ 56 ರೂಪಾಯಿಗಳ ವಾಟರ್‌ರೇಟ್ ಇದೆ. ಮೈಸೂರಿನಲ್ಲಿ ವಾಟರ್‌ರೇಟ್ ಹತ್ತು ರೂಪಾಯಿಗಳಿವೆ. ಇಲ್ಲಿ ಬೇಕಾದರೆ ಒಂದೇ ದಿವಸದಲ್ಲಿ 56 ರೂಪಾಯಿಗಳ ತೆರಿಗೆ ವಿಧಿಸಬಹುದು. ಆದರೆ ಅದಕ್ಕೆ ಸ್ವಲ್ಪಕಾಲ ಬೇಕು. ಏಕೆಂದರೆ ಇಲ್ಲಿ ಬಹಳ ಕಷ್ಟಜೀವನ. ಕೆಳದರ್ಜೆ ಜನರ ಜೀವನವನ್ನು ಬಹಳವಾಗಿ ಅಡ್ಜಸ್ಟ್ ಮಾಡಬೇಕಾಗುತ್ತದೆ. ಆದ್ದರಿಂದ ಈಗಲೇ ವರ್ಷೇ ವರ್ಷೇ ಸ್ವಲ್ಪಸ್ವಲ್ಪ ತೆರಿಗೆಹಾಕಿಕೊಂಡು ಆಮೇಲೆ ಜಾಸ್ತಿ ಮಾಡಿದರೆ ತೆರಿಗೆಯನ್ನು ಕೊಡುವವರಿಗೂ ನಿಮಗೂ ಅನುಕೂಲವಾಗುತ್ತದೆ. ಈ ರೇಟುಗಳನ್ನು ಬಹಳ ವೈಯಲೆಂಟ್ ಆಗಿ ರೈತರಮೇಲೆ ಏರಿಸಿದ್ದಾರೆ. ಅವರ ಮನಸ್ಸನ್ನು ಒಲಿಸಿಕೊಂಡು ಅವರಿಗೆ ಕಷ್ಟವಿಲ್ಲದ ರೀತಿಯಲ್ಲಿ ತೆರಿಗೆ ವಿಧಿಸಬೇಕು. ಈ ತೆರಿಗೆಯಿಂದ ಹೆಚ್ಚು ಹಣ ಬರುವುದಿಲ್ಲ. ಕಡಮೆ ಹಣದಲ್ಲಿ ಅವರಿಗೇಕೆ ಹಿಂಸೆ ಕೊಡಬೇಕು? ಅವರಾಗಿಯೇ ತೆರಿಗೆ ಕೊಡೋಣ ಎಂಬ ಮನಸ್ಸು ಬರುವ ಹಾಗೆ ವರ್ಷೇ ವರ್ಷೇ ಕ್ರಮಕ್ರಮವಾಗಿ ಜಾರಿಗೆ ತನ್ನಿ. ಒಂದೇ ವರ್ಷದಲ್ಲಿ ತರಬೇಡಿ. ಸ್ವಲ್ಪ ಸ್ವಲ್ಪವಾಗಿ ಅಷ್ಟಿಷ್ಟನ್ನೇ ಹಾಕಬೇಕು. ಆದರೆ ಒಂದೇಮಾತಿನಲ್ಲಿ ಹೇಳುವುದಾದರೆ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಸರಿಯಾಗಿ ಲ್ಯಾಂಡ್ ರಿಫಾರಮ್ಸನ್ನು ಮಾಡಬೇಕು. ಇದು ಹೆಚ್ಚು ಕಾಲ ಉಳಿಯುವುದಿಲ್ಲವೆಂದು ಇವತ್ತು ಬರೆದುಕೊಡುತ್ತೇನೆ. ಇದು ಒಂದು ಶಾಸ್ತ್ರೀಯವಾದ ಆಧಾರದ ಮೇಲೆ ಮಾಡಿದಂಥ ಮಸೂದೆಯಲ್ಲವೆಂಬುದು ನಿಮ್ಮ ಆತ್ಮಕ್ಕೇ ಗೊತ್ತಿದೆ-ಎಂದು ನಾನು ಘಂಟಾಘೋಷವಾಗಿ ಅರ್ಥ ಸಚಿವರಿಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಈಗಾಗಲೇ ಬಹಳ ಸ್ವಾರಸ್ಯವಾದ ವಿಚಾರಗಳು ಹೊರಬಿದ್ದಿವೆ. ಮುಖ್ಯವಾಗಿ ನೀತಿಗೆ ಸಂಬಂಧಪಾದ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ. ಮೊದಲು ಮಾತನಾಡಿದಂಥ ಅನೇಕ ಮಾನ್ಯ ಸ್ನೇಹಿತರು ಏನೋ ತಮಗೆ ಬೇಕಾದಂಥ ಕೆಲವರ ಹಿತಕ್ಕಾಗಿ ಅನೇಕ ಐಟಂಗಳನ್ನು ಬಿಟ್ಟಿದ್ದಾರೆಂದು ಹೇಳಿದ್ದಾರೆ. ಇದನ್ನೆಲ್ಲಾ ನೋಡಿದರೆ ಮನಸ್ಸಿಗೆ ವಿಷಾದವಾಗುತ್ತದೆ. ಇದು ಪ್ರಜಾ ಪ್ರಭುತ್ವ ತತ್ವಕ್ಕೆ ಮತ್ತು ಸಮತಾವಾದ ಸಮಾಜದ ತತ್ವಕ್ಕೆ ವಿರೋಧವಾಗಿದೆ. ಇಂಥಾದ್ದಕ್ಕೆಲ್ಲಾ ಅವಕಾಶವನ್ನು ಕೊಡಬಾರದು.

ಶ್ರೀ ಟಿ. ಮರಿಯಪ್ಪ.—ಆಹಾರ ಪದಾರ್ಥಗಳಿಗೂ ತೆರಿಗೆ ಹಾಕಬೇಕೆಂದು ತಮ್ಮ ಅಭಿಪ್ರಾಯವೇ?

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಆ ರೀತಿ ಹಾಕಬಾರದು ಎಂದು ನನ್ನ ಅಭಿಪ್ರಾಯ. ಎರಡು ಕೋಟಿ ಜನಗಳು ಕೇಳಿದ್ದನ್ನು ಮಾನ್ಯ ಸ್ನೇಹಿತರಾದ ಶ್ರೀ ಚನ್ನಬಸಪ್ಪನವರು ಅಂಕಿ ಅಂಶಗಳ ಮೂಲಕ ಕೊಟ್ಟರು. ಮಾನ್ಯ ಸಚಿವರು ಇಂತಹ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಉತ್ಪತ್ತಿ ಬರುತ್ತದೆ, ಯಾವ ಯಾವ ಪದಾರ್ಥಗಳ ಮೇಲೆ ತೆರಿಗೆ ವಿಧಿಸಬೇಕು, ಯಾವ ಯಾವ ಪದಾರ್ಥಗಳ ಮೇಲೆ ತೆರಿಗೆ ವಿಧಿಸಬಾರದು ಎಂಬುದನ್ನು ಯೋಚನೆಮಾಡಿ ಹೇಳಿದ್ದರೆ ಇಂತಹ ಒಂದು ವಿಧವಾದ ಟೀಕೆಗೆ ಅವಕಾಶವಿರುತ್ತಿರಲಿಲ್ಲ.

ಶ್ರೀ ಟಿ. ಮರಿಯಪ್ಪ.—ಹೇಳಿದ್ದೇನೆ. ಆಗ ನೀವು ಈ ಸಭೆಯಲ್ಲಿ ಇದ್ದಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಗೇರು ಬೀಜ ಪ್ಲಾಂಟೇಷನ್ಸ್ ಎಷ್ಟು ವಿಸ್ತೀರ್ಣವಿದೆ, ಅದರ ಉತ್ಪತ್ತಿಯನ್ನು ಏನು ಮಾಡಬೇಕೆಂದು ತಾವು ಹೇಳಲಿಲ್ಲ. ಆ ವಿಚಾರವನ್ನು ಅನೇಕ ಜನರು ಹೇಳಿದ್ದಾರೆ. ನೀತಿಗೆ ಸಂಬಂಧಪಟ್ಟ ವಿಚಾರದ ಕಡೆಗೆ ಸರ್ಕಾರದವರು ತಕ್ಕ ಗಮನವನ್ನು ಕೊಡಬೇಕು.

ಈ ಮಸೂದೆಯ 12ನೆಯ ಪುಟದಲ್ಲಿ (*m*) ನಲ್ಲಿ 'Hindu undivided family" includes a family governed by the Madras Numbudri Act, 1932' ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಮುಸಲ್ಮಾನರೂ ಕ್ರೈಸ್ತರೂ ಇದ್ದಾರೆ. ಅಲ್ಲಿ ಕೊಟ್ಟ ವಿನಾಯತಿ ಇದಕ್ಕೆ ಏತಕ್ಕೆ ಕೊಟ್ಟಿಲ್ಲವೋ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕು. ಪುಟ 25 ಸೆಕ್ಷನ್ 19ರಲ್ಲಿ 4ನೇ ಐಟಂನಲ್ಲಿ "If any person fails to make a return under sub-section (1) or sub-section (2) of Section 18, as the case may be, or fails to comply with all the terms of a notice issued under sub-section (4) of that Section or under sub-section (2) of this Section the Agricultural Income-tax Officer shall make the assessment to the best of his judgment and determine the sum payable by the assessee on the basis of such assessment, and in the case of a

(ಶ್ರೀ ಬಿ. ಎಲ್. ನಾರಾಯಣಸ್ವಾಮಿ)

firm, may refuse to register it or may cancel its registration if it is already registered" ಎಂದು ಹೇಳಿದ್ದಾರೆ. ಇದರಲ್ಲಿ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಆಫೀಸರಿಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ. ಈ ಕಾನೂನು ರೀತ್ಯಾ ಏನಾದರೂ ತಪ್ಪುಮಾಡಿದರೆ, ರೈತನಿಗೆ ಅನ್ಯಾಯವಾದರೆ, ಆತನು ಅವರ ಮೇಲೆ ಅಪೀಲು ಹೋಗಲು ಅವಕಾಶವಿಲ್ಲ. ಇದರಿಂದ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರಿಗೆ ಹೆಚ್ಚಿನ ಅಧಿಕಾರಕೊಟ್ಟು ಅನ್ಯಾಯ ಮಾಡಿದಂತಾಗಿದೆ. ರೈತನಿಗೂ ತೊಂದರೆಯಾಗಿದೆ. ಈರೀತಿ ಆಗಿರುವುದನ್ನು ತಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಸೆಕ್ಷನ್ 20ರಲ್ಲಿ "Power to make provisional assessment in advance of regular assessment" ಎಂದು ಹೇಳಿದ್ದಾರೆ. ಇದು ಬಹಳ ಅನ್ಯಾಯ. ಪ್ರಕೃತಿ ಆಶ್ರಯವನ್ನೇ ನಂಬಿಕೊಂಡಿರುವವರು ರೈತರು. ಮುಂದಿನ ವರ್ಷ ಏನಾಗುತ್ತದೋ ಎಂದು ಹೇಳುತ್ತಿರುತ್ತಾರೆ. ಅವರ ಭವಿಷ್ಯ ಸಮರ್ಪಕವಾಗಿಲ್ಲ. ಬರೀ ವ್ಯಾಪಾರಸ್ಥರ ವಿಚಾರದಲ್ಲಿ ಅವರ ಟರ್ನ್‌ಓವರ್ ಮೇಲೆ ಮುಂದಿನವರ್ಷ ಏನು ಆದಾಯ ಬರುತ್ತದೆ ಎಂದು ಅಸೆಸ್ ಮಾಡಬಹುದು. ಆದರೆ ರೈತನ ವಿಚಾರದಲ್ಲಿ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಅದರ ಮೇಲೆ ಅಪೀಲು ಬೇರೆ ಇಲ್ಲ.

ಇನ್ನು ಸೆಕ್ಷನ್ 21ರಲ್ಲಿ ಹೇಳಿರುವ ಅಂಶವಂತೂ ಬಹಳ ಕಠಿಣವಾದುದು. ರೈತರಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಸೆಕ್ಷನ್ನನ್ನು ಜಾಗ್ರತೆ ತೆಗೆದುಹಾಕಬೇಕು. ಸೆಕ್ಷನ್ 19 (4)ರ ಪ್ರಕಾರ ರೈತ ಅರ್ಜಿ ಕೊಟ್ಟಮೇಲೆ ರೆಗ್ಯುಲರ್ ಅಸೆಸ್‌ಮೆಂಟ್ ಆದನಂತರ ಹೆಚ್ಚಿಗೆ ಹಣವನ್ನು ಪಾವತಿ ಮಾಡಿದ್ದರೆ, ಅದನ್ನು ವಾಪಸ್ಸು ಕೊಡಬಹುದು. ಯಾರಾದರೂ ಅಧಿಕಾರಿಮಾಡಿದ ಹುಕುಂಮೇಲೆ ವಿಶ್ವಾಸ ವಿಲ್ಲದಿದ್ದಲ್ಲಿ ಸೆಕ್ಷನ್ 34ರ ಪ್ರಕಾರ ಅಪೀಲು ಮಾಡಬಹುದು ಎಂದು ಹೇಳಿದ್ದಾರೆ. ರೈತರ ನೆರವಿನಿಂದಲೇ ಸರ್ಕಾರ ಉದ್ಧಾರವಾಗಬೇಕು. ಇದನ್ನು ಅನುಭವಶಾಲಿಗಳಾದ ಮಾನ್ಯ ಮಂತ್ರಿಗಳಿಗೆ ಹೆಚ್ಚಾಗಿ ಹೇಳಬೇಕಾಗಿಲ್ಲ. ಇರತಕ್ಕ ನ್ಯೂನತೆಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಷೆಡ್ಯೂಲ್ ಪಾರ್ಟ್ (1) ರಲ್ಲಿ ಹಿಂದೂ ಅನ್‌ಡಿವೈಡೆಡ್ ಫ್ಯಾಮಿಲಿಗೆ 7 ಸಾವಿರ ರೂಪಾಯಿಗಳೆಂದು ಒಂದು ಲಿಮಿಟ್ಟನ್ನು ಇಟ್ಟಿದ್ದಾರೆ. ಅದು ಪ್ರೊವಿಷನ್ (ii) ರಲ್ಲಿ ಈ ರೀತಿ ಹೇಳಿದೆ; "Provided that no agricultural income-tax shall be payable by a person who derives agricultural income from land not more than fifty acres of the eighth class of land or an extent equivalent thereto consisting of any one or more of the classes of land specified in Part II.

The limit referred to in the above proviso shall be seven thousand rupees in the case of every Hindu undivided family or an Aliyasanthana family or Branch or a Marumakkathayam tarward or tavazhi including a Nambudiri family or any other class governed by the law applicable to Nambudiris, which satisfies as at the end of the previous year the condition that it consists of at least five members. ಹೀಗಿರುವಾಗ್ಗೆ 50 ಎಕರೆಗೆ 3,500 ರೂಪಾಯಿಗಳಂತೆಯೂ 100 ಎಕರೆಗೆ ಏಳುಸಾವಿರ ರೂಪಾಯಿಗಳಂತೆಯೂ ಮಿತಿಯನ್ನು ಇಟ್ಟಿದ್ದರೆ ಚೆನ್ನಾಗಿರುತ್ತದೆ. ಜಮೀನು ಮಿತಿ ತೋರಿಸದಿರುವುದರಿಂದ ರೈತರಿಗೆ ಕಷ್ಟವಾಗುತ್ತದೆ. ರೈತರು ಲೆಕ್ಕವಿಡಲು ಯಾರನ್ನಾದರೂ ಆಶ್ರಯ ಮಾಡಬೇಕು. ಆದ್ದರಿಂದ ಅವರನ್ನು ತೊಂದರೆಗೆ ಗುರಿಮಾಡುವುದು ಸರಿಯಲ್ಲ. ಅವರಿಗೆ ಹೆಚ್ಚು ಸೌಕರ್ಯ ಮಾಡುವುದು ಧರ್ಮ. ಆದ್ದರಿಂದ ನೂರು ಎಕರೆಯೆಂದು ವಿಧಾಯಕ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಎರಡನೆಯ ಭಾಗದ ಷೆಡ್ಯೂಲಿನಲ್ಲಿ ವಿಧಾಯಕಮಾಡಿರುವುದು ಬಹಳ ಅಸಮಂಜಸವಾಗಿದೆ. "Land used for growing areca, chillies (irrigated), ginger, mulberry (irrigated), plantain (irrigated), potato (irrigated), garcane, tobacco (Nippani and Viginia or turmeric") ಎಂದು Third Class ನಲ್ಲಿದೆ. ಇದರಲ್ಲಿ ಯಾವುದನ್ನು ಬೆಳೆದರೂ 3,500 ರೂಪಾಯಿಗಳ ಬೆಳೆ ಬರಬೇಕು. ಆದರೆ ಲೆಕ್ಕಮಾಡುವ ರೀತಿಯಲ್ಲಿ ಆ ಆದಾಯ ಬರುವುದಿಲ್ಲ, ಜವಾಬ್ದಾರಿ ಬಹಳವಾಗಿದೆ. ಒಂದಕ್ಕೊಂದು ಸಮಂಜಸವಾಗಿಲ್ಲ. ಮಂತ್ರಿಮಂಡಲಕ್ಕೆ ಪ್ರಾಕ್ಟಿಕಲ್ ವಿಷಯ ಗೊತ್ತಿದೆಯೋ ಅಥವಾ ಯಾರಾದರೂ ಹೇಳಿದರೋ ತಿಳಿಯದು. ಮಲ್ಬರಿ (ಇರಿಗೇಟೆಡ್) ಬೆಳೆಯಿಂದ ಒಂದು ಎಕರೆಗೆ ಸರಾಸರಿ, 60 ರೂಪಾಯಿಗಳ ಮೇಲೆ ಬರುವುದಿಲ್ಲ. ಆ ರೀತಿ ಆರು ಬೆಳೆ ವರ್ಷಕ್ಕೆ ಬರುತ್ತದೆ. ಅದಕ್ಕೆ 360 ರೂಪಾಯಿ ಆಗುತ್ತದೆ. ಹಾಗಿರುವಾಗ ಆರು ಎಕರೆಗೆ 3,500 ರೂಪಾಯಿಗಳು ಹೇಗೆ ಬರುತ್ತದೆ? ಶುಂಠಿ, ಅರಸಿನ ಇವುಗಳಿಂದ ಎಕರೆಗೆ ವರ್ಷಕ್ಕೆ 300 ರೂಪಾಯಿಗಳ ಮೇಲೆ ವರಮಾನ ಬರುವುದಿಲ್ಲ. ಆರು ಎಕರೆಗೆ 1,800 ರೂಪಾಯಿ ಬರಬಹುದು. ಆದ್ದರಿಂದ 3,500 ಬರುತ್ತದೆಂದು ಹೇಳಿರುವುದು ತಪ್ಪು. ಆಲೂಗಡ್ಡೆಯಿಂದ ಎಕರೆಗೆ 400 ರೂಪಾಯಿ ನಫೆ ಬರಬಹುದು. ಅದರಂತೆ ಆರು ಎಕರೆಗೆ 2,400 ರೂಪಾಯಿಗಳಾಗುತ್ತದೆ. ಆದರೆ 3,500 ರೂಪಾಯಿಗಳ ಲಿಮಿಟ್ ಇದೆ. ಆದ್ದರಿಂದ ಈ ಷೆಡ್ಯೂಲನ್ನು ಸರಿಪಡಿಸುವುದು ಯುಕ್ತವಾಗಿದೆ. ದಯೆಯಿಟ್ಟು ಪರಿಶೀಲನೆ ಮಾಡಬೇಕು.

ಇಷ್ಟು ಹೊತ್ತೂ ಹೇಳಿದ್ದು ಅರಣ್ಯರೋದನವೆ? ಮಾನ್ಯ ಮಂತ್ರಿಗಳು ಇಲ್ಲಿರಲಿಲ್ಲ.

(ಅಷ್ಟುಹೊತ್ತಿಗೆ ಹಣಕಾಸಿನ ಸಚಿವರು ಬಂದರು.)

ಶ್ರೀ ಟಿ. ಮರಿಯಪ್ಪ.—ಅದನ್ನು ಬೇರೆಯವರು ನೋಟ್ ಮಾಡಿಕೊಂಡಿದ್ದಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಏಳನೆಯ ಕ್ಲಾಸಿನಲ್ಲಿ ಮಾವಿನಗಿಡ ಬೆಳೆಸುವ ಜಮೀನಿನ ವಿಚಾರ ಹೇಳಿದೆ. ಎಕರೆಗೆ ಸುಮಾರು 40 ಗಿಡ ಬೆಳೆಸುತ್ತಾರೆ. ಒಂದು ಗಿಡಕ್ಕೆ ಸರಾಸರಿ ಎರಡೂವರೆ ರೂಪಾಯಿ ಉತ್ಪತ್ತಿ ಬರುತ್ತದೆ. 25 ಎಕರೆ ಜಮೀನಿಗೆ 2,500 ರೂಪಾಯಿ ನಿವ್ವಳ ಆದಾಯ ಬರುತ್ತದೆ. ಹಾಗಿರುವಾಗ 3,500 ರೂಪಾಯಿ ಆದಾಯ ಹೇಗೆ ಬರುತ್ತದೆ? ಆದ್ದರಿಂದ 25 ಎಕರೆ ಎಂದಿರುವುದನ್ನು 35 ಎಕರೆಗಾದರೂ ಜಾಸ್ತಿ ಮಾಡಬೇಕು.

ಆಮೇಲೆ ಕ್ಯಾಷ್ಯುನಟ್ ಪ್ಲಾಂಟೇಷನ್ ಇದೆ. ಅದರಿಂದ ಹೆಚ್ಚಿನ ಉತ್ಪತ್ತಿ ಬರುತ್ತದೆ. ಅದನ್ನು ಕೈಬಿಟ್ಟಿದೆ. ಅದನ್ನು ಸಹ ಸೇರಿಸುವುದು ಬಹಳ ಸೂಕ್ತ ಎಂದು ಈ ಸಂದರ್ಭದಲ್ಲಿ ಸೂಚನೆಮಾಡಿ ಮಾನ್ಯ ಸಚಿವರು ಇದನ್ನೆಲ್ಲಾ ಗಮನಿಸಿ ಸೂಕ್ತ ತಿದ್ದುಪಡಿ ಮಾಡುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಇ. ನಾರಾಯಣಗೌಡ (ಬಂಗಾರಪೇಟೆ).—ಮಾನ್ಯ ಅಧ್ಯಕ್ಷರೆ, ನಮ್ಮ ಆರ್ಥಿಕ ಸಚಿವರು ವ್ಯವಸಾಯ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸುವ ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸಿದ್ದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಸುಖೀರಾಜ್ಯ ಸ್ಥಾಪನೆ ಮಾಡುತ್ತೇವೆಂದು ಹೇಳಿ ಕೇವಲ ಸುಂಕದ ರಾಜ್ಯ ಸ್ಥಾಪನೆ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ರಾಮರಾಜ್ಯ ಸ್ಥಾಪನೆ ಮಾಡುತ್ತೇವೆ, ದೇಶದಲ್ಲಿ ಪ್ರಜೆಗಳನ್ನು ಸುಭಿಕ್ಷವಾಗಿಟ್ಟುಕೊಂಡಿರುತ್ತೇವೆ ಎಂದು ಹೇಳುತ್ತಿದ್ದವರು ಈ ದಿವಸ ಬೇಕಾದಷ್ಟು ತೆರಿಗೆ ಹೇರಿ ರೈತರನ್ನು ಅಧೋಗತಿಗೆ ಇಳಿಸಿದ್ದಾರೆಂದರೆ ತಪ್ಪಾಗಲಾರದು. ರಾಮರಾಜ್ಯ ಸ್ಥಾಪನೆಮಾಡುತ್ತೇನೆಂದು ಹೇಳಿದಾಗ ಆ ರಾಮರಾಜ್ಯದ ಒಂದು ವಿಷಯ ಜ್ಞಾಪಕಕ್ಕೆ ಬರುತ್ತಿದೆ, ಹಿಂದೆ ಶ್ರೀರಾಮನು ರಾಜ್ಯಭಾರವನ್ನು ಭರತನಿಗೆ ವಹಿಸಿ ಕಾಡಿಗೆ ಹೋಗುತ್ತಾನೆ. ಭರತ ಶ್ರೀರಾಮನ ಧ್ಯಾನದಲ್ಲೇ ತೊಡಗಿ ರಾಜ್ಯಭಾರವನ್ನು ಸಂಪೂರ್ಣವಾಗಿ ಮರೆಯುತ್ತಾನೆ. ರೈತರು ಈ ಅವಕಾಶವನ್ನು ಉಪಯೋಗಿಸಿಕೊಂಡು ಕೊಡಬೇಕಾದ್ದನ್ನು ರಾಜನಿಗೆ ಸಲ್ಲಿಸದೆ ಸಮೃದ್ಧರಾಗುತ್ತಾರೆ. ಆಗ ಶ್ರೀರಾಮ 14 ವರ್ಷಗಳ ಅವಧಿ ಮುಗಿದು ಕಾಡಿನಿಂದ ವಾಪಸು ಬರುತ್ತಾನೆ. ರೈತರು ಸರ್ಕಾರಕ್ಕೆ ಕೊಡಬೇಕಾದ ತೆರಿಗೆ ಕೊಟ್ಟಿಲ್ಲ, ಯಾವ ರೀತಿಯಲ್ಲಾದರೂ ಅದನ್ನು ವಸೂಲುಮಾಡಬೇಕೆಂದು ರೈತರಿಗೆಲ್ಲಾ ಒಂದೊಂದು ಕುಂಬಳಬೀಜ ಕೊಡುತ್ತಾನೆಂದು ಕಥೆಯಿದೆ. ಹಾಗೆ ಕೊಡುವಾಗ ಕುಂಬಳಬೀಜ ತೆಗೆದುಕೊಂಡ ಪ್ರತಿಯೊಬ್ಬ ರೈತರೂ ಒಂದೊಂದು ಕುಂಬಳಕಾಯನ್ನು ಸರ್ಕಾರಕ್ಕೆ ಕೊಡಬೇಕೆಂದು ಹೇಳಿರುತ್ತಾರೆ. ಆದರೆ ಆ ಬೀಜ ಹಾಕಿದರೆ ಒಂದು ಗಿಡದಲ್ಲೂ ಕಾಯಿ ಬಿಡುವುದಿಲ್ಲ. ಆಗ ಕುಂಬಳಕಾಯಿ ಕೊಡದಿದ್ದರೆ ಅದರ ತೂಕದಷ್ಟು ಚಿನ್ನ ತೆಗೆದುಕೊಡಬೇಕೆಂದು ಷರತ್ತು ಹಾಕಿದ್ದರು. 14 ವರ್ಷಗಳಿಂದ ತೆರಿಗೆ ಕೊಡದೆ ಜನರು ಅನುಕೂಲಸ್ತರಾಗಿದ್ದುದರಿಂದ ಅಷ್ಟು ಚಿನ್ನ ಕೊಡುವುದಕ್ಕೇನು ಕಷ್ಟವೆಂದು ಕೊಡಲು ಒಪ್ಪಿದರು. ಆದರೆ ಕೊನೆಗೆ ಚಿನ್ನದ ರೂಪದಲ್ಲಿ ಕೊಡುವಾಗ ಸಾಲದೆ ಹೆಂಡತಿಯ ಮಾಂಗಲ್ಯವನ್ನೂ ತಂದು ಕೊಡಬೇಕಾಯಿತು ಎಂದು ಹೇಳುತ್ತಾರೆ. ಈಗ ಅಂಥ ರಾಮರಾಜ್ಯ ಸ್ಥಾಪನೆಮಾಡುತ್ತಾರೋ ಏನೋ ಎಂದು ಬಹಳ ಆಶ್ಚರ್ಯವಾಗುತ್ತಿದೆ. ಏಕೆಂದರೆ ಈಗಿರುವ ನೂರಾರು ತೆರಿಗೆ ನೋಡಿದರೆ ರೈತ ಮಾಂಗಲ್ಯಕ್ಕೂ ಕೂಡ ಚಿನ್ನವನ್ನು ಉಪಯೋಗಿಸದೆ ಮರದ ಮಾಂಗಲ್ಯ ಕಟ್ಟಬೇಕಾಗುತ್ತದೆಯೋ ಏನೋ ಎಂದೆನಿಸುತ್ತದೆ. ಕಾಂಗ್ರೆಸ್ ಸರ್ಕಾರದ ವರ್ತನೆ ನೋಡಿ ನಾನು ಹೇಳಿದ ರಾಮರಾಜ್ಯದ ಕಥೆ ಜ್ಞಾಪಕಕ್ಕೆ ಬರುತ್ತಿದೆ.

ಹಿಂದೆ 1955ನೆಯ ಇಸವಿಯಲ್ಲಿ ರೈತರಲ್ಲಿ ಯಾರಿಗೆ 4,200 ರೂಪಾಯಿಗಳ ಆದಾಯ ಬರುತ್ತಿತ್ತೋ ಅವರಿಗೆ ಈ ತೆರಿಗೆಯಿತ್ತು. ಈಗ ಅದನ್ನು 3,500 ರೂಪಾಯಿಗಳಿಗೆ ಇಳಿಸಿರುವುದರಿಂದ ಬಡರೈತರಿಗೆ ಬಹಳ ಕಷ್ಟವಾಗುತ್ತದೆ. ಈಗ ಸರ್ಕಾರದವರು ತೆರಿಗೆ ಹಣ ಬೇಕು, ಅಭಿವೃದ್ಧಿ ಕಾರ್ಯ ಮಾಡುವುದಕ್ಕೆ ಹಣ ಅವಶ್ಯಕ, ದೇಶದ ಹಿತದೃಷ್ಟಿಯಿಂದ ತೆರಿಗೆ ಹಾಕುತ್ತೇವೆ ಎಂದು ಹೇಳುವುದೇನೋ ನ್ಯಾಯ. ವಿರೋಧ ಪಕ್ಷದವರು ವಿರೋಧ ಮಾಡುವುದಕ್ಕಾಗಿ ಇಲ್ಲಿಗೆ ಬಂದಿಲ್ಲ. ತಾವು ಮಾಡುತ್ತಿರುವ ಕೆಲವು ಒಳ್ಳೆಯ ಕೆಲಸಗಳಿಗೆ ನಮ್ಮ ಸ್ವಾಗತವಿದೆ. ಈಗ 3,500 ರೂಪಾಯಿಗಳ ಆದಾಯ ವ್ಯವಸಾಯ ಉತ್ಪನ್ನಗಳ ಮೇಲೆ ಬಂದರೆ ತೆರಿಗೆ ಹಾಕುವಾಗ ಜಮೀನು ಕಂದಾಯವನ್ನೇಕೆ ವಜಾ ಮಾಡಬಾರದು? ಅಲ್ಲದೆ ಜಮೀನು ಕಂದಾಯದ ಮೇಲೆ ಸೆಸ್ ಬೇರೆ ಇದೆ, ಅದಲ್ಲದೆ ಸ್ಥಳೀಯ ಸಂಸ್ಥೆಗಳ ತೆರಿಗೆ ಬೇರೆ ಇದೆ, ಕೇಂದ್ರ ಸರ್ಕಾರದ ತೆರಿಗೆ ಬೇರೆ ಇದೆ. ಈ ತೆರಿಗೆಗಳ ಹೊರೆಯನ್ನು ಹೊತ್ತು ರೈತ ಅಧೋಗತಿಗೆ ಇಳಿದ. ಹೀಗಿರುವಾಗ ಈ ಮಸೂದೆಯನ್ನು ತಂದಿರುವುದು ಬಹಳ ವಿಷಾದಕರ. ದಯವಿಟ್ಟು ಈ ಮಸೂದೆಯನ್ನು ವಾಪಸು ತೆಗೆದುಕೊಂಡರೆ ಮುಂದೆ ನಿಮ್ಮ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಇಷ್ಟು ತೆರಿಗೆ ಹಾಕುತ್ತೇವೆಂದು ಚುನಾವಣೆ ಕಾಲದಲ್ಲಿ ಜನರ ಮುಂದೆ ತೆರಿಗೆಗಳ ಪಟ್ಟಿಯನ್ನಿಟ್ಟಿದ್ದರೆ ಖಂಡಿತ ಈ ದಿವಸ ನೀವು ಈ ಸ್ಥಾನಕ್ಕೆ ಬರುತ್ತಿರಲಿಲ್ಲ. ಈ ದಿವಸ ಜನರಿಗೆ ಮೋಸ ಮಾಡಿ ಓಟು ಪಡೆದು ಜನರ ಮೇಲೆ ಹೊರೆ ಹೊರಿಸುವುದು ಸರಿಯಲ್ಲ. ಆದ್ದರಿಂದ ಈ ಮಸೂದೆಯನ್ನು ವಾಪಸು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

*ಶ್ರೀ ಎಂ. ಎಸ್. ಪಟ್ಟನ್ (ರಾಮದುರ್ಗ).—ಅಧ್ಯಕ್ಷ ಮಹಾಶಯರೆ, ಈ ಮಸೂದೆಯನ್ನು ವಿರೋಧಿಸುತ್ತಾ ಈಗ ರಾಮರಾಜ್ಯದ ಕಾಲದಲ್ಲಾದ ಹಾಗೆ ರೈತರಿಗೆ ಮಾನ್ಯ ಮಿತ್ರರು ಹೇಳಿದಂತೆ ವಿಪತ್ತು ಬಂದ ಹಾಗಾಯಿತೆಂದು ಹೇಳಿದರೆ ತಪ್ಪಲ್ಲ. ಏಕೆಂದರೆ ಈ ದಿವಸ ಪ್ರತಿಯೊಬ್ಬ ರೈತರೂ ಲೆಕ್ಕವಿಟ್ಟು ಕೊಡಬೇಕೆಂದರೆ ಗುಮಾಸ್ತೆಯನಿಡಬೇಕಾಗುತ್ತದೆ. ಮಾರಾಟ ತೆರಿಗೆ, ವರಮಾನ ತೆರಿಗೆ ಹಾಕುವಾಗ ಲೆಕ್ಕವಿಟ್ಟಿದ್ದರೂ ಶೇಕಡ 50 ಭಾಗ ಒಪ್ಪುವುದಿಲ್ಲ ಅಂದಮೇಲೆ ವ್ಯವಸಾಯ, ಒಕ್ಕಲತನ ಮಾಡುವ ರೈತರು ಈ ದಿವಸ ಲೆಕ್ಕವಿಟ್ಟರೆ ಅದನ್ನು ಒಪ್ಪುವುದಿಲ್ಲ. ಅಲ್ಲದೆ ಈಗ ಎಷ್ಟೋ ಜಮೀನಿನಲ್ಲಿ ಬೆಳೆಯೇ ಇರುವುದಿಲ್ಲ, ಪಾಳು ಬಿದ್ದಿರುತ್ತವೆ, ಪರಿಸ್ಥಿತಿ ಹೀಗಿದೆ. ಯಾವುದೋ ಕಾಲದಲ್ಲಿ ಹಿಂದೆ ಸರಿಯಾದ ಉತ್ಪತ್ತಿಯಿತ್ತು, ಪ್ರತಿ ವರ್ಷವೂ ನಿಗದಿಯಾದ ಬೆಳೆ ಬರುವುದಿಲ್ಲ. ಮೂಲಾಧಾರ ಯಾವುದೆಂಬುದನ್ನು ಅರಿತುಕೊಂಡು ಹಳ್ಳಿಗಳಿಗೆ ಹೋಗಿ ಸಾರ್ವಜನಿಕರ ಅಭಿಪ್ರಾಯ ಪಡೆದು ಒಂದು ನಿರ್ಧಾರಕ್ಕೆ ಬರಬೇಕಾಗಿತ್ತು. ಹಿಂದಿನ ಹತ್ತು ವರ್ಷಗಳ ಸರಾಸರಿ ಮುಂದೆ ಆಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಯಾವ ರೈತ ಭೂಮಿಯಲ್ಲಿ ಏನು ಬೆಳೆದ, ಎಷ್ಟು ಬೆಳೆದ ಎಂದು ಲೆಕ್ಕಮಾಡುವುದೇ ಕಷ್ಟವಾಗಿರುವಾಗ ರೈತ ಅಧಿಕಾರಿಗಳ ಕೈಯಿಂದ ತಪ್ಪಿಸಿಕೊಳ್ಳುವುದು ಬಹಳ ಕಷ್ಟವಿದೆ. ಅವನಿಗೆ ಇದರಿಂದ ತೊಂದರೆಯಾಗುತ್ತದೆ, ಕಾಂಗ್ರೆಸ್ ರಾಜ್ಯದಲ್ಲಿ ರೈತರಿಗೆ ಏನೂ ಸ್ವಾತಂತ್ರ್ಯವಿಲ್ಲವೋ ಏನೋ ಎಂಬಂತಿದೆ, ಇಂಥ ಒಂದು ತೆರಿಗೆ ಈ ದಿವಸ ಜನರ ಮುಂದಿದೆ, ಇದರಿಂದ ಬಹಳ ಅನ್ಯಾಯವಾಗುತ್ತದೆ, ಪ್ರತಿಯೊಂದು ಹಳ್ಳಿಗೂ ಮಂತ್ರಿಗಳು ಪ್ರವಾಸ ಹೋಗಿ ಜನರೊಂದಿಗೆ ವಿಚಾರವಿನಿಮಯಮಾಡಿ ಮೂರು ತಿಂಗಳು ಅಥವಾ ಆರು ತಿಂಗಳು ಜನರ ಮುಂದೆ ಮಸೂದೆಯನ್ನಿಟ್ಟು ಅವರ ಅಭಿಪ್ರಾಯ ತಿಳಿದುಕೊಂಡು ಅದಕ್ಕೆ ತಕ್ಕಂತೆ ಮಸೂದೆಯನ್ನು ರೂಪಿಸಿದರೆ ಅದು ಉತ್ತಮವಾಗಿರುತ್ತದೆ. ಅದನ್ನು ಬಿಟ್ಟು ಅವಸರವಾಗಿ ಹೀಗೆ ಮಾಡಿ

(ಶ್ರೀ ಎಂ. ಎಸ್. ಪಟ್ಟನ್)

ದರೆ ತೊಂದರೆ. ಈಗ ಕನ್ನಡ ರಾಜ್ಯವಾಗಿ ಈ ಸಭೆಯಲ್ಲಿ ಕನ್ನಡವೇ ಹೆಚ್ಚಾಗಿ ಬಳಕೆಯಲ್ಲಿದ್ದರೂ ನಾಲ್ಕು ದಿವಸ ಅಥವಾ ಎರಡು ದಿವಸ ಮುಂಚೆಯಾದರೂ ಕನ್ನಡ ಪ್ರತಿಗಳು ಯಾವುವೂ ಬರುವಹಾಗಿಲ್ಲ, ಇಂಗ್ಲೀಷ್ ಪ್ರತಿಗಳು ಮಾತ್ರ ಮುಂದೆ ಬರುತ್ತವೆ.

ನಮಗೆ ಇಲ್ಲಿ ಸರಿಯಾಗಿ ಓದಿಕೊಂಡು ಮಾತನಾಡಲು ಅವಕಾಶವಿಲ್ಲ. ಕನ್ನಡದಲ್ಲಿ ಅಚ್ಚಾದ ಬಿಲ್ಲುಗಳೊಂದೂ ಇಲ್ಲ. ಏನೋ ನಾವು ಹಾಗೂಹೀಗೂ ಅಕ್ಕಪಕ್ಕದಲ್ಲಿ ಕುಳಿತಿರತಕ್ಕವರು ಇಂಗ್ಲೀಷಿನಲ್ಲಿರತಕ್ಕ ಬಿಲ್ಲನ್ನು ಓದಿಕೊಳ್ಳುತ್ತಿದ್ದಾಗ ನಾವು ಅಲ್ಲೊಂದು-ಇಲ್ಲೊಂದು ವಿಚಾರ ತಿಳಿದುಕೊಂಡು ಅದರ ಮೇಲೆ ಇಲ್ಲಿ ಚರ್ಚೆ ನಡೆಸಬೇಕಾಗಿದೆ. ಕೇವಲ ನಾಲ್ಕೆಂಟು ದಿವಸಗಳಲ್ಲಿ ಇಂಥ ಸಮಾಜಕಂಟಕ ಬಿಲ್ಲುಗಳನ್ನು ಪಾಸ್‌ಮಾಡುವುದು ಬಹಳ ಕಠಿಣ. ಇದೊಂದು ಅಂಥ ಸಮಾಜಕಂಟಕ ಬಿಲ್ಲಾಗಿದೆ. ಈ ದಿವಸ ನಾವಿಲ್ಲಿ ಈ ಬಿಲ್ಲಿಗೆ ನಮ್ಮ ಒಪ್ಪಿಗೆ ಕೊಟ್ಟರೆ ನಾವು ನಾಳೆ ದಿವಸ ಊರುಗಳಿಗೆ ಹೋದಾಗ ವಿರೋಧಪಕ್ಷದವರಾದ ನಾವು ಅಲ್ಲಿ ರೈತರುಗಳಿಗೆ ನಮ್ಮ ಮುಖ ಹೇಗೆ ತೋರಿಸುವುದು ಎಂಬ ಸಂಕೋಚ ನಮ್ಮನ್ನೀಗ ಬಾಧಿಸುತ್ತಿದೆ. ಮತ್ತೆ ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಗಬೇರೆ ಕಳುಹಿಸಿ ಅಲ್ಲಿಂದ ತಿದ್ದುಪಡಿಮಾಡಿ ತರಿಸಿದ್ದೇವೆ ಎಂದು ಬೇರೆ ಹೇಳುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ನಮ್ಮಲ್ಲಿ ಆ ಕಣ್ಣುಮುಚ್ಚಾಲೆ ಆಟದಲ್ಲಿ ಘರದೆ ಎಳೆದ ಹಾಗೆ ಇವರೂ ಇಲ್ಲಿ ಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದರಲ್ಲಿ ಏನೂ ಅರ್ಥವಿಲ್ಲ. ಸರ್ಕಾರದವರು ಇಂಥ ಬಿಲ್ಲುಗಳನ್ನು ತರುವುದಕ್ಕೆ ಮೊದಲು ಅವರು ಅವರ ಅಫೀಸ್ ಜನರೇನಿದ್ದಾರೋ ಅವರನ್ನು ಸರಿಯಾಗಿ ನಡೆದುಕೊಳ್ಳುವಂತೆ ತರಬೇತುಮಾಡಲಿ. ನಾನು ಮಂತ್ರಿಗಳಲ್ಲಿ ಬಹಳ ನಮ್ರತೆಯಿಂದ ಹೇಳುತ್ತೇನೆ. ಈ ಮೈಸೂರಿನ ವಿಚಾರ ಹೇಗೋ ಅದು ನನಗೆ ಗೊತ್ತಿಲ್ಲ, ಆದರೆ ಇವರು ನಮ್ಮ ಆ ಧಾರ್‍ವಾಡ, ವಿಜಾಪುರ, ಬೆಳಗಾಂ ಜಿಲ್ಲೆಗಳ ಕಡೆ ಬರಲಿ—ನಾನು ಇವರಿಗೆ ಆಮಂತ್ರಣ ಕೊಡುತ್ತೇನೆ, ಇವರು ತಮ್ಮ ವೇಷ ಬದಲಾಯಿಸಿಕೊಂಡು ಹೋಗಿ ಬಜಾರಿನಲ್ಲಿ ಮೆಣಸಿನಕಾಯಿ ಸೇರು ಹೇಗೆ ? ಬದನೇಕಾಯಿ ಸೇರು ಹೇಗೆ ! ಎಂದು ಕೇಳಲಿ ಆಗ ಗೊತ್ತಾಗುತ್ತದೆ. ಈ ದಿವಸ ನಮ್ಮಲ್ಲಿ ನಾವು ಯಾವ ಸೇಲ್ಸ್‌ಟ್ಯಾಕ್ಸ್ ಕಚೇರಿಗೆ ಹೋದರೂ ಕ್ಲಾರ್ಕಿನ ಕೈ ಬೆಚ್ಚಗಾಗದಿದ್ದರೆ ಅಲ್ಲಿ ನಮ್ಮ ಕೆಲಸಗಳೇನೂ ಆಗುವುದಿಲ್ಲ. ನಾವು ಕೈ ಬೆಚ್ಚಗೆ ಮಾಡದಿದ್ದರೆ ಅವನ ಕೈಗಳು ಮೇಲಕ್ಕೆ ಏಳುವುದಿಲ್ಲ. ನಾನು ಸುಮಾರು ಇಲ್ಲಿಗೆ 20 ವರ್ಷಗಳಿಂದಲೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೆಲಸಮಾಡತಕ್ಕವನಿದ್ದೇನೆ. ನಾನು ಹಿಂದೆ ಯಾವತ್ತೂ ಹೀಗೆ ಆಫೀಸರ ಕೈಲಿ ಸಿಕ್ಕಿಕೊಂಡವನಲ್ಲ. ನಮ್ಮಲ್ಲಿ ಪ್ರತಿಯೊಂದು ಆಫೀಸ್ ವಿಚಾರಕ್ಕೂ ಬೆಳಗಾಂ ಜಿಲ್ಲೆಗೆ ಹೋಗಬೇಕಾಗಿದೆ. ಅಲ್ಲಿಯ ಗುಮಾಸ್ತರ ಕೈಬೆಚ್ಚಗಾಗದಿದ್ದರೆ ಅವರು ಮುದತ್ ಮುಂದಕ್ಕೆಹಾಕಿ ನಮಗೆ ಈಗ ಸುಮಾರು ಮೂರು-ನಾಲ್ಕು ತಿಂಗಳಿಂದಲೂ ತೊಂದರೆ ಕೊಡುತ್ತಿದ್ದಾರೆ. ಮುಂದೆ ನಾವೆಷ್ಟು ದಿನ ಇನ್ನೂ ಹೀಗೆ ತಿರುಗಾಡುತ್ತಿರಬೇಕೆಂದರೆ ನಿಮ್ಮ ಗುಮಾಸ್ತರನ್ನು ಕಳುಹಿಸಿಕೊಡಿ, ಅವರ ಮೊದಲು ಲೆಕ್ಕಗಳನ್ನೆಲ್ಲಾ ಸರಿಯಾಗಿ ಬರೆಯಲಿ, ಅನಂತರ ನೋಡೋಣ ಎಂದು ಹೇಳುತ್ತಿದ್ದಾರೆ. ವಿದ್ಯಾವಂತ ಜನರ ವಿಚಾರ ಹಾಗಿರಲಿ. ಆದರೆ ಈ ಬಿಲ್ಲು ಕೇವಲ ಹೆಬ್ಬೆಟ್ಟಿನ ರುಜು ಹಾಕತಕ್ಕ ಜನರಿಗೆ ಸಂಬಂಧಪಟ್ಟದ್ದಾಗಿದೆ.

ಅಧ್ಯಕ್ಷರು.—ತಾವೀಗ ಈ ರೀತಿ ಆ ಸೇಲ್ಸ್‌ಟ್ಯಾಕ್ಸ್ ಮೇಲೆ ಮಾತನಾಡುತ್ತಾಹೋದರೆ ಬಾಕಿ ಸದಸ್ಯರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ತಾವು ಈ ಬಿಲ್ಲಿನ ಬಗ್ಗೆ ಹೊಸ ವಿಚಾರಗಳಿದ್ದರೆ ಅವುಗಳನ್ನು ಮಾತ್ರ ಹೇಳಿ.

ಶ್ರೀ ಎಂ. ಎಸ್. ಪಟ್ಟನ್.—ತಾವು ಎಂದೂ ಇಂಥ ಮಸೂದೆಯನ್ನೇ ಅರಿಯದ ಜನರ ಮೇಲೆ ಇದನ್ನು ಹಾಕುತ್ತಿರುವಾಗ ನಿಮ್ಮ ಆಫೀಸ್ ಜನರು ಇದರ ವಿಚಾರದಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿದ್ದಾರೆಯೇ, ಇದರಿಂದ ಜನರಿಗೇನು ತೊಂದರೆ ಆಗುತ್ತಿದೆ, ಯಾವ ಯಾವ ಕಾನೂನು ಅಮಲುಗಳನ್ನು ಸರಿಯಾಗಿ ಬಜಾವ್‌ಮಾಡುತ್ತಿದ್ದಾರೆ, ಸರ್ಕಾರ ಯಾವ ರೀತಿ ಕೆಲಸಮಾಡುತ್ತಿದೆ, ಜನರ ವಿಚಾರದಲ್ಲಿ ಸರ್ಕಾರದವರು ಸರಿಯಾಗಿ ವರ್ತಿಸುತ್ತಿದ್ದಾರೆಯೇ ಎಂಬ ವಿಚಾರಗಳನ್ನೆಲ್ಲಾ ಚೆನ್ನಾಗಿ ಪರಿಶೀಲನೆಮಾಡಬೇಕಾಗಿದೆ. ನಮ್ಮ ಕಡೆ ಮಂದಿ 100ಕ್ಕೆ 90 ಜನ ವಿದ್ಯಾಬುದ್ಧಿಯಿಲ್ಲದ ಅಜ್ಞಾನದ ಮಂದಿ. ಅವರಲ್ಲಿ 100ಕ್ಕೆ 90 ಮಂದಿ ಹೆಬ್ಬೆಟ್ಟಿನ ರುಜುವಿನವರು. ಹಾಗಿರುವುದರಿಂದ ತಾವು ದಯಮಾಡಿ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಂಡು ತಮ್ಮ ಬಡ್ಜೆಟ್ ಖೋತಾವನ್ನು ಭರ್ತಿಮಾಡಿಕೊಳ್ಳಲು ತಾವು ಮತ್ತೆ ಯಾವುದಾದರೊಂದು ಬಿಲ್ಲನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ತಮ್ಮದು ರಾಮರಾಜ್ಯ-ರೈತನ ರಾಜ್ಯ ಎಂದು ಹೇಳುತ್ತಿರುವುದರಿಂದ ತಾವು ಆ ರೈತನಿಗೆ ಕಲ್ಯಾಣಮಾಡತಕ್ಕ ದೃಷ್ಟಿಯಿಂದ, ಆತನ ಬಗ್ಗೆ ಸ್ವಲ್ಪ ಹೆಚ್ಚು ಉದಾರಭಾವನೆಯನ್ನು ತೋರಿಸಬೇಕೆಂದೂ ತಾವು ರೈತರನ್ನು ಉದ್ಧಾರಮಾಡಬೇಕಾಗಿದ್ದರೆ ಈ ಬಿಲ್ಲನ್ನು ಖಂಡಿತ ವಾಪಸ್ ತೆಗೆದುಕೊಳ್ಳಬೇಕೆಂದೂ ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri D. DEVARAJ URS (Hunsur).—I would like to know from the Hon'ble Minister as to the number of agriculturists who are likely to come within the purview of this Bill.

ಅಧ್ಯಕ್ಷರು.—ಮಂತ್ರಿಗಳು ಇದರ ಮೇಲೆ ಮಾತನಾಡುವಾಗ ತಾವು ಅವುಗಳನ್ನು ಕೇಳಬಹುದು. ಈಗ ಬೇಡಿ.

[*Sri Laxman Balaji Birje spoke in Marathi. His speech is printed in the Appendix number to this volume.*]

5 P.M.

ಅಧ್ಯಕ್ಷರು.—ಈಗ ಶ್ರೀ ತಾರೇಗೌಡರ ಬಗ್ಗೆ ಪ್ರಸ್ತಾಪಮಾಡಬೇಕಾಗಿದೆ. ನಾನು ಏನು ಹೇಳಿದ್ದೇನೆ ಎಂಬುದನ್ನು ರಿಕಾರ್ಡು ತರಿಸಿ ನೋಡಿದೆ. ಶ್ರೀ ತಾರೇಗೌಡರು ಮಾತನಾಡುವವರು ಎಂದು ನಾನು ಹೇಳಿಲ್ಲ. ಆದರೆ ಮಾತನಾಡಲು ತಮಗೆ ಅವಕಾಶ ದೊರೆಯುವುದೆಂದು ಶ್ರೀ ತಾರೇಗೌಡರು ಭಾವಿಸಿಕೊಂಡಿರಬಹುದು. ಅದು ಏನೇ ಇರಲಿ ಶ್ರೀ ತಾರೇಗೌಡರು ಈಗ ಮಾತನಾಡಬಹುದು. As a special case I give him a chance.

ಶ್ರೀ ಟಿ. ತಾರೇಗೌಡ.—ಸ್ವಾಮಿ, ಈಗ ನಾನು ಸೂಚಿಸಲಿರುವ ಕೆಲವು ಬದಲಾವಣೆಗಳನ್ನು ಮಾನ್ಯ ಮಂತ್ರಿಗಳು ಹೃತ್ಪೂರ್ವಕವಾಗಿ ಒಪ್ಪಿಕೊಳ್ಳಬೇಕೆಂದು

ನಾನು ಕೇಳಿಕೊಳ್ಳುತ್ತೇನೆ. ಈ ಕಾನೂನಿನ ಪ್ರಕಾರ ಕೆಲವೊಂದು ವರ್ಗಗಳಲ್ಲಿ ತಾರತಮ್ಯ ವಿದೆ. ಹೊಗೆಸೊಪ್ಪಿನ ವಿಚಾರವನ್ನು ತೆಗೆದುಕೊಂಡರೆ ತಿನ್ನುವ ಟೊಬಾಕೋ ನಾಲ್ಕನೆಯ ವರ್ಗದಲ್ಲಿ ಮೊದಲು ಹಾಕಿದ್ದನ್ನು ಐದನೆಯ ವರ್ಗದಲ್ಲಿ ಹಾಕಿ 15 ಎಕರೆ ರಿಯಾಯಿತಿ ಇದೆ. ನಾಲ್ಕನೆಯ ವರ್ಗಕ್ಕೆ 12 ಎಕರೆ ರಿಯಾಯಿತಿ ಇದೆ. ನಿಪ್ಪಾಣಿ ಮತ್ತು ವರ್ಜಿನಿಯಾ ಟೊಬಾಕೋ ಮೂರನೆಯ ವರ್ಗದಲ್ಲಿ ಹಾಕಿ ಆರು ಎಕರೆ ರಿಯಾಯಿತಿ ಇದೆ. ಹೊಗೆಸೊಪ್ಪಿನ ವಿಚಾರದಲ್ಲಿ ಒಂದಕ್ಕೆ 15 ಎಕರೆ ಇದ್ದರೆ ಮತ್ತೊಂದಕ್ಕೆ ಆರು ಎಕರೆ ಕೊಟ್ಟಿರುವದು ಬಹಳ ತೊಂದರೆಯಾಗುವಂತೆ ಇದೆ. ಮತ್ತು ತಾರತಮ್ಯ ಭಾವತೋರಿಸಿದಂತಿದೆ.

ನನ್ನ ಶಿರಾ ಕ್ಷೇತ್ರದಲ್ಲಿ ಮಧ್ಯಮವರ್ಗದ ರೈತರು ಅನೇಕರು ಸಾಲಮಾಡಿ ವರ್ಜಿನಿಯ ಹೊಗೆಸೊಪ್ಪು ಹದಮಾಡುವ ಬ್ಯಾರನ್‌ಗಳನ್ನು ಕಟ್ಟಿಕೊಂಡು ವ್ಯವಸಾಯ ಮಾಡವವರಿಗೆ ಬಹಳ ತೊಂದರೆಯಾಗುತ್ತದೆ. ರೈತರು ನಷ್ಟದಲ್ಲಿದ್ದಾರೆ. ವರ್ಜಿನಿಯಾ ಹೊಗೆಸೊಪ್ಪಿನ ವ್ಯವಸಾಯದ ವಿಚಾರಗಳನ್ನು ಚೆನ್ನಾಗಿ ಅರಿತಿರುವವರಿಂದ ಸೆಲೆಕ್ಟ್ ಕಮಿಟಿಯಲ್ಲಿ ಸಲಹೆಗಳನ್ನು ಅರ್ಥಸಚಿವರು ಪಡೆಯಲಿಲ್ಲವೆಂದು ಕಾಣುತ್ತದೆ. ವರ್ಜಿನಿಯಾ ಹೊಗೆಸೊಪ್ಪಿನ ವ್ಯವಸಾಯದಲ್ಲಿ ಬಹಳ ಕಷ್ಟವಿದೆ. ಇದು ಬಹಳ ಜಾಗ್ರತೆ ರೋಗಗಳಿಗೆ ಗುರಿಯಾಗುತ್ತದೆ. ಮತ್ತು ಹೆಚ್ಚು ಮಳೆಯಾದರೂ ತೊಂದರೆ, ಮಳೆ ಬಾರದೆ ಹೋದರೂ ಇದರ ಬೆಳೆ ಹಾಳಾಗುತ್ತದೆ. ಇದನ್ನು ನಾಲ್ಕನೆಯ ವರ್ಗಕ್ಕೆ ಸೇರಿಸಿ ಎಂಟು-ಒಂಬತ್ತು ಎಕರೆವರೆಗೆ ರಿಯಾಯಿತಿ ಕೊಡಬೇಕಾದದ್ದು ಅಗತ್ಯ. ಚ್ಯೂಯಿಂಗ್ ವರ್ಜಿನಿಯಾ ಮತ್ತು ನಿಪ್ಪಾಣಿ ಹೊಗೆಸೊಪ್ಪಿನಲ್ಲಿ ವ್ಯತ್ಯಾಸ ಬಹಳ ಜಾಸ್ತಿಯಾಗಿದೆ. ಕನಿಷ್ಠಪಕ್ಷಕ್ಕೆ ಮೂರನೆಯ ವರ್ಗದಿಂದ ನಾಲ್ಕನೆಯ ವರ್ಗಕ್ಕೆ ಇವೆರಡು ಬಗೆಯ ಹೊಗೆಸೊಪ್ಪನ್ನೂ ಸೇರಿಸಿ ವಿನಾಯಿತಿ ಕೊಡತಕ್ಕ ತಿದ್ದುಪಡಿಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆದಾಯದ ಲಿಮಿಟ್ ಎಂದರೆ ವರಮಾನದ 3,500 ರೂಪಾಯಿಗಳ ಮೇಲೆ ಇರುವದಕ್ಕೆ ತೆರಿಗೆ ಕೊಡಬೇಕೆಂದು ನಮೂದಿಸಲಾಗಿದೆ. ಗ್ರಾಮಾಂತರಗಳಲ್ಲಿಯ ವ್ಯವಸಾಯಗಾರರ ಜೀವನವನ್ನು ಉತ್ತಮಪಡಿಸಬೇಕು. ಪಟ್ಟಣಗಳಲ್ಲಿ ವಿದ್ಯಾವಂತರು ಇದ್ದರೆ ಹಳ್ಳಿಗಳಲ್ಲಿ ವಿದ್ಯಾವಂತರ ಪ್ರಮಾಣ ಬಹಳ ಕಡಿಮೆ ಇದೆ. ಅದರಲ್ಲೂ ತಾಂತ್ರಿಕ ಶಿಕ್ಷಣ ಕಾಲೇಜುಗಳು ಪಟ್ಟಣಗಳಲ್ಲಿರುವದರಿಂದ ಗ್ರಾಮಾಂತರ ರೈತರಿಗೆ ಅವರ ಮಕ್ಕಳ ವಿದ್ಯಾಭ್ಯಾಸ ಪಟ್ಟಣಗಳಲ್ಲಾಗಬೇಕಾದ್ದರಿಂದ ಹಾಸ್ಟೆಲಿನ ಬೋರ್ಡಿಂಗ್ ಲಾಡ್ಜಿಂಗ್ ಚಾರ್ಜು ಕೊಡಬೇಕಾಗಿರುವದರಿಂದ ರೈತರಿಗೆ ಮಕ್ಕಳ ವಿದ್ಯಾಭ್ಯಾಸದ ಖರ್ಚು ಹೆಚ್ಚಾಗುತ್ತದೆ. ಆದ್ದರಿಂದ ಇವರಿಗೆ ಹೆಚ್ಚಿನ ವರಮಾನದ ರಿಯಾಯಿತಿ ಕೊಡಬೇಕಾಗಿದೆ. ಆದ್ದರಿಂದ ತಾಂತ್ರಿಕ ಶಿಕ್ಷಣ ಕಾಲೇಜುಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸಿ ಕಾಲೇಜು ಶಿಕ್ಷಣದ ಸೌಕರ್ಯವನ್ನು ಒದಗಿಸಿಕೊಡಬೇಕು. ಹಾಗೆ ಸ್ಥಾಪಿಸಿದಾಗ ಅವರ ಮಕ್ಕಳುಮರಿಗಳು ವಿದ್ಯಾವಂತರಾಗುವದಕ್ಕೆ ಅವಕಾಶ ದೊರೆಯುವುದು. ಹೀಗೆ ಗ್ರಾಮಾಂತರಗಳಲ್ಲಿ ಸ್ಥಾಪನೆಯಾಗುವವರೆಗಾದರೂ ಈಗ ಇಡಲಾಗಿರುವ ಆದಾಯದ ಮಿತಿಯನ್ನು 3,500ರಿಂದ ಅದನ್ನು 4,200 ರೂಪಾಯಿವರೆಗೆ ಮಾಡುವುದು ಸೂಕ್ತವಾಗಿದೆ. ದೇಶದ ಹಿತದ ದೃಷ್ಟಿಯಿಂದ ಈ ಸಲಹೆಯು ವಿರೋಧ ಪಕ್ಷದವರಿಂದ ಬಂದಿರಲಿ ಅಥವಾ ಕಾಂಗ್ರೆಸ್ ಪಕ್ಷದವರಿಂದ ಇರಲಿ ಇದನ್ನು ಒಪ್ಪಿಕೊಳ್ಳಬೇಕು. ಈ ಸೂಕ್ತ ಸಲಹೆಯನ್ನು ಒಪ್ಪಿಕೊಂಡರೆ ಕಾಂಗ್ರೆಸ್ ಸಂಸ್ಥೆಗೆ ಧಕ್ಕೆ ಬರಲಾರದು. ಗೌರವವೇ ಜಾಸ್ತಿಯಾಗುತ್ತದೆಂದು ನಾನು ವಿನಯಪೂರ್ವಕವಾಗಿ ತಿಳಿಸಲು ಇಚ್ಛಿಸುತ್ತೇನೆ. ಯಾರಿಗೆ ಹೆಚ್ಚು ಆದಾಯ ಬರುತ್ತದೆಯೋ ಹಾಗು ಹೆಚ್ಚು ತೆರಿಗೆ ಕೊಡಲು ಶಕ್ತಿಇರುವುದೋ ಅಂಥವರ ಮೇಲೆ ಜಾಸ್ತಿ ತೆರಿಗೆ ಬೀಳುವಂತೆ ಮಾಡಬೇಕು. ಆಹಾರ ದಿನಸುಗಳನ್ನು ಬೆಳೆದು ಹೆಚ್ಚು ಆದಾಯ ಬಂದು ಶಕ್ತಿವಂತರು, ಸಾಹುಕಾರರು, ದೊಡ್ಡ ಜಮೀನುದಾರರು ಆಗಿದ್ದವರು, ಏತಕ್ಕೆ ಜಾಸ್ತಿ ತೆರಿಗೆ ಭಾರ ಹೊರಬಾರದು ! ಇದನ್ನು ನ್ಯಾಯದೃಷ್ಟಿಯಿಂದ ನಾನು ಕೇಳುತ್ತಿದ್ದೇನೆ. ಯಾರು ಜಾಸ್ತಿ ತೆರಿಗೆ ಕೊಡಬಲ್ಲರು ಯಾರಿಗೆ ಜಾಸ್ತಿ ಆದಾಯ ಬರುತ್ತದೆ ಎಂಬುದನ್ನು ನೋಡಿಕೊಂಡು ಅಂಥವರು ಆಹಾರ ದಿನಸುಗಳ ಬೆಳೆ ಮಾಡುವವರಾಗಿದ್ದರೂ ಅವರೂ ವ್ಯವಸಾಯದ ಆದಾಯತೆರಿಗೆ ಕೊಡಬೇಕಾದದ್ದು ನ್ಯಾಯವೆಂದು ನನ್ನ ವೈಯಕ್ತಿಕ ಭಾವನೆ. ಕಡಿಮೆ ಆದಾಯ ಬರತಕ್ಕಂಥವರಿಗೆ ಕಡಿಮೆ ತೆರಿಗೆ ಇರಬೇಕು. ಆದಕಾರಣ ವರಮಾನದ ಪ್ರಮಾಣದ ಮೇಲೆ ತೆರಿಗೆ ವಿಧಿಸಬೇಕು. ಸದಸ್ಯರು ಮಾಡಿದ ಸಲಹೆಗಳನ್ನು ಗಮನದಲ್ಲಿ ತೆಗೆದುಕೊಂಡು ಬಡವರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಕೊನೆಯದಾಗಿ ಮಂತ್ರಿಯವರಿಗೆ ನಾನು ಪ್ರಾರ್ಥಿಸುತ್ತೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—Hon'ble Members know that a closure motion had already been moved. I do not think it need be put to the House and accepted. So instead of going into the merits or demerits of the closure motion I call upon the Hon'ble Finance Minister to reply.

ಶ್ರೀ ಟಿ. ಮರಿಯಪ್ಪ.—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಆರಿಸಿದ ಸಮಿತಿಯವರು ಇಟ್ಟಿರತಕ್ಕಂಥ ವ್ಯವಸಾಯ ಉತ್ಪನ್ನ ತೆರಿಗೆಯ ಮಸೂದೆಗೆ ಮಾನ್ಯ ಸದಸ್ಯರುಗಳು ವಿರೋಧಮಾಡಿ ಬಹಳ ತೀವ್ರವಾಗಿ ಚರ್ಚೆಮಾಡಿದ್ದಾರೆ. ಒಬ್ಬ ಸದಸ್ಯರು ಮಾಡಿರತಕ್ಕಂಥ ಟೀಕೆಯನ್ನು ಇನ್ನೊಬ್ಬ ಸದಸ್ಯರು ಅದನ್ನೇ ಪ್ರತಿಪಾದಿಸಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಬರ್ಜೆ ಅವರು ಮರಾಟಿಯಲ್ಲಿ ಭಾಷಣ ಮಾಡಿದರು. ನನಗೆ ಮರಾಟಿ ಭಾಷೆ ಬಾರದೇ ಇದ್ದರೂ, ಅವರು ಏನು ಹೇಳಿದ್ದಾರೆ ಎಂಬುದನ್ನು ನನ್ನ ಸ್ನೇಹಿತರ ಸಹಾಯದಿಂದ ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸದಸ್ಯರು ಮಾಡಿದ ಭಾಷಣವು ಕೇಳುವದಕ್ಕೆ ಚೆನ್ನಾಗಿತ್ತು. ಷೆಡೂಲದಲ್ಲಿ ಕೊಟ್ಟಿರತಕ್ಕಂಥ ಜಮೀನು ಪ್ರಮಾಣ ಏನೂ ಪ್ರಯೋಜನವಾಗುವುದಿಲ್ಲವೆಂದು ಅವರು ಹೇಳುತ್ತಾರೆ ಆದಾಯದ ಲೆಕ್ಕಾಚಾರ ಸಾಗುವಳಿಯ ಪ್ರಮಾಣ ಇವು ಕಾನೂನಿನಲ್ಲಿ ಮಾಡಿರತಕ್ಕಂಥ ವಿಧಾನದಿಂದ ಬಹಳ ಜನರು ತಪ್ಪಿಸಿಕೊಂಡುಬಿಡುತ್ತಾರೆ, ಮತ್ತು ಈ ಬಗ್ಗೆ ಸಾಕಷ್ಟು ಗಮನ ತೆಗೆದುಕೊಂಡಿಲ್ಲ, ಹಾಗು ಬಡವರ ತಲೆಯ ಮೇಲೆಯೇ ಹೆಚ್ಚಾಗಿ ಭಾರ ಬೀಳುತ್ತದೆ ಎಂಬುದಾಗಿ ಅವರು ಹೇಳಿದರು.

ಆದರೆ ನಾನು ಹೇಳುತ್ತೇನೆ. ಜಮೀನುದಾರರನ್ನು ಅನುಸರಿಸಿ ನಾವು ಈ ಕಾನೂನಿನಲ್ಲಿ

(ಶ್ರೀ ಟಿ. ಮರಿಯಪ್ಪ)

ಏನನ್ನೂ ಮಾಡುವುದಕ್ಕೆ ಹೋಗಿಲ್ಲ, ಏನನ್ನೂ ಮಾಡಿಲ್ಲ. ನಾನು ಮೊದಲು ಈ ಮಸೂದೆ ಈ ಸಭೆಯ ಮುಂದೆ ಬಂದಾಗಲೂ ಹೇಳಿದ್ದೇನೆ. ಮತ್ತು ಆರಿಸಿದ ಸಮಿತಿಯಲ್ಲಿ ಚರ್ಚೆ ಬಂದಾಗಲೂ ಹೇಳಿದ್ದೇನೆ. ನಮಗೆ ಹಣ ನಿಜವಾಗಿ ಬರತಕ್ಕದ್ದು ಪ್ಲಾಂಟೇಷನ್ ಗ್ರೂಪ್ಸ್‌ನಿಂದ ಈ ವಿಷಯವನ್ನೆಲ್ಲ ವಿಶಿಷ್ಟ ಸಮಿತಿಯವರು ಚೆನ್ನಾಗಿ ಲೆಕ್ಕಾಚಾರ ಮಾಡಿ ಆ ರೀತಿ ಮಾಡಲಾಯಿತು. ಕಾಫೀ ಬೋರ್ಡ್‌ನಿಂದ ಇವರ ವರಮಾನ ಎಷ್ಟು ಎನ್ನುವುದು ಗೊತ್ತಾಗಿದೆ. ಇದು ಆರ್ಗನೈಸ್ಡ್ ಇಂಡಸ್ಟ್ರಿ. ಆದಾಯ ಖರ್ಚು ಇವುಗಳನ್ನು ನೋಡಿ ನಿವ್ವಳ ಆದಾಯದ ಮೇಲೆ ಹಾಕುವುದಕ್ಕೆ ಅವಕಾಶವಿದೆ. ಆದರೆ ಇತರ ಬೆಳೆಗಳ ಮೇಲೆ ಈ ರೀತಿಯಾಗಿ ವರಮಾನದಂಡವನ್ನು ಉಪಯೋಗಿಸುವುದು ಬಹಳ ಕಷ್ಟ. ಇದನ್ನೆಲ್ಲ ಬಹಳ ದೀರ್ಘವಾಗಿ ಸಮಿತಿಯವರು ಪರಿಶೀಲಿಸಿದ್ದಾರೆ. ಅವೆಲ್ಲವನ್ನೂ ಕುರಿತು ಮಾನ್ಯ ಸದಸ್ಯರು ಇಲ್ಲಿ ಮಾತನಾಡಿದ್ದಾರೆ. ಈ ವರದಿಯನ್ನು ಪೂರ್ತಿಯಾಗಿ ಓದಿದ್ದರೆ ಈಗ ಬಂದಿರುವ ವಾದಗಳಿಗೆಲ್ಲ ಸರಿಯಾದ ಉತ್ತರಗಳು ಅಲ್ಲೇ ಸಿಕ್ಕುತ್ತಿದ್ದವು. ನಮ್ಮ ಶ್ರೀನಾರಾಯಣಗೌಡರು ಇಲ್ಲಿ ರಾಮದೇವರ ಕಥೆಯನ್ನು ಹೇಳಿದರು. ರಾಮ ದೇವರ ಕಥೆಗೂ ಅವರು ಹೇಳುವ ವಾದಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಅದು ಹೊಂದಿಕೊಳ್ಳುವುದೇ ಇಲ್ಲ. ಅಲ್ಲದೆ, ಅವರೇ ರಾಮ ರಾಜ್ಯ, ರೈತರ ರಾಜ್ಯ, ಎಂದು ಏನೇನೋ ಹೇಳಿ, ರಾಮದೇವರ ಕಾಲದಲ್ಲಿ ಕುಂಬಳದ ಬೀಜವನ್ನು ಕೊಟ್ಟು ಚಿನ್ನ, ಬೆಳ್ಳಿ, ಸಂಪಾದಿಸಿದರೆಂದು ಹೇಳಿದರು. ಇಲ್ಲಿ ನೂರಕ್ಕೆ ತೊಂಬತ್ತು ಭಾಗ ರೈತರ ತಂಟೆಗೇ ಹೋಗಿಲ್ಲ. ಒಂದುವೇಳೆ ಆದಾಯ ಬಂದರೂ ಅವರಾಗಿಯೇ ಎಲ್ಲ ದುಡ್ಡನ್ನೂ ಕೊಟ್ಟುಬಿಡುತ್ತಾರೆ. ಎಲ್ಲ ರೈತರಿಗೂ ತೊಂದರೆಯಾಗಬಾರದು ಎಂದು ಎಕ್ಸೆಂಪ್ಷನ್ ಲಿಮಿಟ್ಟು ಇಟ್ಟು ಕಾಂಪೋಜಿಷನ್ನಿಗೂ ಅನುಕೂಲ ಮಾಡಿದ್ದೇವೆ. ಶ್ರೀ ನಾರಾಯಣಗೌಡರು ಪ್ರಥಮತಃ ಈ ಸಭೆಗೆ ಬಂದಿದ್ದಾರೆ. ಏನು ಹೇಳಿದರೂ ಆಗುತ್ತದೆ ಎಂದು ತಿಳಿದು, ಅದರಿಂದ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ತಿಳಿಯದೆ ಕಾಂಗ್ರೆಸ್ ರಾಜ್ಯದಲ್ಲಿ ಕುಂಬಳ ಬೀಜ ಕೊಡುತ್ತಾರೆ ಎಂದು ಹೇಳಿದರೆ ನನಗೇನೂ ಅರ್ಥವಾಗುವುದಿಲ್ಲ. ಶ್ರೀ ನಾರಾಯಣಸ್ವಾಮಿಯವರು ಅಸೆಂಬ್ಲಿ ಸದಸ್ಯರಾಗಿದ್ದಾರೆ. ಅವರೇ ಹೀಗೆ ಬಡವರ ಮೇಲೆ ಬೀಳುತ್ತದೆ ಎಂದು ಹೇಳಿದರೆ ಹೇಗೆ? ಇವೊತ್ತು 25 ಎಕರೆಗಳಲ್ಲಿ ಮಾವಿನ ತೋಪು ಬೆಳೆಯುವವರು ಎಷ್ಟು ಜನರಿದ್ದಾರೆ; ಇವೊತ್ತೆಲ್ಲ ಹುಡುಕಿದರೆ ಒಂದು ಹತ್ತು ಜನ ಸಿಕ್ಕಬಹುದು. ಅವರೆಲ್ಲ ತಪ್ಪಿಸಿಕೊಳ್ಳಬಹುದು ಎಂತಲೇ......

ಶ್ರೀ ಟಿ. ಎಲ್. ನಾರಾಯಣಸ್ವಾಮಿ.—ಕಾನೂನಿನಲ್ಲಿ ಇರತಕ್ಕ ಒಂದು ಲೋಪವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ಶ್ರೀ ಟಿ. ಮರಿಯಪ್ಪ.—ನಾನು ಹೇಳುತ್ತೇನೆ. ತಾವು ಇನ್ನೊಂದು ಸೆಕ್ಷನ್ನನ್ನು ಓದಿದ್ದರೆ ಗೊತ್ತಾಗುತ್ತಿತ್ತು. ಯಾವ ಮನುಷ್ಯನೇ ಆಗಲಿ ಲೆಕ್ಕ ಇಡತಕ್ಕ ರೈತನು ಒಂದು ಅರ್ಜಿ ಹಾಕಿ ತಾನು ಜಾಸ್ತಿ ಬೆಳೆದಿಲ್ಲ ಎಂದು ರುಜುವಾತು ಮಾಡಬಹುದು. ಲೆಕ್ಕವಿಡದೆ ಕಾಂಪೌಂಡು ಮಾಡಿಕೊಂಡು ಹೋಗುವವನಿಗೆ ಇದು ಅನ್ವಯಿಸುತ್ತದೆಯೇ ಹೊರತು ಬಾಕಿಯವರಿಗೆ ಅನ್ವಯಿಸುವುದಿಲ್ಲ. ಇವೊತ್ತಿನ ದಿವಸ ಚನ್ನಪಟ್ಟಣದಲ್ಲಿ ಒಂದು ಮಾವಿನ ಮರಕ್ಕೆ 25 ರಿಂದ 100 ರೂಪಾಯಿಗಳವರೆಗೆ ಗುತ್ತಿಗೆ ಕೊಟ್ಟಿದ್ದಾರೆ. ಅದು ನನಗೆ ಗೊತ್ತಿದೆ. ಅದೇ ರೀತಿ ಶ್ರೀನಿವಾಸಪುರದಲ್ಲಿಯೂ ಕೂಡ ಮಾವಿನ ಮರಗಳಿವೆ. ಅಲ್ಲಿ ಕೂಡ ಸರಾಸರಿ ಗಿಡಕ್ಕೆ ಹತ್ತರಿಂದ ಹದಿನೈದು ರೂಪಾಯಿಗಳಿಗೆ ಕಡಮೆ ಇಲ್ಲದಂತೆ ಬರುವುದೂ ನನಗೆ ಗೊತ್ತಿದೆ. ಆದರೆ ತಾವು ಯಾವುದೋ ಒಂದು ಉದಾಹರಣೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಜನರಲೈಸು ಮಾಡಿ ಹೇಳುತ್ತಿದ್ದೀರಿ. ಇನ್ನೂ ಒಂದು ವಿಷಯ ಹೇಳುತ್ತೇನೆ. ಇಪ್ಪತ್ತೈದು ಎಕರೆಗಳ ಮೇಲೆ ಇರುವ ಮಾವಿನ ತೋಟ ಬಹಳ ಕಡಮೆ. ಒಂದು ವೇಳೆ ಲೆಕ್ಕ ಇಟ್ಟು ಎಷ್ಟು ಫಸಲು ಬರುತದೆ ಹೆಚ್ಚು ದುಡ್ಡು ಬರುವುದಿಲ್ಲ ಎನ್ನುವ ಸಂದರ್ಭದಲ್ಲಿ ಕಾಂಪೌಂಡು ಮಾಡಿಕೊಳ್ಳಬೇಕಾಗಿಲ್ಲ. ಐವತ್ತು ಎಕರೆ ಇರುವವರೂ ಕಾಂಪೌಂಡು ಮಾಡಿಕೊಳ್ಳಬೇಕಾಗಿಲ್ಲ. ನೂರು ಎಕರೆ ಇರುವ ರೈತರೂ ಮಾಡಿಕೊಳ್ಳಬೇಕಾಗಿಲ್ಲ. ಅವರಾಗಿಯೇ ಕೇಳಿಕೊಂಡು ಬೇಕಾದರೆ ಮಾಡಿಕೊಳ್ಳಬಹುದು. ಅದು ಪ್ಯೂರ್ ಆಪ್ಷನ್. ಒಂದು ಉದಾಹರಣೆ ಹೇಳುತ್ತೇನೆ, ಇದೇ ಹಳೆಯ ಮೈಸೂರಿನಲ್ಲಿ ಎಷ್ಟೋ ಕಡೆ ಲೆಕ್ಕವನ್ನು ಇಟ್ಟುಕೊಳ್ಳದೆ ಕಾಂಪೌಂಡು ಮಾಡಿಕೊಳ್ಳಬೇಕೆಂದು ಹೇಳಿ ದುಡ್ಡು ತೆಗೆದುಕೊಂಡು ಹೋಗಿ ಕಟ್ಟಿಬಿಡುತ್ತಿದ್ದರು. ಇಪ್ಪತ್ತೈದು ಎಕರೆಯಿಂದ 100 ಎಕರೆವರೆಗೆ ಆದಾಯ ಎಷ್ಟು ವಸೂಲು ಆಯಿತು, ಎಷ್ಟು ಖರ್ಚಾಯಿತು ಎನ್ನುವ ಲೆಕ್ಕವನ್ನು ಇಡದೆ ಸುಮ್ಮನೆ ಜಾಸ್ತಿಯಾಗಿ ಮಾಡಿದ್ದೇವೆ ಎಂದು ಸಾಮಾನ್ಯವಾಗಿ ಹೇಳಿದರೆ ಸರಿಹೊಂದುವುದಿಲ್ಲ. ದೊಡ್ಡದಾಗಿ ಎಲ್ಲರೂ ಮಾತನಾಡಬಹುದು. ಐದು ಪರ್ಸೆಂಟು ಜನರ ವಿಚಾರ ನೀವು ಮಾತನಾಡುತ್ತಿದ್ದೀರಿ. ತೊಂಭತ್ತೈದು ಪರ್ಸೆಂಟು ಎಕ್ಸೆಂಪ್ಟ್ ಆಗಿದ್ದಾರೆ, ಅವರ ಪರವಾಗಿ ಏನೂ ಅನ್ನುವುದಿಲ್ಲ. ಇದಕ್ಕೆ ಏನು ಹೇಳೋಣ? ಬಡವರ ಹೆಸರಿನಲ್ಲಿ ಈ ಐದು ಪರ್ಸೆಂಟು ಜನರ ಪರವಾಗಿ ವಾದಿಸುತ್ತಾರೆ. ಶ್ರೀ ಪುಟ್ಟರಾಮಯ್ಯನವರು ಇಲ್ಲದ್ದರೆ ಚೆನ್ನಾಗಿರುತ್ತಿತ್ತು. ಕೆಲವರ ಅನುಕೂಲಕ್ಕಾಗಿ ಈ ಕಾನೂನನ್ನು ಮಾಡಿದ್ದೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಬೇರೆ ಕಡೆ ಇರುವ ಕಾನೂನುಗಳನ್ನು ಸ್ಟಡಿ ಮಾಡಿ ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ. There would have been some medium of truth in it; ತಾವು ಮದರಾಸನ್ನು ಅನುಸರಿಸಿ ಎಂದು ಹೇಳಬಹುದಾಗಿತ್ತು. ಮದರಾಸಿನಲ್ಲಿ ಒಂದು ರೀತಿ ಇದೆ. ಕೇರಳದಲ್ಲಿ ಸ್ಟೀಪ್ ಕಟ್ ಇದೆ. ಇದರ ಜೊತೆಗೆ ಇನ್ನೊಂದು ವಿಷಯ ಹೇಳುತ್ತೇನೆ. ಡಿಸ್ಸೆಂಟಿಂಗ್ ನೋಟಿನಲ್ಲಿ ಎಷ್ಟು ಪ್ರಸ್ತಾಪ ಮಾಡಿದ್ದಾರೆಯೋ ಅಷ್ಟು ಮಾತ್ರ ಇಲ್ಲಿ ಪ್ರಸ್ತಾಪಮಾಡಬೇಕು. ಇಲ್ಲಿ ಈಗ ನಮ್ಮ ಮುಂದೆ ಇರುವುದು ಸೆಲೆಕ್ಟು ಕಮಿಟಿಯ ರಿಪೋರ್ಟು. ಹಿಂದೆ ಬಂದಿದ್ದ ಮಸೂದೆಗೆ ತಿದ್ದುಪಡಿಯಾಗಿ ಈಗ ಇದು ಬಂದಿದೆ. ಹಿಂದೆ ಜನರಲ್ ಡಿಸ್‌ಕಷನ್ ಕಾಲದಲ್ಲಿ ಚರ್ಚೆಮಾಡಿದ ಹಾಗೆ ಈಗ ಮಾಡಿದರೆ ಅರ್ಥವಿರುವುದಿಲ್ಲ. ಅಥವಾ ಈ ಬಗ್ಗೆ ಯಾರಾದರೂ ಸದಸ್ಯರು "that the Bill be again circulated or the clauses be omitted or a steep rate may be imposed." ಎಂದು ಒಂದು ತಿದ್ದುಪಡಿಯನ್ನು ತಂದಿದ್ದರೆ ಯೋಚನೆ ಮಾಡಬಹುದಾಗಿತ್ತು. ನಾನು ಈಗ ಏನು ಮಾಡಲಿ? I have no power. ನೀವು ಈಗ ತರುವ ಅಮೆಂಡ್‌ಮೆಂಟುಗಳನ್ನು ಓಟಿಗೆ ಹಾಕುವುದಕ್ಕಾಗುವುದಿಲ್ಲ. ಮುಂದೆ ಯೋಚನೆ ಮಾಡೋಣ ಎಂದು ಬಹಳ ವಿನಯದಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಯಾವ ಯಾವ ಸ್ಟೇಜಿನಲ್ಲಿ ಏನೇನು ಆರ್ಗ್ಯುಮೆಂಟುಗಳನ್ನು

ಮತ್ತು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳ ಬಹುದೋ ಅದರಂತೆ ಮಾಡಬೇಕು. ಈಗ ತಾವು 4,200 ರೂಪಾಯಿಗಳಿಗೆ ಅಮೆಂಡುಮೆಂಟನ್ನು ಇವೊತ್ತು ತಂದರೆ ಓಟಿಗೆ ಹಾಕುವುದಕ್ಕಾಗುವುದಿಲ್ಲ.

ಶ್ರೀ ವೈ. ವೀರಪ್ಪ.—ತಿದ್ದುಪಡಿಯಾದ ಮಸೂದೆ ಯೆಲ್ಲ ಪಂಡಿತರು ತಯಾರು ಮಾಡಿದ್ದೋ?

ಶ್ರೀ ಟಿ. ಮರಿಯಪ್ಪ.—ತಿದ್ದುಪಡಿಯಾದ ಮಸೂದೆ ಸಭೆಯ ಮುಂದೆ ಬಂದ ಕಾಲದಲ್ಲಿ ಅದನ್ನು ಅಂಗೀ ಕರಿಸುವ ಸಂದರ್ಭದಲ್ಲಿ ಈರೀತಿ ಮಾತನಾಡಬಾರದು. ನಾನು ಆಗಲೇ ಹೇಳಿದ್ದೇನೆ. ಸೆಲೆಕ್ಟ್ ಕಮಿಟಿಯವ ರಿಂದ ಒಪ್ಪಿ ಬಂದಿರುವ ತಿದ್ದುಪಡಿಗಳನ್ನು ಮಾತ್ರ ಇಲ್ಲಿ ಓಟಿಗೆ ಹಾಕಬೇಕು.

ಹೀಗಿರುವಾಗ ಶ್ರೀಮಾನ್ ಪುಟ್ಟಣ್ಣನವರು ರೂಲ್ಸ್ ಮಾಡಬೇಕು ಎಂದು ಹೇಳಿದರೇ ವಿನಾ ಇಂತಿಂಥದ್ದಕ್ಕೆ ಮಾಡಿ ಎಂದು ಹೇಳಲಿಲ್ಲ. ಹಾಗೆ ಹೇಳದೆ ನಮ್ಮನ್ನು ಆಕ್ಷೇಪಣೆಮಾಡಿದರೆ ಏನು ಪ್ರಯೋಜನ? ಬಡವರ ಮೇಲೆ ಟ್ಯಾಕ್ಸ್ ಬಿತ್ತು ಎಂದು ಸುಮ್ಮನೆ ಹೇಳುತ್ತೀರಿ!

Sri B. K. PUTTARAMIYA.—I challenge.

